ಮುರಗೋಡ ಮಹಾದೇವಪ್ಪನವರ ಚಳುವಳಿಗಳು

ಕನ್ನಡ ವಿಷಯದಲ್ಲಿ ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸಿದ ಸಂಶೋಧನ ನಿಬಂಧ

ಸಂಶೋಧಕರು

ಶ್ರೀ ಯಂಕಣ್ಣ ಸಂಗಪ್ಪ ನವಲಗಟ್ಟಿ

ಬಿ.ಎಲ್.ಡಿ. ಶಿಕ್ಷಣ ಸಂಸ್ಥೆಯ ವಾಣಿಜ್ಯ ಬಿ.ಹೆಚ್.ಎಸ್. ಕಲೆ
ಟಿ.ಜಿ.ಪಿ. ವಿಜ್ಞಾನ ಮಹಾವಿದ್ಯಾಲಯ, ಜಮಖಂಡಿ – 587 301.
ತಾ॥ ಜಮಖಂಡಿ ಜಿ॥ ಬಾಗಲಕೋಟ

ನೊಂದಣಿ ಸಂಖ್ಯೆ : ಬಿ.ಆರ್.ಡಿ.ಎಸ್./ಕೆ೦೦೭

ಮಾರ್ಗದರ್ಶಕರು

ಡಾ. ಆರ್. ಬಿ. ಚಿಲಮಿ

ಶ್ರೀ ಬಿ. ಆರ್. ದರೂರ
ಸಂಶೋಧನ ಕೇಂದ್ರ.,
ಹಾರೂಗೇರಿ ಜಿ. ಬೆಳಗಾವಿ

ಶ್ರೀ ಬಿ. ಆರ್. ದರೂರ ಸಂಶೋಧನ ಕೇಂದ್ರ,
ಹಾರೂಗೇರಿ ಜಿ. ಬೆಳಗಾವಿ

ಮಾನ್ಯತೆ : ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೦೧೧

935

ಮುರಗೋಡ ಮಹಾದೇವಪ್ಪನವರ ಚಳುವಳಿಗಳು

ಕನ್ನಡ ವಿಷಯದಲ್ಲಿ ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಸಂಶೋಧನ ನಿಬಂಧ

ಸಂಶೋಧಕರು

ಶ್ರೀ ಯಂಕಣ್ಣ ಸಂಗಪ್ಪ ನವಲಗಣ್ಣಿ

ಬಿ.ಎಲ್.ಡಿ. ಶಿಕ್ಷಣ ಸಂಸ್ಥೆಯ ವಾಣಿಜ್ಯ ಬಿ.ಎಚ್.ಎಸ್. ಕಲೆ

ಟಿ.ಜಿ.ಪಿ. ವಿಜ್ಞಾನ ಮಹಾವಿದ್ಯಾಲಯ, ಜಮಖಂಡಿ – 587 301.

ತಾ॥ ಜಮಖಂಡಿ ಜಿ॥ ಬಾಗಲಕೋಟ

ಮಾರ್ಗದರ್ಶಕರು

ಡಾ. ಆರ್, ಬಿ. ಚಿಲುಮಿ

ಶ್ರೀ ಬಿ. ಆರ್. ದರೂರ

ಸಂಶೋಧನ ಕೇಂದ್ರ,,

ಹಾರೂಗೇರಿ ಜಿ. ಬೆಳಗಾವಿ

ಶ್ರೀ ಬಿ. ಆರ್. ದರೂರ ಸಂಶೋಧನ ಕೇಂದ್ರ,

ಹಾರೂಗೇರಿ ಜಿ. ಬೆಳಗಾವಿ

ಮಾನ್ಯತೆ : ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೦೧೧

ಪ್ರಮಾಣ ಪತ್ರ

‘ಮುರಗೋಡ ಮಹಾದೇವಪ್ಪನವರ ಚಳುವಳಿಗಳು’ ಎಂಬ ಶೀರ್ಷಿಕೆಯ ನಿಬಂಧವನ್ನು **ಡಾ. ಆರ್. ಬಿ. ಚಿಲುಮಿ** ಅವರ ಮಾರ್ಗದರ್ಶನದಲ್ಲಿ ನಾನು ಸಿದ್ಧಪಡಿಸಿದ್ದೇನೆ. **ಹಾರೂಗೇರಿಯ ಶ್ರೀ ಬಿ. ಆರ್. ದರೂರ ಸಂಶೋಧನ ಕೇಂದ್ರದ** ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಕನ್ನಡ ವಿಷಯದಲ್ಲಿ ಎಂ.ಫಿಲ್. ಪದವಿಗಾಗಿ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ನಿಬಂಧವನ್ನು ಈ ಮೊದಲು ಇಡಿಯಾಗಿಯಾಗಲಿ, ಬಿಡಿಯಾಗಿಯಾಗಲಿ ನಾನು ಪ್ರಕಟಿಸಿರುವುದಿಲ್ಲವೆಂದೂ ಹಾಗೂ ಯಾವುದೇ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದೂ ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸ್ಥಳ : ಹಾರೂಗೇರಿ
ದಿನಾಂಕ : ೧೦-೦೬-೨೦೧೧

ಶ್ರೀ ಯಂಕಣ್ಣ ಸಂಗಪ್ಪ ನವಲಗಣ್ಣ
ಸಂಶೋಧನ ವಿದ್ಯಾರ್ಥಿ
ಶ್ರೀ ಬಿ.ಆರ್. ದರೂರ
ಸಂಶೋಧನ ಕೇಂದ್ರ, ಹಾರೂಗೇರಿ

ಧೃಢೀಕರಣ ಪತ್ರ

ಶ್ರೀ ಯಂಕಣ್ಣ ಸಂಗಪ್ಪ ನವಲಗಣ್ಣ ಇವರು 'ಮುರಗೋಡ ಮಹಾದೇವಪ್ಪನವರ ಚಳುವಳಿಗಳು' ಎಂಬ ಶೀರ್ಷಿಕೆಯ ನಿಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಹಾರೂಗೇರಿಯ **ಶ್ರೀ ಬಿ. ಆರ್. ದರೂರ ಸಂಶೋಧನ ಕೇಂದ್ರದ** ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಕನ್ನಡ ವಿಷಯದಲ್ಲಿ ಎಂ.ಫಿಲ್. ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ನಿಬಂಧವನ್ನು ಇವರು ಈ ಮೊದಲು ಇಡಿಯಾಗಿಯಾಗಲಿ, ಬಿಡಿಯಾಗಿಯಾಗಲಿ ಎಲ್ಲಿಯೂ ಪ್ರಕಟಿಸಿಲ್ಲವೆಂದೂ ಯಾವುದೇ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದೂ ದೃಢೀಕರಿಸುತ್ತೇನೆ.

ಸ್ಥಳ : ಹಾರೂಗೇರಿ
ದಿನಾಂಕ : ೧೦-೦೬-೨೦೧೧

ಡಾ. ಆರ್. ಬಿ. ಚಿಲಮಿ
ಮಾರ್ಗದರ್ಶಕರು,
ಶ್ರೀ ಬಿ. ಆರ್. ದರೂರ
ಸಂಶೋಧನ ಕೇಂದ್ರ, ಹಾರೂಗೇರಿ

• ಪರಿವಿಡಿ •

ನಿವೇದನೆ

ನಾನು ಜಮಖಂಡಿಯ ಬಿ.ಎಲ್.ಡಿ. ಶಿಕ್ಷಣ ಸಂಸ್ಥೆಯ ವಾಣಿಜ್ಯ ಬಿ.ಎಚ್.ಎಸ್. ಕಲಿ ಮತ್ತು ಟಿ.ಜಿ.ಪಿ. ವಿಜ್ಞಾನ ಮಹಾವಿದ್ಯಾಲಯದಲ್ಲಿ ಕನ್ನಡ ಉಪನ್ಯಾಸಕನಾಗಿ ಸೇವೆ ಸಲ್ಲಿಸುತ್ತಿದ್ದು, ಸಂಶೋಧನೆಯ ಗೀಳು ಹೊಂದಿದ್ದೆ. ನಾನು **'ಮುರಗೋಡ ಮಹಾದೇವಪ್ಪನವರ'** ಕುರಿತು ಸಂಶೋಧನೆ ಹಿಂದೆ ಎಂದೋ ಆಗಬೇಕಿತ್ತು. ಅನಿವಾರ್ಯ ಕಾರಣದಿಂದ ಅದರಲ್ಲಿ ವಿಫಲನಾದೆ. ಇಂದು ನನಗೆ ಹಲವಾರು ಮಾರ್ಗದರ್ಶಕರ, ಸ್ನೇಹಿತರ, ಹಿತಚಿಂತಕರ, ಸಹೃದಯಿಗಳ, ಅಭಿಮಾನಿಗಳ, ವತ್ತಾಸೆಯಿಂದ ಸಹಾಯ ಸಹಕಾರದಿಂದ ಈ ನಿಬಂಧ ಸಾಕಾರಗೊಂಡಿದೆ. ನನಗೆ ತುಂಬಾ ಸಂತೋಷವೆನಿಸುತ್ತದೆ.

ಆಕಸ್ಮಿಕ ಯಾವುದೋ ಕೆಲಸಕ್ಕೆ ನಮ್ಮ ಮಹಾವಿದ್ಯಾಲಯಕ್ಕೆ ಬಂದಿದ್ದ ನನ್ನ ಆತ್ಮೀಯ ಸ್ನೇಹಿತರು, ಪ್ರಾಧ್ಯಾಪಕರು ಮತ್ತು ಬಿ.ಆರ್. ಧರೂರ ಸಂಶೋಧನ ಕೇಂದ್ರದ ನಿರ್ದೇಶಕರಾದ ಡಾ॥ ವ್ಹಿ. ಎಸ್. ಮಾಳಿ ಸರ್‌ರವರು. ನಮ್ಮ ಮಹಾವಿದ್ಯಾಲಯದಲ್ಲಿ ಹಂಪಿ ಕ.ವಿ.ವಿ. ಸಂಶೋಧನೆ ಕೇಂದ್ರವಿದೆ. ನೀವು ಎಂ.ಫಿಲ್. ಮಾಡಿರಿ ಎಂದು ಹೇಳಿದರು. ನನಗೆ ಪ್ರತಿಯೊಂದಕ್ಕೂ ಸಹಾಯ, ಸಹಕಾರ ಮಾಡಿದ ಮಾಳಿಸರ್‌ರವರಿಗೆ ನಾನು ಚಿರಋಣಿಯಾಗಿದ್ದೇನೆ.

ನಿಬಂಧದ ಶಿರ್ಷಿಕೆಗಾಗಿ ಮಾರ್ಗದರ್ಶನ ಮಾಡಿ ನಿಬಂಧವನ್ನು ರಚಿಸುವಲ್ಲಿ ಮಾರ್ಗದರ್ಶನ ಮಾಡಿ, ಪ್ರೀತಿ-ವಿಶ್ವಾಸ ತೋರಿಸಿ, ಕೃತಿ ರೂಪುಗೊಳ್ಳುವಂತೆ ಪ್ರೇರೆಪಿಸಿದ ಮಾರ್ಗದರ್ಶಕರಾದ ಡಾ॥ ಆರ್. ಬಿ. ಚಿಲಮಿ ಗುರುಗಳಿಗೆ ಮತ್ತು ನನ್ನ ಈ ನಿಬಂಧವನ್ನು ಓದಿ ತಿದ್ದಿ ಸಲಹೆ ಸೂಚನೆ ನೀಡಿದ ನನ್ನ ಮಿತ್ರರಾದ ಡಾ॥ ಬಿ. ಸಿ. ಹಲ್ಲಿ ಸರ್‌ರವರಿಗೂ ನನ್ನ ಅನಂತ ವಂದನೆಗಳು.

ನಮ್ಮ ಮಹಾವಿದ್ಯಾಲಯದ ಸ್ಥಳೀಯ ಸಲಹಾ ಸಮಿತಿಯ ಕಾರ್ಯದರ್ಶಿಗಳಾದ ಶ್ರೀ ಅರುಣಕುಮಾರ ಶಹಾ, ಹಿಂದಿನ ಪ್ರಾಚಾರ್ಯರು ಇಂದಿನ ಬಿ.ಎಲ್.ಡಿ. ಶಿಕ್ಷಣ ಸಂಸ್ಥೆಯ ಆಡಳಿತಾಧಿಕಾರಿಗಳಾದ ಶ್ರೀ ಎಸ್. ಎಚ್. ಲಗಳಿ ಸರ್‌ರವರಿಗೂ ಹಾಗೂ ಪ್ರಾಚಾರ್ಯರಾದ ಡಾ॥ ಎಸ್. ಎಸ್. ಸುವರ್ಣಖಂಡಿ ಸರ್‌ರವರಿಗೂ ಅನಂತ ವಂದನೆಗಳು.

ಎಂದೋ ಕಮರಿ ಹೋಗಬೇಕಿದ್ದ ಬದುಕೆಂಬ ಬಳ್ಳಿಗೆ, ನೀರು ಗೊಬ್ಬರ ಹಾಕಿ ಹೆಮ್ಮರವಾಗಿ ಬೆಳೆಯಲಿಕ್ಕೆ ಕಾರಣಿಕರ್ತರಾದ ಮಾವಂದಿರಾದ ಶ್ರೀ ಶಿವಪ್ಪ ಹೊನ್ನಿಹಾಳ, ಶ್ರೀ ಸಿದ್ರಾಮಪ್ಪ ಡೊಮನಾಳ, ಅಣ್ಣನಾದ ಶ್ರೀ ನಿಂಗಪ್ಪ ನವಲಗಣ್ಣ, ಚಿಕ್ಕಪ್ಪರಾದ ಶ್ರೀ ಬಸಪ್ಪ ನಾಗೋಡ, ಅಕ್ಕಂದಿರಾದ ಶ್ರೀಮತಿ ಸಂಗವ್ವ, ಹಣಮವ್ವ ಇವರೆಲ್ಲರಿಗೂ ಅನಂತ ವಂದನೆಗಳು.

ನನ್ನ ಅಧ್ಯಯನಕ್ಕೆ ಗ್ರಂಥ ಸಹಾಯ ಮಾಡಿ, ಮಹಾದೇವಪ್ಪನವರ ಬಗ್ಗೆ ನಿಬಂಧ ರಚಿಸಲು ಸ್ಫೂರ್ತಿ ನೀಡಿ ಸಹಾಯ, ಸಹಕಾರ ನೀಡಿದ ಡಾ॥ ಎಸ್. ಪಿ. ಚವಲಾರವರಿಗೂ ಅನಂತ ವಂದನೆಗಳು.

ನನ್ನ ಅಧ್ಯಯನದುದ್ದಕ್ಕೂ ಸಹಾಯ ಸಹಕಾರ ನೀಡಿದ ನಮ್ಮ ಕನ್ನಡ ವಿಭಾಗದ ಎಲ್ಲ ಅಧ್ಯಾಪಕರಿಗೂ ಮತ್ತು ಡಾ॥ ಸಂಗಮೇಶ ತೇಲಿಯವರಿಗೂ, ಬಿ. ಆರ್. ಧರೂರ ಸಂಶೋಧನೆ ಕೇಂದ್ರದ ಗ್ರಂಥಪಾಲಕರಿಗೂ, ಶಿಕ್ಷಕೇತರರಿಗೂ, ವೃಷಬೇಂದ್ರ ಕಾಲೇಜಿನ ಸಿಬ್ಬಂಧಿ ವರ್ಗದವರೆಲ್ಲರಿಗೂ ನನ್ನ ಅನಂತ ವಂದನೆಗಳು.

ನನ್ನ ಬಾಳ ಸಂಗಾತಿಯಾಗಿ ನನ್ನ **'ಎಂ.ಫಿಲ್'** ಅಧ್ಯಯನದ ಸಂದರ್ಭದಲ್ಲಿ ಮನೆತನದ ಎಲ್ಲ ಜವಾಬ್ದಾರಿಯನ್ನು ನಿರ್ವಹಿಸಿ ನಿಬಂಧದ ರಚನೆಗೆ ನೆರವಾದ ಮಡದಿ ಮಾಲಾಶ್ರೀ ಹಾಗೂ ಅಕ್ಕರೆಯ ಮಕ್ಕಳಾದ ಅಶ್ವಿಣಿ, ಆಕಾಶ, ಆದರ್ಶ ಅವರಿಗೂ ಅನಂತ ವಂದನೆಗಳು.

ಸಂಶೋಧನ ಕೇಂದ್ರದ ರೂವಾರಿಯಾದ ಶ್ರೀ ಬಿ. ಆರ್. ಧರೂರ ಅವರನ್ನು ಸದಾಕಾಲ ಸ್ಮರಿಸುವೆ. ಹಾಗೂ ಅಚ್ಚುಕಟ್ಟಾಗಿ ಡಿ.ಟಿ.ಪಿ. ಮಾಡಿದ ನಮ್ಮ ಕಾಲೇಜಿನ ಹಳೇ ವಿದ್ಯಾರ್ಥಿಯಾದ ಶ್ರೀ ಮುರಗೇಶ ಕೌಲಾಪೂರ ಅವರಿಗೂ ನನ್ನ ವಂದನೆಗಳು.

ದಿ : ೧೦-೦೭-೨೦೧೧

ಶ್ರೀ ಯಂಕಣ್ಣ ಸಂಗಪ್ಪ ನವಲಗಣ್ಣ
ಬಿ.ಎಲ್.ಡಿ. ಶಿಕ್ಷಣ ಸಂಸ್ಥೆಯ ವಾಣಿಜ್ಯ ಬಿ.ಎಚ್.ಎಸ್.
ಕಲೆ ಮತ್ತು ಟಿ.ಜಿ.ಪಿ. ವಿಜ್ಞಾನ ಮಹಾವಿದ್ಯಾಲಯ,
ಜಮಖಂಡಿ. ಜಿ॥ ಬಾಗಲಕೋಟ

: ಅರ್ಪಣೆ :

ನನ್ನ ಬದುಕು ಬಾಳ ಬಂಗಾರವಾಗಲು

ಹಗಲಿರುಳು (ಹಂಬಲಿಸಿದ) ಶ್ರಮಿಸಿದ

ಪೂಜ್ಯ ತಂದೆ (ಲಿಂ) ಸಂಗಪ್ಪ

ಮಾತೋಶ್ರೀ (ಲಿಂ) ಯಂಕಮ್ಮ

ಇವರಿಗೆ ಹೃತ್ಪೂರ್ವಕವಾಗಿ ಅರ್ಪಿಸುತ್ತಿದ್ದೇನೆ.

ಅಧ್ಯಾಯ - ೧

ಅಧ್ಯಯನದ ಸ್ವರೂಪ, ಉದ್ದೇಶ, ವ್ಯಾಪ್ತಿ ಮತ್ತು ವೈಧಾನಿಕತೆ

ಅಧ್ಯಾಯ - ೧

ಅಧ್ಯಯನದ ಸ್ವರೂಪ, ಉದ್ದೇಶ, ವ್ಯಾಪ್ತಿ ಮತ್ತು ವೈಧಾನಿಕತೆ

ಧಾರ್ಮಿಕ, ಸಾಮಾಜಿಕ, ರಾಜಕೀಯ ಆರ್ಥಿಕ ಸಮಾನತೆಯಿಂದ ವಂಚಿತವಾದ ಕಾಲದಲ್ಲಿ; ನೈತಿಕತೆ ಅಧಃಪತನಗೊಂಡ ವರ್ಗ-ವರ್ಣ-ಲಿಂಗ ಭೇದ ತಾಂಡವವಾಡುತ್ತಿದ್ದ ಕಾಲದಲ್ಲಿ ಅನೇಕ ಶತಮಾನಗಳಿಂದ ಸಮಾಜವನ್ನು ಕಿತ್ತು ತಿನ್ನುವ ಮೂಢ ಸಂಪ್ರದಾಯದ ಮೂಲೋತ್ಪಾಟನೆಗೆ ಕಾಲಕಾಲಕ್ಕೆ ಅವತಾರಿ ಪುರುಷನ ಜನನವಾಗುತ್ತದೆ. ಅಂಥವರಲ್ಲಿ "ಮುರುಗೋಡ ಮಹಾದೇವರು ಒಬ್ಬರು".

೧.೧ ಅಧ್ಯಯನ ಸ್ವರೂಪ :

'ಮುರಗೋಡ ಮಹಾದೇವಪ್ಪ' ಕುರಿತು ಸಂಶೋಧನೆ ತೊಡಗಿದೆ. ಮೊದಲು ಅವರು ಮಾಡಿದ ಕ್ಷೇತ್ರದಲ್ಲಿ ಕ್ಷೇತ್ರ ಕಾರ್ಯ ಮಾಡಿ ವಿಷಯ ಸಂಗ್ರಹಿಸಿದೆನು. ಅನಂತರ ನಿಬಂಧದ ರಚನೆಯಲ್ಲಿ ಇವರ ವಿಷಯ ಸಂಗ್ರಹದ ಮೇಲೆ ಐದು ಅಧ್ಯಾಯ ಮಾಡಿಕೊಂಡೆನು.

ಮೊದಲನೆಯ ಅಧ್ಯಾಯದಲ್ಲಿ ಗಾಂಧಿಜೀಯವರ ಮುಂದಾಳತ್ವದಲ್ಲಿ ನಡೆದ ಘಟನೆಗಳ ಸತ್ಯಾಸತ್ಯತೆ ನಿಷ್ಕರ್ಷಯಾಗದೇ ಸ್ವಾರ್ಥಿಗಳ ದೇಶದ್ರೋಹಿಗಳ, ಪುರೋಹಿತಶಾಹಿಗಳ, ಶ್ರೀಮಂತರ ಉಚ್ಚವರ್ಗದವರ ಕೈಯಲ್ಲಿ ಸಿಕ್ಕು **'ಎಲೆ ಮರೆಯ ಕಾಯಿಯಂತೆ'** ಇದ್ದ ಮಹಾದೇವಪ್ಪನವರ ಚರಿತ್ರೆಯನ್ನು ಐತಿಹಾಸಿಕವಾಗಿ ದಾಖಲಿಸುವ ಉದ್ದೇಶ, ಮತ್ತು ಅವರು ಮಾಡಿದ ಕಾರ್ಯ, ವೈಶಾಲ್ಯತೆಯನ್ನು ಪ್ರಸ್ತಾಪಿಸಿದ್ದೇನೆ.

ಎರಡನೆಯ ಅಧ್ಯಾಯದಲ್ಲಿ ಅವರ ಜನನ, ಬಾಲ್ಯ, ವಿದ್ಯಾಭ್ಯಾಸ, ಬೆಳೆದ ಪರಿಸರ, ಗೃಹ ಸಾಧನೆಯನ್ನು ಹೇಳಿದ್ದೇನೆ. ಮೂರನೆಯ ಅಧ್ಯಾಯದಲ್ಲಿ ಮಹಾದೇವಪ್ಪನವರು ಅಪ್ಪಟ ದೇಶಾಭಿಮಾನಿ, ಸ್ವತಂತ್ರ್ಯ ಪ್ರೇಮಿ. ದೇಶವನ್ನು ಪರಕೀಯರಿಂದ ಬಂಧ ಮುಕ್ತಗೊಳಿಸಲು ಗಾಂಧಿಜೀಯವರ ಮತ್ತು ಸುಭಾಷಚಂದ್ರರ ಸೌಮ್ಯವಾದ ಮತ್ತು ಉಗ್ರವಾದವನ್ನು ತನ್ನ ಚಿಕ್ಕವಯಸ್ಸಿನಲ್ಲಿ ಅಳವಡಿಸಿಕೊಂಡು ಸ್ವತಂತ್ರ್ಯಕ್ಕಾಗಿ ಹರಿಪುರ ಅದಿವೇಶನದಲ್ಲಿ ಪಾಲ್ಗೊಂಡಿದ್ದು, ಕಾನೂನು ಭಂಗ ಚಳುವಳಿ ಮಾಡಿದ್ದು, ಅರಣ್ಯ ಸತ್ಯಾಗ್ರಹ ಮಾಡಿದ್ದು, ವಿದೇಶ ಬಟ್ಟೆ ತಿರಸ್ಕಾರ, ವೈಯಕ್ತಿಕ ಸತ್ಯಾಗ್ರಹವನ್ನು ಮತ್ತು ೧೯೪೭ರ

ಚಳುವಳಿಯಲ್ಲಿ ಪಾಲ್ಗೊಂಡು ಸ್ವತಂತ್ರಕ್ಕಾಗಿ ಸರಕಾರಿ ಸಂಪತ್ತನ್ನು ನಾಶಗೊಳಿಸಿದ್ದು ಮತ್ತು ಸ್ವತಂತ್ರ ಭಾರತದ ಕಾಂಗ್ರೇಸ್ಸಿಗರ ಕಿರುಕುಳದಿಂದ ಪಟ್ಟಪಾಡು ಅನುಭವಿಸಿದ ನೋವನ್ನು ಮುಂದೆ ಸವಿಸ್ತಾರವಾಗಿ ಹೇಳಿದ್ದೇನೆ.

ನಾಲ್ಕನೆಯ ಅಧ್ಯಾಯದಲ್ಲಿ ಗೋವಾ ವಿಮೋಚನೆಗಾಗಿ ಹೋಗಿ, ಗೋವೆಯ ಅಡವಿಯಲ್ಲಿ 'ಕಾನಕೋಣಂ' ಅಡವಿಯಲ್ಲಿ ಮತ್ತು ಪೋರ್ಚುಗೀಜ ಪೋಲಿಸರು ಕೊಟ್ಟ ಕಿರುಕುಳವನ್ನು ಮುಂದೆ ಸವಿಸ್ತಾರವಾಗಿ ಪ್ರಸ್ತಾಪಿಸಿದ್ದೇನೆ.

ಐದನೆಯ ಅಧ್ಯಾಯದಲ್ಲಿ ಸ್ವತಂತ್ರಕ್ಕಾಗಿ ಸರ್ವಸ್ವವನ್ನೇ ತ್ಯಾಗ ಮಾಡಿ ತಮ್ಮೆಲ್ಲ ಅನುಯಾಯಿಗಳಿಗೆ ಸ್ವತಂತ್ರ ಹೋರಾಟದ ಕಿಚ್ಚನ್ನು ಹಚ್ಚಿ, ಚಳುವಳಿಯಲ್ಲಿ ಧುಮುಕಿ ಬ್ರಿಟೀಷರಿಗೆ ನುಂಗದ ತುತ್ತಾಗಿದ್ದರು. 'ಸ್ವತಂತ್ರವೇ ನನ್ನ ಜನ್ಮ ಸಿದ್ಧ ಹಕ್ಕು' ಘೋಷಣೆ ಮಾಡಿದ ಮಹಾದೇವಪ್ಪನವರ ಮೇಲೆ ಸ್ವಾರ್ಥಿಗಳು, ಪೂರ್ವಗ್ರಹ ಪೀಡಿತ ಇತಿಹಾಸಕಾರರಿಂದ ಆದ ಅನ್ಯಾಯವನ್ನು ~~ಮುಂದೆ~~ ಸವಿಸ್ತಾರವಾಗಿ ಹೇಳಿದ್ದೇನೆ.

ಆರನೆಯ ಅಧ್ಯಾಯವಾದ ಉಪಸಂಹಾರದಲ್ಲಿ ಮೊದಲಿನ ಐದು ಅಧ್ಯಾಯಗಳ ಸಾರಾಂಶವನ್ನು ಹೇಳುವುದರೊಂದಿಗೆ ನಮ್ಮ ಕ್ಷೇತ್ರ ಕಾರ್ಯದಲ್ಲಿ ಹೊರಹೊಮ್ಮಿದ ವಿಷಯವನ್ನು ಸಂಗ್ರಹಿಸಲಾಗಿದೆ.

ಈ ಎಲ್ಲ ಕಾರ್ಯಗಳಿಂದ ಈ ನಿಬಂಧ ಒಂದು ಪೂರ್ಣಪ್ರಮಾಣದ ನಿಬಂಧವಾಗಿದೆ ಎಂದು ಹೇಳಿಕೊಂಡಿದ್ದೇನೆ.

ಅಧ್ಯಾತ್ಮದ ವಾತಾವರಣದಲ್ಲಿ ಹುಟ್ಟಿ ಬೆಳೆದ ಮಹಾದೇವಪ್ಪ "ಆತ್ಮಜ್ಞಾನ" ಪಡೆದಿದ್ದರು. ಅವರ ತಂದೆ ತಾಯಿಗಳಿಗೂ ಧಾರ್ಮಿಕ ಆಚರಣೆಯಲ್ಲಿ ಆಸಕ್ತಿ, ಸಮಾಜಸೇವೆಯೇ ಅವರ ನಿಲುವು. ಭಾರತಾಂಬೆಯನ್ನು ಪರದಾಸ್ಯದಿಂದ ಬಂಧ-ಮುಕ್ತಗೊಳಿಸಲು ಸುಭಾಶಚಂದ್ರ ಭೋಸರು ನಂಬಿದ "ಶಸ್ತ್ರ" ಸಹಿತ ಹೋರಾಟ ಮತ್ತು ಗಾಂಧೀಜಿ ಪ್ರಣೀತ ಅಹಿಂಸಾವಾದ ಈ ಎರಡನ್ನು ಸಮನ್ವಯಗೊಳಿಸಿಕೊಂಡು ಮಹಾದೇವರು ಸ್ವಾತಂತ್ರ್ಯ ಪೂರ್ವ ಹಾಗೂ ಸ್ವಾತಂತ್ರ್ಯೋತ್ತರ ಚಳುವಳಿಯನ್ನು ರೂಪಿಸಿದರು. ಆ ಚಳುವಳಿಯಲ್ಲಿ ತಮ್ಮ ಅನುಯಾಯಿಗಳನ್ನು ಹೋರಾಟಕ್ಕೆ ಅಣಿಗೊಳಿಸಿ ಹೋರಾಟ ಮಾಡಿದರು.

ವಾಸ್ತವದ ತಳಹದಿಯ ಮೇಲೆ ಆದರ್ಶ ಸಮಾಜವನ್ನು ಹಾಗೂ ರಾಷ್ಟ್ರವನ್ನು ಕಟ್ಟಬಯಸಿದ ಮಹಾದೇವಪ್ಪನವರ ವಿಚಾರಗಳು ಇಂದಿಗೂ ಪ್ರಸ್ತುತವಾಗಿವೆ. ಆಶ್ರಮದಲ್ಲಿ ಅಂತಿಂಥವರಿಗೆ ಎಂದರೆ ವಿಲಾಸಿ ಜೀವನ ಕಳೆಯುವವರಿಗೆ, ಆಲಸಿಗಳಿಗೆ, ನಿರುದ್ಯೋಗಿಗಳಿಗೆ ಅವಕಾಶವಿರಲಿಲ್ಲ. ಸಾಧನೆ ಮಾಡುವವರಿಗೆ, ಸತತ ಪ್ರರಿಶ್ರಮ ಮಾಡುವವರಿಗೆ ಮಾತ್ರ ಆಶ್ರಯದ ಬಾಗಿಲು ತೆರೆದಿರುತ್ತಿತ್ತು.

ಇಂಚಗೇರಿ ಮಠವು ಬಂಕಿಮ ಚಂದ್ರರ "ಆನಂದಮಠ"ವನ್ನು ನೆನಪಿಸುತ್ತದೆ. ಮಠದ ಆಶ್ರಯಕ್ಕೆ ಹೋದ ಅಪರಾಧಿಗಳು, ಅಪರಾಧಿ ಮನೋಭಾವನೆವುಳ್ಳವರು, ಅಲ್ಲಿಯ ಭಜನೆ, ನಿತ್ಯ ನಿಯಮಗಳಿಂದ ಪರಿವರ್ತಿತರಾದ ಉದಾಹರಣೆಗಳು ಇವೆ. ಇಲ್ಲಿಯ ಜನರ ಜೀವನದರ್ಶನ ನೇರಗೊಂಡದ್ದು ನೋಡಿದರೆ ಆಧ್ಯಾತ್ಮೀಕದಲ್ಲಿ ಅಚಲ ವಿಶ್ವಾಸ ತಾನಾಗಿಯೇ ಹುಟ್ಟುತ್ತದೆ.

೧.೨ ಅಧ್ಯಯನ ಉದ್ದೇಶ :

ಯಾವುದೇ ಸಾಮಾಜಿಕ ಸುಧಾರಣೆಗೆ ತೊಡಗಿದಾಗ ಹಿಂದೆ ಸತ್ ಧರ್ಮ, ಸತ್ ಚಾರಿತ್ರ್ಯ, ಸದ್ ಭಾವ, ಸದ್ ಗುಣಗಳುಬೇಕು. ಇವುಳಗನ್ನು ಅಳವಡಿಸಿಕೊಂಡು ಸಮಾಜ ಸುಧಾರಣೆಗೆ ಹೊರಟ ವ್ಯಕ್ತಿಗೆ ಅಷ್ಟೇ ಪ್ರಭಲವಾದ ವಿರೋಧಿಗಳನ್ನು ಎದುರಿಸಬೇಕಾಗುತ್ತದೆ. ಅದಕ್ಕೆ ಮಹಾದೇವಪ್ಪನವರು ಹೊರತಾಗಲಿಲ್ಲ.

ರೈತ ಕಾರ್ಮಿಕ, ಕೂಲಿ ಕಾರ್ಮಿಕ, ಹಿಂದುಳಿದ ವರ್ಗದಿಂದ ಬಂದ ಜನಸಂಖ್ಯೆಯೇ ನಮ್ಮಲ್ಲಿ ಮುಕ್ಕಾಲು ಮೂರುಪಾಲು. ಅಂಥವರಲ್ಲಿ ಪರಿವರ್ತನೆ ತರುವದು, ಅವರನ್ನು ಉನ್ನತ ವಿಚಾರಗಳಿಗೆ ಅಣಿಗೊಳಿಸಿ, ನಿತ್ಯ ಹೊಟ್ಟೆಪಾಡಿಗಾಗಿಯೇ ಬದುಕು ಸವೆಸುವವರನ್ನು ಸೇರಿಸಿಕೊಂಡು ದೇಶದ ಪ್ರಮುಖ ಘಟ್ಟಗಳಲ್ಲಿ ಅವರನ್ನು ಹೋರಾಟಕ್ಕೆ ಅಣಿಗೊಳಿಸಿದ್ದೇ ಮಹಾದೇವಪ್ಪನವರ ಮಹತ್ ಸಾಧನೆ. ಶರಣ ಬಸವಣ್ಣನವರು ತಮ್ಮ ಮಹಾಮನೆಯಲ್ಲಿ ಸಮಾಜದ ಕೆಳವರ್ಗದವರಿಗೆ ತರಬೇತಿ ಕೊಡಲು ಹನ್ನೆರಡು ವರ್ಷ ತಮ್ಮ ಜೀವನ ಮುಡಿಪಾಗಿಟ್ಟಂತೆ ಮಹಾದೇವಪ್ಪನವರು ಕೂಡ ಜೀವನವಿಡೀ ಅದೇ ಕಾಯಕದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡವರು.

೧೯೪೨ರ ಉಗ್ರ ಹೋರಾಟದಲ್ಲಿ ದೇಶವಿಡಿ ತೊಡಗಿದಾಗ ಮಹಾದೇವಪ್ಪನವರು ತಾವು ಕೂಡಾ ತಮ್ಮ ತಂಡಗಳೊಂದಿಗೆ ಬ್ರಿಟೀಷ ಆಡಳಿತ ಯಂತ್ರವನ್ನು ನಿಷ್ಕ್ರೀಯಗೊಳಿಸಲು ತಾರು ತಂತಿ ಕಡಿದದ್ದು, (ಮಹಿಳೆಯರು ಕೂಡ ಅವರ ತಂಡಗಳಲ್ಲಿದ್ದರು, ಅವರ ಪ್ರಭಾವದಿಂದ ಸ್ವತಂತ್ರ್ಯವಾಗಿಯೂ ಮಾಡಿದರು) ರೇಲ್ವೆ ಹಳಿ ಕಿತ್ತಿದ್ದು, ಸ್ಟೇಶನ್ ಸುಟ್ಟಿದ್ದು ಇದೆ. ಲೋಕಮಾನ್ಯ ತಿಲಕರನ್ನು ನೆನಪಿಸುವ ವ್ಯಕ್ತಿತ್ವ ಇವರದಾಗಿತ್ತು. ಅಂಥ ಮಹಾತ್ಮನನ್ನು ನನ್ನ ಅಧ್ಯಯನದ ಮೂಲಕ ಪರಿಚಯಿಸುವುದು ಪ್ರಮುಖ ಉದ್ದೇಶವಾಗಿದೆ.

ಗುಪ್ತ ಹೋರಾಟದಲ್ಲಿ ಇವರ ಆಶ್ರಮಗಳಲ್ಲಿಯ ಗಂಡಸರು ತಮ್ಮ ದಿನನಿತ್ಯದ ಒಕ್ಕಲುತನ ಬಿಟ್ಟು ಗುಡ್ಡಗಾಡುಗಳಲ್ಲಿ ಅಡಗಿ ಹೋರಾಟದಲ್ಲಿ ತೊಡಗಿದಾಗ ಅವರ ಆಶ್ರಮಗಳನ್ನು ನಡೆಸಿಕೊಂಡು ಹೋಗುವ ಎಲ್ಲ ಹೊಣೆ ಹೊತ್ತವರು ಮಹಿಳೆಯರು. ನಿತ್ಯ ನಿಯಮಗಳಾದ ೪ ಹೊತ್ತಿನ ಭಜನೆ, ಅಥಿತಿಗಳ ಸತ್ಕಾರ, ಮಕ್ಕಳ ಯೋಗಕ್ಷೇಮ, ಮುದುಕರ ಉಟೋಪಚಾರ, ನಾಡ

ಮದ್ದು-ಗುಂಡುಗಳನ್ನು ತಯಾರಿಸುವ ಕಾರ್ಯ ಎಲ್ಲವನ್ನು ಚಾಚೂ ತಪ್ಪದಂತೆ ನಡೆಸಿಕೊಂಡು ಹೋದವರು ಮಹಿಳೆಯರು. ಆ ಮಹಿಳೆಯರೆಲ್ಲ ಸುಶಿಕ್ಷಿತರಲ್ಲ. ಆದರೆ ದಾಸಬೋಧ – ಓದಬಲ್ಲವರು, ತಿಳಿಯಬಲ್ಲವರು. ಅವರ ಶಿಕ್ಷಣ ಹೊಳೆಯ ದಂಡೆಯ ಉಸಕಿನ ಮೇಲೆ, ರೊಟ್ಟಿ ಮಾಡುವ ಕಲ್ಲಿನ ಕೊಮ್ಮಣಗಿಯಲ್ಲಿ, ಕಟ್ಟೆಯ ಹಾಸುಗಲ್ಲಿನ ಮೇಲೆ ಅಕ್ಷರಾಭ್ಯಾಸ, ಒಬ್ಬರಿಗೊಬ್ಬರು ಕೆಲಸ – ಮಾಡುತ್ತಲೇ ಮಾಡಿದವರು. ಹೊಲಗದ್ದೆಗಳಲ್ಲಿದ್ದ ಪೈರನ್ನು ಕೊಯ್ಲು ಮಾಡುವುದು, ಉತ್ತುವುದೂ, ಬಿತ್ತುವುದೂ ಅದೇನಿದ್ದರು ಮಹಿಳೆಯರು ಮಾಡಬೇಕಾದ ಪ್ರಸಂಗ! ನಮ್ಮ ಕವಿಗಳು ಹೇಳಿದ ಲೌಕಿಕ-ಅಲೌಕಿಕ ಸಮನ್ವಯವೆಂದರೇ ಇದೇ ಅಲ್ಲವೇ! ಈ ಎಲ್ಲಕ್ಕೂ ಸೂತ್ರಧಾರ ಅವರೊಬ್ಬರೇ ಮಹಾದೇವಪ್ಪನವರು.

ದೇಶಕ್ಕೆ ಸ್ವಾತಂತ್ರ್ಯ ಸಿಕ್ಕನಂತರ ಮಹಾದೇವಪ್ಪನವರು ಸಾಮೂಹಿಕ, ಸಾಮಾಜಿಕ ಕಾರ್ಯಗಳಲ್ಲಿ ತೊಡಗಿದ್ದ ಜನಕ್ಕೆ ಒಂದು ಕಾರ್ಯದ, ಒಂದು ತತ್ವದ ಸೂತ್ರದಲ್ಲಿ ಹಿಡಿದಿಡುವುದು ಕಷ್ಟಸಾಧ್ಯವಾಯಿತು. ಆಗ ಮಹಾದೇವಪ್ಪನವರು, ಸಾಮೂಹಿಕ ಜೀವನ ರೂಪಿಸುವ ಯತ್ನದಲ್ಲಿ ಸಾಮೂಹಿಕ ಬೇಸಾಯ ಪದ್ಧತಿಯನ್ನು ಪ್ರಾರಂಭಿಸಿದರು. ಈ ಸಾಮೂಹಿಕ ಜೀವನದಲ್ಲಿ ಜನಸಾಮಾನ್ಯರು ಒಂದುಗೂಡಿ ಬದುಕಲು ಅಡ್ಡವಾದ ಜಾತಿಯ ಗೋಡೆಯನ್ನೆ ಒಡೆದು ಜಾತ್ಯಾತೀತ ಸಮಾಜ ಕಟ್ಟಲು ಅಂತರ್ – ಜಾತಿಯ ವಿವಾಹಗಳನ್ನು ಏರ್ಪಡಿಸಿದರು. ಈ ಸಾಮಾಜಿಕ ಬದಲಾವಣೆಗಳನ್ನು ಒಪ್ಪದ, ಹೊಂದಿಕೊಳ್ಳಲಾರದ ಕೆಲವರು ಸಂಘಟನೆಯನ್ನು ಬಿಟ್ಟು ಹೊರನಡೆದರು. ಅಲ್ಲಿಯವರೆಗಿನ ಆಶ್ರಯಕೊಟ್ಟ ಆಶ್ರಮ ಜೀವನದ ಉಪಕಾರ ಮರೆತು ಹೆಸರು ಕೆಡಿಸುವ ಪಿತೂರಿ ಮಾಡಿದವರು ಅನೇಕರು.

ಮಠದ ಮತ್ತು ಮಠದ ಗುರುಗಳ ಬಗ್ಗೆ ಆಗದವರು "ಜಾತಿ" ಕೆಡಿಸುವವ, ಧರ್ಮಹಾಳು ಮಾಡುವವ ಎಂದು ಚಾರಿತ್ರ್ಯವಧೆ ಮಾಡುತ್ತಿದ್ದರು ಮತ್ತು ಸುಳ್ಳು ಅಪಾದನೆಗೆ ಗುರಿಪಡಿಸಿದ್ದುಂಟು. ಮಹಾದೇವಪ್ಪನವರು ಮಹಾ ಮುತ್ಸದ್ದಿಯಾಗಿದ್ದರಿಂದ ಕೊಡುವ ಕಿರುಕುಳ ತಡೆದಕೊಂಡು ಬರುತ್ತಿದ್ದರು. ಹಿಗಿದ್ದಾಗ್ಯು ಆಶ್ರಮಗಳಲ್ಲಿ ಅಸಂಖ್ಯಾತ ಅನುಯಾಯಿಗಳು ಇದ್ದೆ ಇದ್ದರು. ಕಾರಣ ಆಶ್ರಮದಲ್ಲಿ ಆಚರಿಸುವ ಸಪ್ತಾಹಗಳು, ಮಾನಸಿಕವಾಗಿ, ಬೌದ್ಧಿಕವಾಗಿ, ಚಾರಿತ್ರವಾಗಿ ಪರಿವರ್ತನ ಮಾಡುವ ಶಕ್ತಿ ಕೇಂದ್ರಗಳಾಗಿ ಜನಸಾಮಾನ್ಯರ ಮನಸ್ಸನ್ನು ಗೆದ್ದವು. ಆಸರೆ ಬಯಸಿ ಬಂದವರಿಗೆ ಆಸರೆ ಕೊಟ್ಟು ಅವರ ಮನಸ್ಸನ್ನು ಪರಿವರ್ತಿಸಿ ಮನುಷ್ಯರನ್ನಾಗಿ ಮಾಡಿದ ನಿದರ್ಶನ ಆಶ್ರಮದಲ್ಲಿ ಸಿಗುತ್ತವೆ. ಅವರ ಕಾರ್ಯ ವೈಶಾಲ್ಯದ ವಿವರಣೆ ಮುಂದಿನ ಅಧ್ಯಾಯದಲ್ಲಿ ಕೂಲಂಕುಷವಾಗಿ ಮಾಡಲಾಗಿದೆ.

ಸಾಹಿತ್ಯ ಕ್ಷೇತ್ರಕ್ಕೆ ಅವರ ಕೃತಿಗಳ ಕೊಡುಗೆ ಇರದಿದ್ದರೂ, ಅವರ ಕಾರ್ಯ ವೈಶಾಲ್ಯವೇ ಸಾಹಿತ್ಯದ ಪ್ರತಿರೂಪವಾಗಿದೆ. ಮಹಾದೇವಪ್ಪನವರ ಕೀರ್ತನೆ, ಭಾಷಣ, ಪತ್ರಗಳನ್ನು, ಸಂಗ್ರಹ ರೂಪದಲ್ಲಿ ಮುದ್ರಿಸಿ ಪ್ರಕಟಿಸಿರುವದು ಕಂಡು ಬರುತ್ತದೆ.

"ಮನದಂಗಳದಲ್ಲಿ ರಂಜನೀಯ ಕಥೆ" ಇದ್ದಂತೆ ಮಹಾದೇವಪ್ಪನವರ ಕಾರ್ಯ ಮತ್ತು ಅವರ ಪಂಥದ ಕುರಿತು ಜನರು ಭಯದಿಂದ ಮಾತನಾಡುತ್ತಿದ್ದುದ್ದನ್ನು ಚಿಕ್ಕವನಿದ್ದಾಗ ಕೇಳುತ್ತಿದ್ದೆ.

ಅಸಂಖ್ಯಾತ ಅನುಯಾಯಿಗಳು ಅವರ ಬೆನ್ನು ಹತ್ತಿದ್ದನ್ನು ನೋಡಿದ್ದೇನೆ. ಅನೇಕರು ತಮ್ಮ ಸಮಸ್ಯೆಗಳನ್ನು, ಕಷ್ಟಗಳನ್ನು ಪರಿಹರಿಸಿಕೊಂಡು ಅವರನ್ನು ಸಾಕ್ಷಾತ್ ದೇವರೆಂದೇ ಪೂಜಿಸುವುದನ್ನು ಕಂಡಿದ್ದೇನೆ. ಅವರ ಅನುಯಾಯಿಗಳೆಲ್ಲರು ಅವರ ಮಾತನ್ನು ವೇದ ವ್ಯಾಖ್ಯೆವೆಂದೇ ಅನುಸರಿಸುತ್ತಿದ್ದನ್ನು ನೋಡಿದ್ದೇನೆ. ಅವರ ಆಶ್ರಯಕ್ಕೆ ಹೋದವರು ಹಿಂತಿರುಗಿ ಬಂದ ಉದಾಹರಣೆಗಳು ಕಡಿಮೆ. ಈ ಎಲ್ಲ ವಿಷಯಗಳು ನನ್ನ ಮನಸ್ಸಿನ ಮೇಲೆ ಗಾಢವಾಗಿ ಪ್ರಭಾವ ಬೀರಿದ್ದೆ ಈ ನಿಬಂಧದ ಜನನಕ್ಕೆ ಸ್ಫೂರ್ತಿಯಾಯಿತು.

೨೦ನೇ ಶತಮಾನದಲ್ಲಿ ಗಾಂಧೀಜಿ ಮುಖಂಡತ್ವದಲ್ಲಿ ನಡೆದ ಚಳುವಳಿಯಲ್ಲಿ ಭಾಗವಹಿಸಿದ ಘಟನೆಗಳ ಸತ್ಯಾಸತ್ಯತೆಯ ನಿಷ್ಕರ್ಷೆಯಾಗಿಲ್ಲ. ನಿಜವಾಗಿ ತನು–ಮನ–ಧನವನ್ನು ಅರ್ಪಿಸಿ ಹೋರಾಡಿದವರ ಹೆಸರುಗಳು ಗೌಣವಾಗಿ, ತೋರಿಕೆಗಾಗಿ, ಸ್ವಾರ್ಥಕ್ಕಾಗಿ, ಧನ–ದಾಹಕ್ಕಾಗಿ ಸತ್ಯಾಗ್ರಹದ ವೇಷ ತೊಟ್ಟವರೆ ಖ್ಯಾತಿ ಪಡೆದರು. ಅಂಥ ಮುಖವಾಡ ಧರಿಸಿದವರ ಕುತಂತ್ರಗಳಿಗೆ ಬಲಿಯಾದ ಅನೇಕ ತ್ಯಾಗಿಗಳಲ್ಲಿ, ವೀರರಲ್ಲಿ, ದೇಶ ಪ್ರೇಮಿಗಳಲ್ಲಿ ಮಹಾದೇವಪ್ಪನವರು ಹಾಗೂ ಅವರ ಅನುಯಾಯಿಗಳು ಇರುವುದನ್ನು ದಾಖಲಿಸುವ ಉದ್ದೇಶ ನನ್ನದಾಗಿದೆ.

೧.೩ ಅಧ್ಯಯನ ವ್ಯಾಪ್ತಿ :

ಒಂದು ವಿಷಯದ ವ್ಯಾಪ್ತಿ ಎಂದರೆ ಆ ಕ್ಷೇತ್ರದ ಹರವು ಅಥವಾ ಅದು ಹೊಂದಿದ ಸೀಮಾರೇಖೆ ಎಂದರ್ಥ. ನಾನು ಸಂಶೋಧನೆಗೆ ತೆಗೆದುಕೊಂಡ 'ಮುರಗೋಡ ಮಹಾದೇವಪ್ಪನವರ' ಚಳುವಳಿಗಳ ಅಧ್ಯಯನದ ವಿಷಯದ ವ್ಯಾಪ್ತಿ ಬಹಳ ವಿಶಾಲವಾದದ್ದು ಮತ್ತು ಹರವಾದದ್ದು. ಅದಕ್ಕಾಗಿ ನಾನು ಅದರಲ್ಲಿ ನಿಗದಿತ ವಿಷಯವನ್ನಷ್ಟೇ ಆಯ್ಕೆ ಮಾಡಿಕೊಂಡಿದ್ದೇನೆ. ಏಕೆಂದರೆ ನನ್ನ ಅಧ್ಯಯನದ ವಿಷಯ ದೇಶದ ಸ್ವತಂತ್ರ್ಯಕ್ಕಾಗಿ ಕರ್ನಾಟಕ ಏಕೀಕರಣಕ್ಕಾಗಿ, ಸಾಮಾಜಿಕ ಚಳುವಳಿ, ರಾಜಕೀಯ ಚಳುವಳಿ, ಧಾರ್ಮಿಕ, ಆರ್ಥಿಕ ಅಸಮಾನತೆಗಾಗಿ ಶೋಷಿತರ ಏಳ್ಗೆಗಾಗಿ ಹೋರಾಟದ ಕಾರ್ಯಕ್ಷೇತ್ರ ಇಡೀ ಕರ್ನಾಟಕವನ್ನೇ ಆವರಿಸಿರುವಂತದ್ದು. ಅವರು ಕರ್ನಾಟಕದಾದ್ಯಂತ ತಿರುಗಾಡಿ ಜನಜಾಗೃತಿ ಮಾಡಿದರು. ಎಲ್ಲಾ ವಿಷಯಗಳ ಸಂಗ್ರಹಣೆ ತೊಂದರೆಯಾಗಬಾರದೆಂದು ಕೇವಲ ರಾಜಕೀಯ ರಂಗದಲ್ಲಿ ಅವರು ಸಾಧನೆ ಮಾಡಿದ್ದನ್ನಷ್ಟೇ ನನ್ನ ನಿಬಂಧದ ವಿಷಯವನ್ನಾಗಿ ಆಯ್ಕೆ ಮಾಡಿಕೊಂಡಿದ್ದೇನೆ.

ವಿಷಯದ ವ್ಯಾಪ್ತಿ ವಿಶಾಲವಾಗಿದ್ದರೂ ಸಾಧ್ಯವಾದಷ್ಟು ವಿಷಯ ಸಂಗ್ರಹಗಳನ್ನು ಸಂಗ್ರಹಿಸಿ ವಿಶ್ಲೇಷಿಸಲಾಗಿದೆ.

ಮಾನವ ಕುಲಕೋಟಿಯ ಉನ್ನತಿಗಾಗಿ ಶ್ರಮಿಸಿದ ಬುದ್ಧ–ಬಸವ–ಗಾಂಧೀಜಿಯಂತರವನ್ನು ಕಷ್ಟಕ್ಕೆ ಗುರಿಮಾಡಿದ ಸಮಾಜ, ಮಹಾದೇವಪ್ಪನವರನ್ನೂ ಬಿಡಲಿಲ್ಲ. ರಾಜಕೀಯ, ಸಾಮಾಜಿಕ, ಧಾರ್ಮಿಕ–ನೀತಿಯ ನೆಲಗಟ್ಟಿನ ಜೊತೆಗೆ ಸತ್ ಚಾರಿತ್ರ್ಯ ಉಳ್ಳವರು ಮಹಾದೇವಪ್ಪನವರು. ಸಮಾಜ

ಸೇವೆಯ ಜೊತೆಗೆ ಆಧ್ಯಾತ್ಮ ಸಾಧನೆ ರೂಢಿಸಿಕೊಂಡವರು, ಗಾಂಧೀಜಿಯ ರಾಷ್ಟ್ರೀಯ ಚಳುವಳಿಗಳಿಂದ ಪ್ರೇರಣೆ ಪಡೆದ ಮಹಾದೇವಪ್ಪನವರು ಕೈಕೊಂಡ ಕಾರ್ಯ ಚಟುವಟಿಕೆಗಳು ಮುಂದಿನ ಜನಾಂಗಕ್ಕೆ ಸ್ಫೂರ್ತಿಯಾಗುವದರಲ್ಲಿ ಸಂದೇಹವಿಲ್ಲ. ಅಂತೆಯೇ ಮಹಾದೇವಪ್ಪನವರ ಸಾಧನೆ-ಚಿಂತನೆಯ, ಅಮೂಲಾಗ್ರ ಅಧ್ಯಯನವನ್ನು ಈ ನಿಬಂಧದ ವಸ್ತುವಾಗಿ ತೆಗೆದುಕೊಂಡಿದ್ದೇನೆ.

೧.೪ ಅಧ್ಯಯನದ ವೈಧಾನಿಕತೆ :

ಯಾವುದೇ ಒಂದು ವಿಷಯದ, ಒಬ್ಬ ವ್ಯಕ್ತಿಯ, ಒಂದು ಕೃತಿಯ, ಒಂದು ಜನಾಂಗದ, ಒಂದು ಸಂಸ್ಕೃತಿಯ ಅಧ್ಯಯನದ ಸಂಶೋಧನೆಗೆ ಅವುಗಳಿಂದ ದೊರೆತ ಆಕರ ಸಾಮಗ್ರಿಗಳೇ ಜೀವಾಳು. ಅಧ್ಯಯನಕ್ಕೆ ಆಕರಗಳೇ ತಾಯಿಬೇರು. ದಾಖಲೆಗಳಿಲ್ಲದ ಸಂಶೋಧನೆ ಕಷ್ಟ ಸಾಧ್ಯವೆಂದು ಹೇಳಬಹುದು. ನಿಬಂಧಕ್ಕೆ ಬೇಕಾದ ಮೂಲ ಆಕರಗಳೆಂದರೆ, ಸಾಹಿತ್ಯ, ಕೃತಿಗಳು. ಕ್ಷೇತ್ರಕಾರ್ಯ ಒಡನಾಡಿಗಳ ಸಂದರ್ಶನ, ಶಿಲಾಶಾಸನಗಳು.

ಪ್ರಸ್ತುತ ನನ್ನ ಈ ನಿಬಂಧ ಒಬ್ಬ ವ್ಯಕ್ತಿಯ, ಸಾಮಾಜಿಕ, ರಾಜಕೀಯ, ಆರ್ಥಿಕ, ಧಾರ್ಮಿಕ ರಂಗಗಳಲ್ಲಿ ಸಾಧನೆ ಗೈದಿರುವ 'ಮುರಗೋಡ ಮಹಾದೇವಪ್ಪನವರನ್ನು' ಕುರಿತಾಗಿದದ್ದು.

ಕನ್ನಡ ನಾಲ್ಕನೆ ಇಯತ್ತೆ (ಕಲಿತ) ಓದಿದ ಮುರಗೋಡ ಮಹಾದೇವಪ್ಪನವರು ನಿಬಂಧದ ನಾಯಕನನ್ನಾಗಿ ಆಯ್ಕೆ ಮಾಡಿಕೊಂಡು ಸಂಶೋಧನೆ ಕಾರ್ಯದಲ್ಲಿ ತೊಡಗಿದೆ. ಸಾಹಿತ್ಯಿಕವಾಗಿ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಸಾಹಿತ್ಯದ ಕೊಡುಗೆ ಇರುವುದಿಲ್ಲಾ. ಅವರ ಕುರಿತು ಇನ್ನುಳಿದ ಯಾವ ದಾಖಲೆಗಳು ಇಲ್ಲ. ಸ್ವಲ್ಪ ನಾನು ತೊಂದರೆಗೊಳಗಾಗಬೇಕಾಯಿತು. ಅವರು ಮಾಡಿದ ಕಾರ್ಯಕ್ಷೇತ್ರ ಕೈ ಹೋಗಿ ಕ್ಷೇತ್ರಕಾರ್ಯದಲ್ಲಿ ತೊಡಗಿದೆ. ನಾನು ಹೋದ ಹಳ್ಳಿಯಲ್ಲಿ ಅವರ ಒಡನಾಡಿಗಳು, ಸಮಕಾಲೀನ ಜನರನ್ನು ಸಂಧರ್ಶನ ಮಾಡಿದೆನು. ಮಹಾದೇವಪ್ಪನವರ ಕುರಿತು ಅವರ ಬಾಯಿಂದ ಬಂದಷ್ಟು ವಿಷಯವನ್ನು ಸಂಗ್ರಹಣೆ ಮಾಡಿದೆ. ಅನುಕ್ರಮವಾಗಿ ಜೋಡಿಸಿಕೊಂಡು ನಿಬಂಧ ರಚನೆಗೆ ತೊಡಗಿದೆನು. ಸಂದರ್ಶನ ವಿಷಯದ ವೈಶಾಲ್ಯತೆ ಅಪಾರವಾದುದು. ಅದರಲ್ಲಿ ನನಗೆ ಬೇಕಾದಷ್ಟನ್ನು ಮಾತ್ರ ಆಯ್ದುಕೊಂಡೆನು.

ಮಹಾದೇವಪ್ಪನವರು ದೇಶದ ಸ್ವತಂತ್ರ್ಯಕ್ಕಾಗಿ ಮತ್ತು ಸ್ವತಂತ್ರ್ಯ ಭಾರತ ಶತ್ರುಗಳಾದ ಅಜ್ಞಾನ, ಮೂಢನಂಬಿಕೆ, ಜಾತಿಯತೆಯ ಮುಲೋತ್ಪಾಟನಗೆ ತಾವು ಹೋದಲ್ಲೆಲ್ಲ ಪುರಾಣಗಳನ್ನು, ಪ್ರವಚನಗಳನ್ನು ಹೇಳುತ್ತಿದ್ದರು. ಇವು ಲಿಖಿತ ರೂಪದಲ್ಲಿ ಇರದಿದ್ದರೂ, ನಾನು ಕ್ಷೇತ್ರಕಾರ್ಯಕ್ಕೆ ಹೋದಾಗ ಅಂದಿನ ಸಮಕಾಲೀನ ಜನರನ್ನು ಸಂದರ್ಶನ ಮಾಡಿ ವಿಷಯ ಸಂಗ್ರಹಿಸಿಕೊಂಡೆನು.

ದೇಶದ ಸ್ವಾತಂತ್ರಕ್ಕಾಗಿ ಹೋರಾಡಿ ಜೈಲಿಗೆ ಹೋದಾಗ ತಮ್ಮ ಅನುಯಾಯಿಗಳಿಗೆ ಬರೆಯುತ್ತಿದ್ದ ಪತ್ರಗಳು ನನ್ನ ಪ್ರಬಂಧಕ್ಕೆ ಆಕರಗಳಾಗಿವೆ. ಪತ್ರ, ಪುರಾಣ, ಪ್ರವಚನ, ಸಾಹಿತ್ಯದ ಪ್ರತಿರೂಪಗಳು.

ಈ ರೀತಿಯಾಗಿ ಮಹಾದೇವಪ್ಪನವರು ಕುರಿತು ಸ್ಥಳಿಯರಿಂದ ಒಡನಾಡಿಗಳಿಂದ ಸ್ಥಳಿಯ ಅಧ್ಯಯನ ಮಾಡಿ, ವಿಷಯ ಸಂಗ್ರಹಿಸಿಕೊಂಡು ಮಹಾದೇವರ ಚರಿತ್ರೆ ಬರೆಯಲು ಅನುಕೂಲವಾಯಿತು. ಇವರ ಚರಿತ್ರೆ ಇತಿಹಾಸ ಪುಟಗಳಲ್ಲಿ ಸೇರುವಂತಹದ್ದು, ಚಾರಿತ್ರಿಕ ಅಧ್ಯಯನವಾಗಿದೆ.

ಮಹಾದೇವಪ್ಪನವರು ಜನಿಸಿದ ಊರು ಹುಬ್ಬಳ್ಳಿ. ಈ 'ಹುಬ್ಬಳ್ಳಿ' ಐತಿಹಾಸಿಕ ದಾಖಲೆಯನ್ನು ಹೊಂದಿದ ಉತ್ತರ ಕರ್ನಾಟಕದ ಪ್ರಮುಖ ಪಟ್ಟಣ. ವಿಜಯನಗರದ ಅರಸರ ಕಾಲದಿಂದ ವ್ಯಾಪಾರ ಉದ್ದಿಮೆಗೆ ಪಡಮೂಲೆ ಸ್ಥಳ. ರಾಜಕೀಯ, ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ರಂಗದಲ್ಲಿ ವಿಶಿಷ್ಟತೆ ಪಡೆದ ಪ್ರಮುಖ ಪಟ್ಟಣ. ಇದು ರೈಲ್ವೆ ಜಂಕ್ಷನ್ ಕೂಡ ಹೌದು.

'ಹುಬ್ಬಳ್ಳಿ' ಹೆಸರಿನ ಊರುಗಳು ಉತ್ತರ ಕರ್ನಾಟಕದಲ್ಲಿ ಮೂರು. ಒಂದು 'ಮುಗಟಖಾನ ಹುಬ್ಬಳ್ಳಿ', 'ಎರಡು ಗಿಡದ ಹುಬ್ಬಳ್ಳಿ', ಮೂರನೆಯದು 'ರಾಯರ ಹುಬ್ಬಳ್ಳಿ'. ಇಲ್ಲಿ ವಿಜಯನಗರದ ಅರಸರು ಶಾಂತಿ ಸುವ್ಯವಸ್ಥೆಯಿಂದ ಆಡಳಿತ ನಡೆಸಿದ್ದರು. ಆಗ ಹುಬ್ಬಳ್ಳಿ ವ್ಯಾಪಾರೀ ಕೇಂದ್ರವಾಗಿತ್ತು. ರಾಯರು ಪೋರ್ಚುಗೀಸರ ಜೊತೆ ವ್ಯಾಪಾರ ಸಂಪರ್ಕ ಸಾಧಿಸಿದ್ದರು. ವಿಜಯನಗರದ ರಾಯರ ಆಳಿಕೆಯಿಂದ ಈ ಪಟ್ಟಣವು 'ರಾಯರ ಹುಬ್ಬಳ್ಳಿ' ಎಂದು ಹೆಸರು ಪಡೆದಿರಬೇಕು.

'ಹುಬ್ಬಳ್ಳಿ'ಯ ಕುರಿತು ಐತಿಹಾಸಿಕ ದಾಖಲೆಗಳು ಲಭ್ಯವಿರದಿದ್ದರೂ "ಅನಂತನಾಥ ಬಸದಿಯ" ಸಮುಚ್ಚಯದಲ್ಲಿ ಜೀರ್ಣೋದ್ಧಾರ ಕಾರ್ಯ ಕೈಕೊಂಡಾಗ ದೊರೆತ ಶಾಸನ ೧೧ನೇ ಶತಮಾನಕ್ಕಿಂತ ಪೂರ್ವದ್ದು, "ಎಲ್ಯಯ ಪುರ್ಬ್ಬದವಳ್ಳಿ" ಎಲೆಯ ಪುರ್ವಳ್ಳಿ 'ಎಲೆಯ ಹುಬ್ಬಳ್ಳಿ' ಶ್ರೀಮದನಾದಿಯ ಬಣಂಜಪಟ್ಟಣಂ ಹುಬ್ಬಳ್ಳಿ[೧] ಎಂದಿರುವದು ತಿಳಿದುಬರುತ್ತದೆ. ಮನಗುಂಡಿ ಶಾಸನದಲ್ಲಿ (೧೧ನೇ ಶತಮಾನ) ತ್ರಿಭುವನ ಮಲ್ಲಿದೇವರಾದ ಆರ್ರಡಿ ವಿಕ್ರಮಾದಿತ್ಯನ ಬಿರುದು ಬಾವಲಿಗಳ ವರ್ಣನೆ. 'ಹುಪ್ಪವಳ್ಳಿದಾರಿ' ನಿರ್ಮಾಣಕ್ಕಾಗಿ ಜಮೀನನ್ನು ಮೂರನೆಯ ಜಯಕೇಶಿಯ ದಾನಮಾಡಿದ್ದು. ಇತಿಹಾಸ ತಜ್ಞರು ಇದನ್ನು "ಹುಪ್ಪವಳ್ಳಿ-ಹುಬ್ಬಳ್ಳಿ"[೨] ಯಾಗಿದೆಯೆಂದು, ಪೂರ್ವದ ಹಳ್ಳಿ ಕಾಲಾನು ಕ್ರಮದಲ್ಲಿ ಹುಬ್ಬಳ್ಳಿಯಾಗಿರಬೇಕು[೩] ಎಂಬುದು ತಿಳಿಯುತ್ತದೆ.

ಉತ್ತರ ಕರ್ನಾಟಕದ ಹೃದಯ ಸ್ಥಾನ, "ಹುಬ್ಬಳ್ಳಿ" ಬೆಳವಲನಾಡಿನ ಮತ್ತು ಮಲೆನಾಡಿನ ಮಧ್ಯವರ್ತಿಯಲ್ಲಿದ್ದು, ಇದರ ಹಿನ್ನಾಡು ಫಲವತ್ತಾಗಿತ್ತು. ಈ ನಾಡು ವಾಣಿಜ್ಯ – ವ್ಯಾಪಾರಗಳಿಗೆ ಸಂಪದ್ಭರಿತವಾಗಿತ್ತು.

ಪೇಶ್ವೆಗಳ ಕಾಲದ ಹುಬ್ಬಳ್ಳಿ – ೧೭೫೫ ರಿಂದ ೧೮೧೮ :

"ತಾಳಿಕೋಟೆ" ಯುದ್ಧದ ನಂತರ ವಿಜಯನಗರ ಅರಸರ ಸಾಮ್ರಾಜ್ಯ ಪತನವಾಗಿ 'ಕರ್ನಾಟಕ'ವು ಮರಾಠ ಪೇಶ್ವೆಗಳ ಆಡಳಿತಕ್ಕೊಳಪಟ್ಟಿತ್ತು. ಮೂರು ಪ್ರಾಂತ (ಮುಂಬೈ, ಮದ್ರಾಸ್,

ಕೊಡಗು)ಗಳಲ್ಲಿ ಹದಿನಾರು ಸಂಸ್ಥಾನಗಳನ್ನಾಗಿ ವಿಭಜಿಸಿದ್ದರು. ವಿಜಾಪುರ, ಬೆಳಗಾವಿ, ಧಾರವಾಡ, ಗುಜರಾತ "ಮುಂಬೈ" ಪ್ರಾಂತದ ಅಧಿಪತ್ಯದಲ್ಲಿದ್ದವು. ಹೀಗೆ ಕರ್ನಾಟಕವು ಹರಿದು ಹಂಚಿ ಹೋಗಿದ್ದರಿಂದ ಕನ್ನಡ ಭಾಷೆ ಅಲ್ಪಸಂಖ್ಯಾತರ ಭಾಷೆಯಾಗಿ ಆ ಭಾಗದ ಪ್ರಗತಿ ಕುಂಠಿತಗೊಂಡಿತ್ತು.

ವಿಜಯನಗರದ ಪತನದ ನಂತರ ಹುಬ್ಬಳ್ಳಿ ವಿಜಾಪುರದ "ಆದಿಲ್ ಶಾಹಿ" ಆಡಳಿತಕ್ಕೆ ಒಳಪಟ್ಟಿತ್ತು. ಅದನ್ನು ೧೬೭೫ರಲ್ಲಿ ಔರಂಗಜೇಬನು ಸ್ವಾಧೀನಪಡಿಸಿಕೊಂಡನು. ಸವಣೂರ ನವಾಬರು ಕೆಲಕಾಲ ಹುಬ್ಬಳ್ಳಿಯ ಮೇಲೆ ಪ್ರಭಾವ ಬೀರಿದ್ದರು. ಕ್ರಿ.ಶ. ೧೭೨೭ರಲ್ಲಿ ಇದೇ ಮನೆತನಕ್ಕೆ ಸೇರಿದ "ಅಬ್ದುಲ್ ಮಜಿದ ಖಾನ್"ನ ಆಡಳಿತಕ್ಕೆ ಒಳಪಟ್ಟಿತ್ತು. ವಿಜಯನಗರದ ಅರಸರ ಜೊತೆ ಬಂದ ಬಸಪ್ಪ ಶೆಟ್ಟರು ನವಾಬನಿಂದ ಹಳೆಹುಬ್ಬಳ್ಳಿಗೆ ಹೊಂದಿಕೊಂಡ ಹೊಲಗೇರಿ ಪ್ರದೇಶವನ್ನು ಕಾಣಿಕೆಯಾಗಿ ಪಡೆದು, "ಕೌಲಪತ್ರ" ಬರೆಸಿಕೊಂಡು ಊರನ್ನು ನಿರ್ಮಿಸಿದರು. ಆ ಊರಿನ ಒಂದು ಭಾಗಕ್ಕೆ ಇಂದಿಗೂ "ಮಜೀದ ಪುರ" ವೆಂದು ಹೆಸರಿದೆ. ಈ ಊರು ನಿರ್ಮಾಣಗೊಂಡ ೧೫ ವರ್ಷಗಳ ನಂತರ "ದುರ್ಗದ ಬೈಲ್" ನಿರ್ಮಾಣವಾಯಿತು. ಅದರ ಸುತ್ತಮುತ್ತಲಿನ ಹಳ್ಳಿಗಳು "ಬಮ್ಮಾಪೂರ್, ಯಲ್ಲಾಪೂರ, ವೀರಾಪೂರ, ಅರಳಿಕಟ್ಟಿ" ಸೇರಿ ವಿಸ್ತಾರಗೊಂಡು "ಹೊಸಹುಬ್ಬಳ್ಳಿ" ಎಂದು ಹೆಸರು ಪ್ರಾಪ್ತವಾಯಿತು. ಜೊತೆಗೆ ಅನೇಕ ಮಠ, ಮಂದಿರ, ಮಸೀದೆಗಳು ನಿರ್ಮಾಣಗೊಂಡವು. ಹುಬ್ಬಳ್ಳಿ ೩೩ ಸಾವಿರ ಜನಸಂಖ್ಯೆ, ೫೪೫೮ ಮನೆತನಗಳು ಇವೆ. ಇದು "ಬಣಜಿಗರ ಪಟ್ಟಣ"[೪] ಎಂದಿದ್ದಾರೆ.

ಹೊಸದಾಗಿ ನಿರ್ಮಾಣಗೊಂಡ ಊರು ವಿಶಾಲವಾದ ರಸ್ತೆ, ಸಾಲುಮನೆ, ಪೇಟೆಗಳೊಂದೆಡೆ, ಅಂಗಡಿ ಮುಗ್ಗಟ್ಟುಗಳೊಂದೆಡೆ, ವರ್ತಕರ ಮನೆಗಳೊಂದೆಡೆ ಅಚ್ಚುಕಟ್ಟುತನದಿಂದ ಕಟ್ಟಲಾಗಿದೆ. ಇಲ್ಲಿ ವಾರಕ್ಕೊಮ್ಮೆ ಸಂತೆ ನಡೆಯುವುದು. ಅನೇಕ ಪೇಟೆಗಳು ಸ್ಥಾಪಿತಗೊಂಡವು. ಮಂಗಳವಾರ ಪೇಟೆ, ಕಸಬಾ ಪೇಟೆ, ಜವಳಿ ಪೇಟೆ, ಕೌಲ ಪೇಟೆ, ಅಕ್ಕಿ ಪೇಟೆ, ಪಾನ-ಬಜಾರ, ಜಂಗ್ಲಿ ಪೇಟೆ, ದಾಜಿಬಾನ ಪೇಟೆ ಮುಂತಾದವು. ಈ ಪಟ್ಟಣ ಗೋವಾ, ಮುಂಬೈಗಳ ಜೊತೆ ವ್ಯಾಪಾರ ವಹಿವಾಟು ಹೊಂದಿದೆಯಂದು ತಿಳಿದು ಬರುತ್ತದೆ.

ಸ್ವಾತಂತ್ರ್ಯ ಪೂರ್ವದ ಹುಬ್ಬಳ್ಳಿ - ೧೮೧೮ ರಿಂದ ೧೯೪೭ :

ನಮ್ಮ ನಿಂಧದ ನಾಯಕ ಮಹಾದೇವಪ್ಪನವರು ಹುಟ್ಟಿದ್ದು ಸ್ವಾತಂತ್ರ್ಯ ಪೂರ್ವದ ಹುಬ್ಬಳ್ಳಿಯಲ್ಲಿ. ಅದಕ್ಕಾಗಿ ಅಂದಿನ ಹುಬ್ಬಳ್ಳಿಯ ಸಂಕ್ಷಿಪ್ತ ಪರಿಚಯ ಕೊಡುವ ಪ್ರಯತ್ನ ಇಲ್ಲಿ ಮಾಡುತ್ತೇನೆ.

ಬ್ರಿಟೀಷರು ವ್ಯವಹಾರಕ್ಕಾಗಿ ಬಂದವರು, ಇಲ್ಲಿಯ ಪ್ರಕೃತಿ ಸೌಂದರ್ಯ, ಅರಣ್ಯ ಸಂಪತ್ತು, ಜನರ ಸೌಮ್ಯವರ್ತನೆಗಳಿಂದ ಪ್ರಭಾವಿತರಾದರು. ಪರಸ್ಪರ ಕಾದಾಟದಲ್ಲಿ ತೊಡಗಿದ್ದ ಸಂಸ್ಥಾನಿಕರ, ರಾಜರ, ಪಾಳೆಯಗಾರರ ಸ್ವಾರ್ಥ, ದುರಾಸೆ, ಅವಿವೇಕತನಗಳು ಬ್ರಿಟೀಷರಿಗೆ ನೆಲೆಯೂರಲು ದಾರಿಮಾಡಿಕೊಟ್ಟವು. ಈ ಕಾರಣದಿಂದ ಸಮಯ ಪ್ರಜ್ಞೆಯುಳ್ಳ, ಕುಟಿಲ ನೀತಿಯ, ಕೆಂಪಮುಸಡಿಯವರು ತಮ್ಮ ಗುರಿಯನ್ನು ಮುಟ್ಟಲು ಕಷ್ಟವಾಗಲಿಲ್ಲ.

೧೮೧೮ ರಲ್ಲಿ ಮೂರನೆಯ ಮರಾಠಾ ಯುದ್ಧದಲ್ಲಿ ಜಯಗಳಿಸಿದ ಬ್ರಿಟೀಷರು ಭಾರತದಲ್ಲಿ ಗಟ್ಟಿಯಾಗಿ ನೆಲೆಯೂರಲು ಸಾಧ್ಯವಾಯಿತು. ಅವರು ಮುಂಬೈ ಪಟ್ಟಣವನ್ನು ವಸಾಹತುವನ್ನಾಗಿ ಮಾಡಿಕೊಂಡು ಬೀಡು ಬಿಟ್ಟರು. ಮುಂಬೈ ಸಮೀಪದಲ್ಲಿರುವ "ಪುಣೆ" ಪಟ್ಟಣವನ್ನು ತಮ್ಮ ಆಡಳಿತದ ಕೇಂದ್ರ ಸ್ಥಳವನ್ನಾಗಿ ಮಾಡಿಕೊಂಡಿದ್ದರು. ಇದರ ಪರಿಣಾಮವಾಗಿ ಉತ್ತರ ಕರ್ನಾಟಕದ ಜನತೆ ಸರಕಾರದ ಸೌಲಭ್ಯಗಳಿಂದ ವಂಚಿತರಾದರು, ಆಗ ಪುಣೆ ವಿದ್ಯಾಕೇಂದ್ರವಾಗಿತ್ತು. ಇದು ದೂರದ ಪಟ್ಟಣವಾದದ್ದರಿಂದ ವಾಹನಗಳ ಸೌಲಭ್ಯವಿಲ್ಲದ ಕಾಲದಲ್ಲಿ ಎಲ್ಲೂ ವಿದ್ಯೆ ಪಡೆಯುವದು ಸಾಧ್ಯವಿರಲಿಲ್ಲ. ಸಾಮಾನ್ಯ ಜನರಿಗೆ ವಿದ್ಯೆ ಗಗನ ಕುಸುಮವಾಯಿತು. ಆಸಕ್ತಿಯುಳ್ಳ ಕೆಲ ಶ್ರೀಮಂತರು ವಿದ್ಯಾರ್ಜನೆಗಾಗಿ ಹೋದವರು ಕನ್ನಡ ಮರೆತು ಮರಾಠಿ, ಸಂಸ್ಕೃತಿ – ಭಾಷೆಗಳಲ್ಲಿ ಕರಗಿ ಹೋದರು. ಕನ್ನಡಿಗರು ಅಭಿಮಾನ ಶೂನ್ಯರಾದರು. ಕನ್ನಡವನ್ನು ಕೇಳುವವರೇ ಇಲ್ಲದಂತಾಗಿದ್ದಿತು. ಬ್ರಿಟೀಷರ ಆಡಳಿತಕ್ಕೊಳಪಟ್ಟ ಕರ್ನಾಟಕದಲ್ಲಿ ಅಲ್ಲಲ್ಲಿ ಕನ್ನಡ ಪ್ರಾಥಮಿಕ ಶಾಲೆಗಳು ಹುಟ್ಟಿಕೊಂಡವು. ಆ ಸಮಯದಲ್ಲಿ ಹುಬ್ಬಳ್ಳಿ – ಧಾರವಾಡಗಳಲ್ಲಿ ಒಂದೊಂದು ಪ್ರಾಥಮಿಕ ಶಾಲೆಗಳನ್ನು ಪ್ರಾರಂಭಿಸಿದರು. ಮರಾಠಾ ಅಧಿಕಾರಶಾಹಿಗಳ ದೌರ್ಜನ್ಯದಿಂದಾಗಿ ಕನ್ನಡ ಶಾಲೆಗಳಿದ್ದರೂ ಮರಾಠಿಯನ್ನೆ ಕಲಿಸಲಾಗುತ್ತಿತ್ತು. ಇಂಥ ಸಂಧಿಗ್ಧ ಪರಿಸ್ಥಿತಿಯಲ್ಲಿ ಕನ್ನಡಿಗರ ಭಾಷೆ, ಸಂಸ್ಕೃತಿ, ಸಾಮಾಜಿಕ, ಶೈಕ್ಷಣಿಕ, ಆಡಳಿತದ ಬೆಳವಣಿಗೆ ಕುಂಠಿತವಾಯಿತು. ಪರಕೀಯರ ದಬ್ಬಾಳಿಕೆ ಒಂದೆಡೆ ಮರಾಠ – ಪೆಶ್ವೆಗಳ ಪ್ರಭಾವಕ್ಕೊಳಗಾಗಿ ಅಭಿಮಾನ್ಯಶೂನ್ಯರಾಗಿ ತಮ್ಮತನ ಕಳೆದುಕೊಂಡ ಕನ್ನಡಿಗರು, ಇನ್ನೊಂದೆಡೆ, ಸ್ವಕೀಯ ಬಾಂಧವರ ದೌರ್ಜನ್ಯ, ದೌರ್ಬಲ್ಯದಿಂದಾಗಿ ಜನರಲ್ಲಿ ತಾತ್ವಿಕ ವಿಚಾರಕ್ಕೆ ಹಿನ್ನೆಡೆ ಒದಗಿದ್ದು ಸ್ವಾಭಾವಿಕವೇ. ಮಠಾಧೀಶರು ಸಂಸ್ಥಾನಿಕರೊಂದಿಗೆ ಸಹಮತಹೊಂದಿ ತಮ್ಮತನವನ್ನು ಹಾಳುಮಾಡಿಕೊಂಡು ಭಕ್ತರಲ್ಲಿ ಭರವಸೆಯನ್ನು ಉಳಿಸಿಕೊಂಡಿರಲಿಲ್ಲ. ಇಂಥ ಪರಿಸ್ಥಿತಿಯಲ್ಲಿ ಪೆಶ್ವೆಗಳ ಆಳ್ವಿಕೆಗೆ ನಾಂದಿ ಹೇಳಿದ ಬ್ರಿಟೀಷ ರಾಜಕೀಯ ಪ್ರತಿನಿಧಿ 'ಸರ್ ಥಾಮಸ್ ಮನ್ರೊ' (೧೮೧೮)* ಮುಂದಾಳತ್ವದಲ್ಲಿ ಬ್ರಿಟೀಷರು ಧಾರವಾಡ ಪ್ರದೇಶವನ್ನು ವಶಪಡಿಸಿಕೊಂಡು ಯಾವ ಭಾಗಕ್ಕೆ ಸೇರಿಸಬೇಕೆಂದು ಚರ್ಚಿಸಿದರು. ಮರಾಠರ ಅಧಿಪತ್ಯವನ್ನೇ ಕಿತ್ತೆಸದ 'ಸರ್ ಥಾಮಸ್ ಮನ್ರೋ' ಕರ್ನಾಟಕವನ್ನು ಗಮನದಲ್ಲಿಟ್ಟು "ಕನ್ನಡ ಭಾಷೆಯನ್ನಾಡುವ ಪ್ರದೇಶವನ್ನು ಒಂದೇ ಆಡಳಿತಕ್ಕೆ ತರಬೇಕು. ಆಯಾ ಪ್ರದೇಶದ ಜನತೆಯ ಆಡಳಿತ, ಶಿಕ್ಷಣ, ಸಾಮಾಜಿಕ ಸಾಮರಸ್ಯಗಳಿಗಾಗಿ ಕರ್ನಾಟಕವನ್ನು ಮುಂಬೈ ಪ್ರಾಂತ್ಯದ ಅಧಿಪತ್ಯದಿಂದ ಮದ್ರಾಸ್ ಅಧಿಪತ್ಯಕ್ಕೆ ಸೇರಿಸಬೇಕೆಂದು" ಸಲಹೆ ನೀಡಿದ್ದನು.

ಪಾಶ್ಚಾತ್ಯರ ಸಂಪರ್ಕ ಬರುವ ಮೊದಲು ಶಿಕ್ಷಣ "ಗುರುಕುಲದಲ್ಲಿ" ನಡೆಯುತ್ತಿತ್ತು. ಹೊಸ ಹುಬ್ಬಳ್ಳಿಯನ್ನು ನಿರ್ಮಿಸಿದ ಶೆಟ್ಟರು ಹೊಸ ಮಠ ಕಟ್ಟಿ "ಗುರುಕುಲ" ಪ್ರಾರಂಭಿಸಿದರು. ಗುರುಕುಲದಲ್ಲಿ ಋಷಿ ಪರಂಪರೆಯ ಶಿಕ್ಷಣ ಕೊಡಲಾಗುತ್ತಿತ್ತು. ಪಾಠ ಪ್ರವಚನಗಳು ಬಾಯಿಪಾಠ, ಪಾರಾಯಣ ಮೂಲಕ ನಡೆಯುತ್ತಿತ್ತು ಮತ್ತು ಮನೆಯಲ್ಲಿ ತಂದೆ ತಾಯಿಗಳು ತೀಡುವದರ ಮೂಲಕ ಪಾಠ ಹೇಳುತ್ತಿದ್ದರು. ಓದು, ಬರಹ, ಗಣಿತ ವೆಚ್ಚವಿಲ್ಲದೆ ಕಲಿಸಲ್ಪಡುತ್ತಿದ್ದವು. ಸಾಮಾನ್ಯರು ಮತ್ತು ವ್ಯಾಪಾರಿಗಳು ಲೆಕ್ಕದಲ್ಲಿ ಚಾಕುಚಕ್ಯತೆಯಿಂದ ವ್ಯವಹರಿಸುತ್ತಿದ್ದರು.

ಹೊಸ ಮಠವು ಧಾರ್ಮಿಕ, ಸಾಂಸ್ಕೃತಿಕ ಕೇಂದ್ರವಾಗಿತ್ತು. ವ್ಯಾಪಾರಕ್ಕಾಗಿ ಬಂದವರು ಬೇಧ-ಭಾವವಿಲ್ಲದೆ ಶಿವಾನುಭವಗೋಷ್ಠಿಯಲ್ಲಿ ಪಾಲ್ಗೊಳ್ಳುತ್ತಿದ್ದರು. ಇದರಿಂದ ಪ್ರೇರಿತರಾದ ಜನರು ತಮ್ಮ ತಮ್ಮ ಊರುಗಳಲ್ಲಿ ಗುರುಕುಲಗಳನ್ನು ನಿರ್ಮಿಸಿದರು. ವ್ಯಾಪಾರ ಬೆಳೆದಂತೆ ಧರ್ಮ ಬೆಳೆಯಿತು. ವ್ಯಾಪಾರಕ್ಕೆ ಬಂದವರಿಗೆ 'ಚಟಾಕು', 'ಪಾವು' ತೆರಿಗೆ ವಸೂಲು ಮಾಡಲಾಗುತ್ತಿತ್ತು. ಇದರಿಂದ ಮಠದ ಆರ್ಥಿಕ ಸ್ಥಿತಿ ಸುಧಾರಣೆಯಾಯಿತು. ಮಠ ಬೆಳೆದಂತೆ ವಟುಗಳ ಸಂಖ್ಯೆ ಬೆಳೆಯಿತು.

ಸಿದ್ಧಗಿರಿಯ ಕಾಡಸಿದ್ಧರು ಹುಬ್ಬಳ್ಳಿಗೆ ಆಗಾಗ ಬರುತ್ತಿದ್ದರು. ಷಟಸ್ಥಲ, ಕಾಯಕದ ಮಹತ್ವ, ದಾಸೋಹದ ಮಹತ್ವ, ಗುರುವಿನ ಅನುಗ್ರಹವಿಲ್ಲದೆ, ಜಂಗಮ ಪಾದೋದಕವಿಲ್ಲದೆ, ಪ್ರಸಾದ ಸ್ವೀಕರಿಸದ ನಿಯಮ ಅವರದಾಗಿತ್ತು. (ಲಿಂಗಪೂಜೆ ಕಾಲಕ್ಕೆ ಲಿಂಗಾರ್ಪಿತ ಮಾಡಿ ಪ್ರಸಾದ ಸ್ವೀಕರಿಸಬೇಕು). ಗುರುಭಕ್ತಿ, ಜಂಗಮಸೇವೆ, ಆಶೀರ್ವಾದ, ಕಾಣಿಕೆ, ಧಾನ, ಅಡ್ಡಪಲ್ಲಕ್ಕಿ, ಮುತ್ತೈದೆಯರ ಮಂಗಳಾರತಿ ಇವೆಲ್ಲ ಪಂಚದ್ರೋಹ ಪಾಪಕ್ಕೆ ಪರಿಹಾರವೆಂದು ಬೋಧಿಸುತ್ತಿದ್ದರು. ಧಾರ್ಮಿಕ ಕ್ರಿಯಾಚರಣೆಯಲ್ಲಿ ನಿಷ್ಠರಾಗಿ ಆಚರಿಸುವಂಥವರಾಗಿದ್ದರು.

ವಿಜಯನಗರ ಕಾಲದಿಂದ ಇಂದಿನವರೆಗೆ ಅನೇಕ ಏಳು ಬೀಳುಗಳನ್ನು ಕಂಡ "ಹುಬ್ಬಳ್ಳಿ" ಇಂದು ಹುಬ್ಬಿನ ಮೇಲೆ ಕೈ ಇಟ್ಟು ನೋಡಿದರೆ ಕಣ್ಣಿಗೆ ಕಾಣುವ ಪರ್ಯಂತ ಬೆಳೆದು ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ, ಶೈಕ್ಷಣಿಕ ಮತ್ತು ಔದ್ಯೋಗಿಕ ರಂಗದಲ್ಲಿ ಪ್ರಗತಿಯನ್ನು ಸಾಧಿಸಿ ದೇಶದಲ್ಲಿಯೇ ಒಂದು ಮುಖ್ಯ ಪಟ್ಟಣವೆನಿಸಿದೆ. ಇದು ನನ್ನ ಪ್ರಬಂಧದ ನಾಯಕ ಮಹಾದೇವಪ್ಪನವರಿಗೆ ಜನ್ಮಕೊಟ್ಟ ಪಟ್ಟಣ. ಇವರ ಕಾರ್ಯ ದೇಶದುದ್ದಕ್ಕೂ ಹಬ್ಬಿರುವಂತದ್ದು. ಇವರ ವ್ಯಕ್ತಿತ್ವ ನಿರ್ಮಾಣದಲ್ಲಿ ಪ್ರಮುಖ ಪಾತ್ರ ವಹಿಸಿದ "ಹುಬ್ಬಳ್ಳಿ"ಯ ಪರಿಸರ ಮತ್ತು ತಂದೆ ಶಿವಪ್ಪ ಮುರಗೋಡರ ಪರಿಚಯವಿಲ್ಲದೆ ಮಹಾದೇವಪ್ಪನವರ ಚರಿತ್ರೆ ಪೂರ್ತಿಯಾಗಲಾರದೆಂದೇ ಈ ಕಾರ್ಯಕ್ಕೆ ತೊಡಗಿದ್ದೇನೆ.

ಅಡಿಟಿಪ್ಪಣಿ :

೧) ಇತಿಹಾಸದ ದರ್ಶನ – ಸಂಪುಟ ೧೨–೧೯೯೭ "ಹುಬ್ಬಳ್ಳಿಯಲ್ಲೊಂದು ಶಿಲಾಶಾಸನ ಲೇಖನ – ಪ್ರೋ. ಎಚ್. ಆರ್. ರಘುನಾಥ.

೨) ಹುಬ್ಬಳ್ಳಿಯಲ್ಲೊಂದು ಶಿಲಾಶಾಸನ ಲೇಖನ – ಪ್ರೋ. ಎಚ್. ಆರ್. ರಘುನಾಥ.

೩) ಬಸಪ್ಪ ಶೆಟ್ಟರ ಜೀವನ ಚರಿತ್ರೆ. ಪುಟಸಂಖ್ಯೆ – ೧೭ – ರೂಡಗಿ

೪) ಇತಿಹಾಸದ ಸಂಪುಟ – ೪, ೧೯೯೨. ಪುಟಸಂಖ್ಯೆ–೧೭೦, ಎಂ. ವೈ. ಸಾವಂತ.

೫) ಇತಿಹಾಸದರ್ಶನ ಸಂಪುಟ–೪, ೧೯೯೩. ಪುಟಸಂಖ್ಯೆ–೧೭೦, ಎಂ. ವೈ. ಸಾವಂತ.

ಅಧ್ಯಾಯ - ೨

ಮಹಾದೇವಪ್ಪನವರ ಜೀವನ - ಸಾಧನೆ

ಅಧ್ಯಾಯ - ೨

ಮಹಾದೇವಪ್ಪನವರ ಜನನ, ಬಾಲ್ಯ, ವಿದ್ಯಾಭ್ಯಾಸ

ಯದಾಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ ।
ಅಭ್ಯುತ್ಥಾನಧರ್ಮಸ್ಯ ತದಾತ್ಮನಂ ಸೃಜಾಂಮ್ಯಹಮ್ ॥[೧]

ವೇದಾಧ್ಯಯನದಲ್ಲಿ ಬಂದ ಈ ಶ್ಲೋಕದ ತಿರುಳು - ಸತ್ಯ ಸದಾಚಾರವುಳ್ಳ ಧರ್ಮಕ್ಕೆ ಚ್ಯುತಿಯುಂಟಾದಾಗ, ದೈವೀಶಕ್ತಿ ಕ್ಷೀಣಿಸಿ, ಅಸುರ ಶಕ್ತಿವೃದ್ಧಿಗೊಂಡು, ಅಶಾಂತಿ ಉಂಟಾದಾಗ, ವಿಶ್ವಮಾನ್ಯ ಪರಾಶಕ್ತಿ ತನ್ನ ಚಿತ್ಕಳೆಯ ಅಣುವನ್ನು ಭೂಲೋಕಕ್ಕೆ ಕಳಿಸಿ ಧರ್ಮಪಾಲನೆ ಮಾಡುವುದು.

ಅನಕ್ಷರತೆ, ಅಜ್ಞಾನದಿಂದ ಕುಂಠಿತಗೊಂಡ ಧರ್ಮದ ಪುನರುಜ್ಜೀವನಕ್ಕಾಗಿ ೧೮ನೇ ಶತಮಾನದ ಉತ್ತರಾರ್ಧ ಹಾಗೂ ೧೯ನೇ ಶತಮಾನದ ಪೂರ್ವಾರ್ಧದಲ್ಲಿ ಭಾರತದ ವಿವಿಧ ಭಾಗಗಳಲ್ಲಿ ಧರ್ಮಜಾಗ್ರತೆಗೆ ಸತ್ಪುರುಷರು ಜನ್ಮತಳೆದರು. ಅವರಲ್ಲಿ ಕೊಲ್ಲಾಪುರದ "ಕಾಡಸಿದ್ಧ" ಪಂಥದ ಮುರಗೋಡ ಮಹಾದೇವಪ್ಪ. ಉತ್ತರ ಕರ್ನಾಟಕದ ಗುರುಪರಂಪರೆಗೆ, ಹರ ಪರಂಪರೆಗೆ ಪ್ರಸಿದ್ಧವಾದ, ವ್ಯಾಪಾರ ಉದ್ದಿಮೆಗೆ ಪಡುಮೂಲೆ ಕೇಂದ್ರವಾದ "ಹುಬ್ಬಳ್ಳಿ"ಯ ವೀರಾಪೂರ ಓಣಿಯಲ್ಲಿಯ ಪ್ರತಿಷ್ಠಿತ ಮುರಗೋಡರ ಮನೆತನದ, ಶಿವಪ್ರಭು - ಕಾಳಮ್ಮ ಪುಣ್ಯದಂಪತಿಗಳ ಉದರದಲ್ಲಿ ಜನ್ಮ ತಳೆದರು. ಜಗದ ಮಹಾಮನೆಯಲ್ಲಿ ಶರಣರು, ಸಂತರು, ಸತ್ಪುರುಷರು, ವೀರರು, ಋಷಿಗಳು, ಸಾಹಿತಿಗಳು, ಆಧ್ಯಾತ್ಮಿಗಳು, ಕಲಾವಿದರು, ಕವಿಗಳು ಬಾಳಿ ಬೆಳಗಿ ಹೋಗಿದ್ದಾರೆ. ಅವರ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳು ಅವರ ಮಟ್ಟಕ್ಕೇರಿಲ್ಲ ಎನ್ನುವುದನ್ನು ನಾವು ಇತಿಹಾಸದ ಪುಟಗಳನ್ನು ತಿರುವಿ ಹಾಕಿದಾಗ ಕಾಣುತ್ತವೆ.

"ಸಿಂಹದ ಹೊಟ್ಟೀಲೆ ಸಿಂಹನs ಹುಟ್ಟುವದು", "ಬೂದಿಯ ಹೊಟ್ಟೀಲೆ ಬೆಂಕೀನs ಹುಟ್ಟುವುದು". ಆದರೆ ಬೆಂಕಿಯ ಹೊಟ್ಟೀಲೆ ಬೂದಿ ಹುಟ್ಟಬಾರದು. ಮೇಲಿನೆಲ್ಲಾ ಉಲ್ಲೇಖಗಳನ್ನು ನೋಡಿದರೆ ಬೆಂಕಿಯ ಹೊಟ್ಟೀಲೆ ಬೆಂಕಿ ಹುಟ್ಟುವ ಬದಲು ಬೂದಿ ಹುಟ್ಟಿದ್ದೇ ಹೆಚ್ಚು.

ಸತ್‌ಸಂಗ ಪರಿವಾರಿಗಳಾಗಿಯೂ, ತ್ಯಾಗಿಯೂ, ಯೋಗಿಯೂ ಆದ ಶಿವಪ್ರಭುಗಳ ಹೊಟ್ಟೆಯಲ್ಲಿ ಹುಟ್ಟಿದ ಮಗ ಲೋಕ ಬೆಳಗಬಲ್ಲ ವೀರಬಸವಂತರಾಯನ ವೀರ ಅವತಾರಿ

---

೧. ವೇದಾಧ್ಯಾಯ ಶ್ಲೋಕ - ೪ ಪುಟಸಂಖ್ಯೆ : ೭

ಮಹಾದೇವಪ್ಪನವರು. ಶಿವಪ್ರಭುಗಳ ನಾಲ್ಕು ಮಕ್ಕಳಲ್ಲಿ ಮೊದಲನೆಯವ ಗುರುಪಾದಪ್ಪ ಕಾಯಕ ಜೀವಿ. ಸಂಸಾರದಲ್ಲಿದ್ದರು ಪಾರಮಾರ್ಥದ ಕಡೆ ಒಲವು ಉಳ್ಳವ. 'ಶಿವಪ್ರಭುಗಳು' ಇಂಚಗೇರಿ ಪಂಥಕ್ಕೆ ಸಂಪೂರ್ಣವಾಗಿ ತಮ್ಮನ್ನು ತಾವು ಸಮರ್ಪಿಸಿಕೊಂಡಾಗ ಮನೆತನದ ಜವಾಬ್ದಾರಿ ಹೊತ್ತು, ತಂದೆಗೆ ಸಹಾಯಕವಾಗಿದ್ದನು. ವ್ಯಾಪಾರದಿಂದ ಬಂದ ಲಾಭದಲ್ಲಿ ಮನೆ ಮತ್ತು ಸಂಪ್ರದಾಯ ಶರಣರ ಉಟೋಪಚಾರ ನೋಡಿಕೊಂಡಂಥವ. ಇವನ ಧರ್ಮ ಪತ್ನಿ "ನಾಗಮ್ಮ" ಶರಣ ಧರ್ಮಕ್ಕೆ ಚ್ಯುತಿಬರದಂತೆ ಗಂಡನ ಮಾತಿನಂತೆ ನಡೆದವಳು. ಎರಡನೇ ಮಗಳು "ನಾಗಮ್ಮ", ಶರಣಮ್ಮ. ಚಿಕ್ಕವಳಿದ್ದಾಗ ಗಂಡ ತೀರಿಕೊಂಡರೂ ಮರುಮದುವೆಯಾಗದೇ ಇಡೀ ಜೀವನವನ್ನು ತಮ್ಮಂದಿರಾದ ಮಹಾದೇವರ ಪ್ರತಿಯೊಂದು ಕಾರ್ಯದಲ್ಲಿ ಸಹಭಾಗಿಯಾಗಿ ನೆರಳಿನಂತೆ ನೆರವಾಗುತ್ತಿದ್ದಳು. ನಾಲ್ಕನೇ ಮಗಳು "ಪಾರ್ವತಿ", ಮೂರನೆಯವನೇ "**ಮಹಾದೇವಪ್ಪ**", ನನ್ನ ನಿಬಂಧದ ನಾಯಕ.

೧) **ಜನನ :**

ಶರಣ ಚೇತನ, ಶರಣ ದಾಸೋಹಿ ಮತ್ತು 'ಯಜಮಾನ' ಎಂದು ಅಭಿಧಾನ ಹೊಂದಿದ ಶಿವಪ್ರಭು ಮತ್ತು ಪತಿಯ ಪ್ರತಿಯೊಂದು ಕಾರ್ಯದಲ್ಲಿ ಸಹಭಾಗಿತ್ವವಹಿಸುತ್ತಿದ್ದ ಕಾಳಮ್ಮ ದಂಪತಿಗಳ ಉದರದಲ್ಲಿ ೧೮೨೦ ಅಶ್ವಿಜ ಬಹುಳ ದಶಮಿ ಮಂಗಳವಾರ ೨ ನವ್ಹೆಂಬರ್ ೧೯೧೫ ರಂದು ಜನ್ಮತಳೆದನು.[೨]

ಶಿವಪ್ರಭುಗಳಿಗೆ ಗಂಡು ಮಗು ಹುಟ್ಟಿದ ಸುದ್ದಿ ಕ್ಷಣದಲ್ಲೆ ಓಣಿ ತುಂಬ, ಊರತುಂಬ ಹಬ್ಬದ ವಾತಾವರಣ ಮೂಡಿತು. ಊರಿಗೆ ಊರೆ ಸಂತಸ ಪಡುವುದೊಂದೆಡೆಯಾದರೆ, ಹುಟ್ಟಿದ ಮಗು ೧೩ (ಹದಿಮೂರದೆಸೆ) ದಿನಗಳವರೆಗೆ ಅಳದೆ, ಮಿಸಕಾಡದೆ, ಕಣ್ಣು ಪಿಳಕಿಸದೆ, ಕೈಕಾಲುಗಳನ್ನು ಬಿಚ್ಚಿ ಆಡದೆ ಸುಮ್ಮನೆ ಮಲಗಿದ ಆತಂಕ ಇನ್ನೊಂದೆಡೆ. ಮಗನನ್ನು ಕಂಡು ಹೆತ್ತ ಕರುಳು ಮಿಡಿಯುತ್ತಿತ್ತು. ಈ ಪ್ರಸಂಗ "ರಾಘವಾಂಕನು" ಬರೆದ "ಸಿದ್ಧರಾಮ" ಚರಿತ್ರೆಯಲ್ಲಿ ಮುದ್ದುಗೌಡ – ಸುಗ್ಗವ್ವೆಯರ ಮಗ (ಧೂಲಿಮಾಕಾಳ) ಸಿದ್ಧರಾಮನ ನೆನಪು ತರುತ್ತದೆ. ಇವನ ಈ ಸಮಾಧಿ ಸ್ಥಿತಿ ಹುಟ್ಟಿನಿಂದ ಕಟ್ಟಿಕೊಂಡು ಬಂದಂತ್ತಿತ್ತು.

ಧರ್ಮ, ದೇವರು, ಪೂಜೆ, ಪುರಸ್ಕಾರದಲ್ಲಿ ನಂಬಿಗೆ ಇದ್ದ ಮುರಗೋಡರ ಮನೆಯಲ್ಲಿ ಆಗಾಗ ಧಾರ್ಮಿಕ ಕಾರ್ಯಕ್ರಮಗಳು ಜರಗುತ್ತಿದ್ದವು. ಗೀರಮಲ್ಲೇಶ್ವರರು ಹುಬ್ಬಳ್ಳಿಗೆ ಬಂದಾಗ ಅವರ ಮನೆಯ ಪೂಜೆ ಪುನಸ್ಕಾರಗಳಲ್ಲಿ ಪಾಲ್ಗೊಳ್ಳುತ್ತಿದ್ದರು. ಶಿವಪ್ರಭುಗಳಿಗೆ ಗಂಡು ಮಗು ಜನಿಸಿದ ಸುದ್ದಿಯನ್ನು ಕೇಳಿ ಗೀರಮಲ್ಲೇಶ್ವರರು ಹುಬ್ಬಳ್ಳಿಗೆ ಬಂದಾಗ ಸಂತೋಷದಿಂದ ಮಗನನ್ನು ನೋಡಲು ಅವರ ಮನೆಗೆ ಬಂದರು. ಸಮಾಧಿ ಸ್ಥಿತಿಯಲ್ಲಿ ಮಲಗಿದ ಮಗುವನ್ನು ನೋಡಿ ಮುಖದ ಮೇಲಿದ್ದ ಬ್ರಹ್ಮ ತೇಜ ಸುಲಕ್ಷಣ ಮೈಕಾಂತಿ, ಸಧೃಡವಾದ, ಆರೋಗ್ಯಯುತವಾದ ಶರೀರ, ಎಂತೆಂಥವರನ್ನು

---

೨. ಮಾನವ ರೂಪಿ ದೇವರು – ಪುಟಸಂಖ್ಯೆ : ೨ ಲೇಖಕ : ಬಸವರಾಜ ಸ್ವಾಮಿಗಳು

ಮರಳುಗೊಳಿಸುವಂತಿತ್ತು. "ಒಂದು ಕೈಯಲ್ಲಿ ಶಾಸ್ತ್ರ ಇನ್ನೊಂದು ಕೈಯಲ್ಲಿ ಶಸ್ತ್ರ" ಹೊತ್ತು ಹುಟ್ಟಿದ ಮಗುವಿನ ಧ್ಯಾನ, ಸ್ಥಿತಪ್ರಜ್ಞೆ, ಹುಟ್ಟಿನಿಂದಲೇ ಮೈಗಂಟಿಕೊಂಡು ಬಂದಂತ್ತಿದ್ದನ್ನು ನೋಡಿ ಗೀರಮಲ್ಲೇಶ್ವರರು ಹರ್ಷಪುಳಕಿತರಾದರು. ಮಗುವಿನ ಮುಖದಲ್ಲಿಯ ಕಳೆ, ಕಾಂತಿ ನೋಡಿ ಮುಂದೆ ಇವನು ಬ್ರಹ್ಮಜ್ಞಾನಿಯಾಗುವನು. ಕೈಚಳಕ ನೋಡಿ, ಹಣೆಯ ಮೇಲೆ ಕೈಯಾಡಿಸಿ ರಾಜಕೀಯದಲ್ಲಿ ಮುಖ್ಯ ವ್ಯಕ್ತಿಯೂ ಹಾಗೂ ಮಹಾಮೇಧಾವಿಯಾಗುವನು. ಇವನ ಕಾಂತಿಯ ಪ್ರಭೆಯ ಕಿಡಿ ಇಡೀ ಜಗತ್ತಿಗೆ ಪಸರಿಸಿ ಬೆಳಕನ್ನೀಯುವುದು. ಎಲ್ಲರಿಂದಲೂ "ದೇವರೆಂದು" ಕರೆಸಿಕೊಳ್ಳುವಂತವನಾಗುವನು. ಇದಾವುದು ತಿಳಿಯದ ತಾಯಿಗೆ ಮಗ ಮಗನೇ! ತಾಯಿಯ ವಾತ್ಸಲ್ಯ, ಮಮತೆ, ಪ್ರೇಮ ಮಗನ ಮೇಲೆ ಧಾರೆಯಾಗಿ ಸುರಿಯುತ್ತಿತ್ತು. ಜಾತ ಸೂತಕಾತೀತವಾದ ಕೂಸಿಗೆ "ಮಾದೇವನೆಂಬ" ನಾಮಕರಣ ಮಾಡಲು ಹೇಳಿದರು ಮತ್ತು ಮಗುವಿನ ಕಿವಿಯಲ್ಲಿ ಮಹಾಮಂತ್ರವನ್ನು ಭೋದಿಸಿದರು. ಮಹಾದೇವ ಪದವನ್ನು ಗ್ರಾಮೀಣರು ಇದರಿಂದ ಫಲವತ್ತಾದ ಭೂಮಿಯಲ್ಲಿ ಉತ್ಕೃಷ್ಟ (ಶ್ರೇಷ್ಠ)ವಾದ ಬೀಜ ಬಿತ್ತಿದಂತೆ ಆಯಿತು. ಆಗ ಮಗು ಕಣ್ ತೆರೆದು, ಕೈಕಾಲ ಬಿಚ್ಚಿ ಆಡತೊಡಗಿತು, ಅಳತೊಡಗಿತು, ಮನೆಯವರಿಗೆ ಮತ್ತು ಊರಿನವರೆಲ್ಲರಿಗೂ ಸಂತಸದ ಹೊಳೆ ಹೊನಲಾಗಿ ಹರಿಯತೊಡಗಿತು.

ಕೂಸು ಜನಿಸಿದ ಮೇಲೆ ಆತ್ಮ ಸಮಾಧಿ ಸ್ಥಿತಿಯಲ್ಲಿರುವುದು ಅದಕ್ಕೆ ಲಿಂಗವಂತರು ಗುರುವಿನಿಂದ ಲಿಂಗವನ್ನು ಕಟ್ಟಿಸುವ ಪದ್ಧತಿ ಈಗಲೂವುಂಟು. ಲೋಕಕ್ಕೆ ದಾರಿ ದೀಪವಾಗಬಲ್ಲ ಪ್ರಭೆ ತನ್ನಲ್ಲಿ ತಾನೆ ಮುದುಡಿಕೊಂಡಿರುವುದು. ಅದು ಹರಡಬೇಕಾದರೆ ಗುರುವಿನ ಅನುಗ್ರಹಬೇಕು. "ನಿನೋಲಿದರೆ ಕೊರಡು ಕೊನರುವುದಯ್ಯ, ನಿನೋಲಿದರೆ ಬರಡು ಹಯನವುದಯ್ಯ" ಗೀರಮಲ್ಲೇಶ್ವರರ ಅನುಗ್ರಹದಿಂದ ಸಮಾಧಿ ಸ್ಥಿತಿಯಲ್ಲಿದ್ದ ಮಹಾದೇವಪ್ಪನವರ ಆತ್ಮ ಜಾಗ್ರತವಾಯಿತು. ಆತ್ಮಬಲ ವೃದ್ಧಿಗೊಂಡಿತು, ಮುಖದ ಮೇಲಿನ ಬ್ರಹ್ಮತೇಜ ಇಮ್ಮಡಿಗೊಂಡಿತು.

೨) ತೊಟ್ಟಿಲು ಕಾರ್ಯ :

ವಿಧಿ-ವಿಧಾನಗಳನ್ನು ಅನುಸರಿಸಿ ಮಗು ಹುಟ್ಟಿದ ೧೩ನೇ ದಿವಸಕ್ಕೆ ತೊಟ್ಟಿಲಲ್ಲಿ ಹಾಕುವ, ಹೆಸರಿಡುವ ಕಾರ್ಯಕ್ರಮಕ್ಕೆ ಓಣಿಯಲ್ಲಿರುವ ಸುಮಂಗಲೆಯರನ್ನು ಕರೆದರು. ಬಂಧು-ಬಳಗದವರನ್ನು ಕರೆಯಿಸಿಕೊಂಡರು. ಕೂಡಿದ ಮುತ್ತೈದೆಯರಲ್ಲಿ ಅತ್ತೆ ಆಗುವವರು ಉಡಿಯಲ್ಲಿ ಗುಗ್ಗರಿಗಳನ್ನು ಕಟ್ಟಿ (ತುಂಬ) ಕೊಂಡು, ತೊಟ್ಟಿಲದ ಆಚೆ ಈಚೆ ನಿಂತುಕೊಂಡರು. ಮಗುವನ್ನು ತೊಟ್ಟಿಲದ ಮೇಲಿಂದ ಆಚೆ, ಕೆಳಗಿನಿಂದ ಈಚೆ, ಮೇಲಿಂದ ಕೆಳಗೆ - ಕೆಳಗಿನಿಂದ ಮೇಲೆ ಐದು ಸಲ ಹಾಯಿಸಿ ತೊಟ್ಟಿಲಕ್ಕೆ ಹಾಕಿ ಕಿವಿಯಲ್ಲಿ ಊದಿ ನಾಮಕರಣ ಮಾಡುವಾಗ ಸುತ್ತುವರೆದು ನಿಂತಿದ್ದವರೆಲ್ಲ ಊದುವವಳ ಬೆನ್ನಿಗೆ ಚಪ್ಪರಿಸುತ್ತಿದ್ದರು. ತೊಟ್ಟಿಲದ ಹಗ್ಗವನ್ನು ಹಿಡಿದು ತೂಗುತ್ತಾ ಸಂತಸದಿಂದ -

ಜೋ ಜೋ ಎನ್ನ ಗೋಪಿಯಕಂದ
ಜೋ ಜೋ ಎನ್ನ ಮುದ್ದಿನ ಅಂದಾ
ಜೋ ಜೋ ಎಂದು ಜೋಗುಳವ ಹಾಡಿ ಸಂಭ್ರಮದಿಂದ "ಮಾದೇವನೆಂದು" ನಾಮಕರಣ ಮಾಡಿದ ಸಂಭ್ರಮ ಭೂಮಂಡಲವನ್ನೇ ಆವರಿಸುವಂತ್ತಿತ್ತು.

ಬಂದ ಸುಮಂಗಲೆಯರೆಲ್ಲರು ಹೆಸರಿಟ್ಟು ಗುಗ್ಗರಿ ತಿಂದು ತಮ್ಮ ಮನೆಗೆ ತಿರುಗಿ ಹೋಗುಲು ತಯಾರಾದರು. ಆಗ ಗೀರಮಲ್ಲೇಶ್ವರರು ಜೋಗುಳ ಪಾಡದೆ ಹೋಗುವಿರೇನು? ಹಾಗೆ ಮಾಡಬಾರದು ಜೋಗುಳ ಪಾಡಿರೆಂದು ಹೇಳಲು ಜೋಗಳ ಹಾಡಹತ್ತಿದ್ದರು.

ಜೋ ಜೋ ಎನ್ನಿರೆ ಮಾದೇವರಿಗೆ
ಜೋ ಜೋ ಎನ್ನಿರೆ ಶಂಭೋಶಂಕರಿಗೆ
ಜೋ ಜೋ ಎನ್ನಿರೆ ಪರತರ ಶಿವನಿಗೆ
ಹಿಂಗ ಜೋ ಎಂದು ಪಾಡಿರಿ ಮಾಧವನಂದಗೆ
ಮೂಲಸ್ಥಾನವನೊತ್ತಿ ಮುದ್ರೆಯ ನಿಲಿಸಿ ।
ಕೀಲ ಕುಂಡಲಿಯಂಬ ಸರ್ಪನ ಬಿಗಿದು ।
ಸಾಲು ಇಪ್ಪತ್ತೊಂದು ಕೈಲಾಸಕ್ಕೊಂದಿ । ಹಿಂಗ ।
ಘನದೊಳು ತೂಗಾಡುವ ಚಿನ್ಮಯ ಶೀವನೆ ಜೋ ಜೋ ॥ ೧ ॥

ಮೂರು ಮಲಗಳ ಮಾಯಾವಾಸನೆ ಕಳೆದು
ಮೂರು ಲಿಂಗತ್ರಿತನುವಿನಲಿ ತಿಳಿದು ।
ನೂರೊಂದು ಫಲಪದದ ಬಯಕೆಯನಳಿದು । ಹಿಂಗಾ ।
ಮೀರಿದ ಸ್ಥಳದೊಳು ತೂಗುವೆನು ಶಿವನ ಜೋ ಜೋ ॥ ೨ ॥

ಸಾಸಿರ ಕಂಬದ ಮಂಟಪದ ನಡುವೆ
ಈಶ್ವರನೊಲಗವು ನೆಲಿಸಿತುಪೆಳ್ವೆ । ಹಿಂಗ ।
ಭಾಸ್ಕರಕೋಟಿ ಪ್ರಕಾಶನ ಶಿಶುವೆ ಜೋ ಜೋ ॥
ದಳನಾಲ್ಕು ದಳ ಆರು ದಳಹತ್ತರೊಳಗೆ ।
ದಳವು ಹನ್ನೆರಡು ಹದಿನಾರುದಳದೊಳಗೆ ।
ದಳವು ಸಾಸಿರ ಶಿಖಿಯು ಪಶ್ಚಿಮದೊಳಗೆ । ಹಿಂಗ ।
ಕಳೆತುಂಬಿ ತೂಗಾಡಿ ಹೊಳೆಯುವ ದೇವರಿಗೇ ಜೋ ಜೋ ॥

ಒಂದೇ ಪದವನ್ನು ಹಾಡಿದರೆ ಕೂಸು ಒಂದೇ ಮಲಿ ಕುಡಿಯುತ್ತದೆ. ಆದ್ದರಿಂದ ಇನ್ನೊಂದು ಪದವನ್ನು ಹಾಡಿರೆಂದು ಗುರುಗಳು ಹೇಳಲಾಗಿ.

ತೂಗಿರಿ ದೇವರನ ತೂಗಿರೇ ಗುರುವಿನ ತೂಗಿರಿ ಮಾಧವನಂದನ
ತೂಗುತೊಟ್ಟಿಲದಲ್ಲಿ ಮಗ ನಿದ್ರೆ ಮಾಡುವ ಮಾದೇವನ ತೂಗಿರೇ ॥ ಪಲ್ಲ ॥
ಆರುಗುಣ ತಿಳಿದವ ಮೂರುಗುಣ ತಿಳಿದವ
ಆರುಮುರರೊಳ ಬೆಳೆದವನೆ ।

ಮೂಲಸ್ಥಾನನೊತ್ತಿ ಮುದ್ರೆಯ ಬಲಿದಂಥ ।
ಆರೂಢದೇವರನ ತೂಗಿರೇ ॥ ೧ ॥

ಅಷ್ಟಮದವಳಿದವ ಅಷ್ಟಗುಣ ತಿಳಿದವ ।
ಅಷ್ಟಾಂಗಯೋಗದಿ ಬೆರೆದವನೆ
ಅಷ್ಟದಳ ಕಮಲದ ಮಧ್ಯದೊಳಾಡುವ
ತ್ಯಾಗಿದೇವರನ ತೂಗಿರೇ ॥ ೨ ॥

ಆಧಾರ ಸ್ವಾದಿಷ್ಟ ಮಣಿಪೂರನಾಥ ।
ವಿಶುದ್ಧ ಅಗ್ನಿಯ ಚಕ್ರದೊಳು
ತ್ರಿಪುಟಿಯ ಮಧ್ಯದಿ ತ್ರಿಕಾಲ ಇರುವಂಥ
ತ್ರಿವೇಣಿ ದೇವರನ ತೂಗಿರೇ ॥ ೩ ॥

ಆರು ಬೆಟ್ಟದ ಮೇಲೆ ಭೋರೆಂದು ಕೂಗುತ
ಮೂರು ನದಿಯೊಳು ಹರಿದವನೇ
ಘೋರಪಾತಕ ದೂರಮಾಡುವ
ಮಾದೇವರನಿಗೆ ತೂಗಿರೇ ॥ ೪ ॥

ನವನಾದ ನವ ಬಿಂದು ನವ ಕಳೆ ।
ಒಳಗೊಂಡ ನವದ್ವಾರದಲಾಡುವ ।
ನವಶಕ್ತಿ ನವಭಕ್ತಿ ನವವಿರತಿಉಳ್ಳಂಥ
ನವಕೋಟಿದೇವರನ ತೂಗಿರೇ ॥ ೫ ॥

ಈ ರೀತಿಯಾಗಿ ಜೋಗುಳ ಪದಗಳನ್ನು ಹಾಡಿ ಗುರುಗಳಿಗೆ ನಮಿಸಿ ಎಲ್ಲರು ತಮ್ಮ ತಮ್ಮ ಮನೆಗೆ ಹೋರಟು ಹೋದರು.

ಬಿದಿಗೆಯ ಚಂದ್ರನಂತೆ ದುಂಡನೆಯ ಮುದ್ದು ಮುಖ, ಬ್ರಹ್ಮತೇಜ ಕಳೆ ಮುಖದ ಮೇಲೆ ನಲಿದಾಡುತ್ತಿತ್ತು. ಪದ್ಮಪತ್ರದಂತ ವಿಶಾಲವಾದ ಕಣ್ಣುಗಳಿಂದ ತೇಜಃ ಪುಂಜವಾದ ಕಾಂತಿ ಸೂಸುತ್ತಿತ್ತು. ವಿಶಾಲವಾದ ಹಣೆ, ಹರವಾದ ಎದೆ, ಅಚ್ಚು ಕಟ್ಟಾದ ಮೈ, ಕಾಮನ ಬಿಲ್ಲಿನಂತೆ ತೀಡಿ ತಿದ್ದಿದ ಕಣ್ಣಿನ ಕುಡಿನೋಟ, ಸಕಲ ಅವಯವಗಳೊಂದಿಗೆ ಸುಲಕ್ಷಣವಾಗಿದ್ದ ಮಗುವನ್ನು ನೋಡಿದವರೆಲ್ಲರಿಗೂ ಪ್ರೀತಿವುಂಟಾಗಿ ಎತ್ತಿ ಮುದ್ದಾಡಬೇಕೆನಿಸುತ್ತಿತ್ತು. ದಿನೇ ದಿನೇ ಬೆಳೆದ ಎಲ್ಲರಿಗೂ ಅಕ್ಕರೆಯ ಮಗುವಾಗಿ "ಮಾದೇವ"ನೆನಿಸಿಕೊಂಡ.

೩) ಬಾಲ್ಯ :

ಮಹಾದೇವಪ್ಪ ಬೆಳದು ದೊಡ್ಡವನಾದಂತೆ ಸ್ವಭಾವದಲ್ಲಿ ವ್ಯತ್ಯಾಸ, ಹಟಮಾರಿತನ, ತುಂಟತನ ಬಹಳ, ಹಿಡಿದ ಹಟ ಬಿಡದವ "ಶರೀರಮಾದ್ಯಂ ಖಲುಧರ್ಮಸಾಧನಂ" ದೈಹಿಕ ಬೆಳವಣಿಗೆಯ ಬಗೆಗೆ ಅರಿತು ಅನುಸರಿಸಿ ಅಳವಡಿಸಿಕೊಂಡಿದ್ದ. ಅದಕ್ಕಾಗಿ ಊಟ, ನೀರು, ನಿದ್ರೆ ಮರೆತು ಆಡುವುದರಲ್ಲಿಯೇ ಕಾಲಕಳೆಯುತ್ತಿದ್ದ. ಪ್ರತಿದಿನ ಗರಡಿ ಮನೆಗೆ ಹೋಗಿ ವ್ಯಾಯಾಮ ಮಾಡುವುದು, ತಾಲೀಮು ತೆಗೆಯುವುದು, ಲೋಡುತಿರುವುವದು, ಭಾರ ಎತ್ತುವ, ಸಾಧನೆ ಮಾಡುತ್ತಿದ್ದ. "ಕುಸ್ತಿ" ಇವರ ವಿಶೇಷವಾದ ಆಟ. "ನಾನಾ" ಎಂದು "ಜಗಜಟ್ಟಿ"ಯಂದು ಪ್ರಖ್ಯಾತಿ ಪಡೆದ ಪಟುಗಳನ್ನು ಸೋಲಿಸಿದ್ದ ಮತ್ತು ಕುಸ್ತಿ ಆಟಗಾರರಿಗೆ ಸ್ವತಃ ಮಾರ್ಗದರ್ಶನ ಮಾಡುತ್ತಿದ್ದ. ಕುಸ್ತಿ ಪಟುಗಳಿಗೆಲ್ಲ ಗೌರವದ "ಗುರು" ಎನಿಸಿದ್ದ. ಇದಕ್ಕೆ ಸಾಕ್ಷಿ ಕುಸ್ತಿ ಪಟುಗಳ ಕೊರಳಲ್ಲಿ ಇಂದಿಗೂ "ಮಹಾದೇವಪ್ಪನವರ" ಚಿತ್ರವಿರುವ ತಾಯಿತ ಕಾಣುತ್ತೇವೆ.

ದೈಹಿಕ ಬೆಳವಣಿಗೆಯ ಜೊತೆ ಆಧ್ಯಾತ್ಮಿಕ ಸಾಧನೆಗೆ ತೊಡಗಿದ. ಚಿಕ್ಕವನಿದ್ದಾಗ ಚ್ಯೂಟಿಯಾಗಿದ್ದ, ಐದು ವರ್ಷದವನಿದ್ದಾಗ ನಡುರಾತ್ರಿಯಲ್ಲಿ ಸುಡಗಾಡಕ್ಕೆ ಹೋಗಿ ಧ್ಯಾನಸ್ಥನಾಗಿ ಕೂಡುತ್ತಿದ್ದ. ಜ್ಞಾನ ದಾಹ ತೀರಿಸಿಕೊಳ್ಳಲು "ಧ್ಯಾನ" ಮಾಡಿದ ಸ್ಥಳ, ಉಣಕಲ್ಲ ಗುಡ್ಡದ ಕೊಳ್ಳ, ಸ್ಮಶಾನ (ಗೂಗಿ ಸರೋವರ), ಇಚ್ಚಂಗಿಯವರ ತೋಟ, ರೇಲ್ವೆ ಗೇಟ್ ಹತ್ತಿರದ ದೊಡ್ಡಮನೆ, ಧಾರವಾಡದಲ್ಲಿಯ ಝುಠಾರೆ ಬಂಗ್ಲೆ, ಮಹಲಿಂಗಪುರದ ಗುಡ್ಡ, ಬೆಳಗಾವಿ ಗುಡ್ಡ, ಸಾವಳಗಿ ಗುಡ್ಡಗಳಲ್ಲಿ ಧ್ಯಾನಕ್ಕೆ ಕುಳಿತ ಬಿಟ್ಟರೆ ತನ್ನನ್ನೇ ತಾನು ಮರೆತು ಮನೆಕಡೆಗೆ ಬರುತ್ತಿರಲಿಲ್ಲ. ಮಗನ ಮೇಲಿನ ಮಮತೆಯಿಂದ ಮಗ ಮನೆಗೆ ಬರುವದು ತಡವಾದಾಗ ಹೆತ್ತ ಕರಳುಗಳು ತುಡಿಯುತ್ತವೆ. ಶಿವಪ್ರಭುಗಳು ಹುಡುಕಿ ಕರೆತಂದು ಬುದ್ಧಿ ಹೇಳುತ್ತಿದ್ದರು. ಸ್ಮಶಾನದಲ್ಲಿ ಒಬ್ಬಂಟಿಗನಾಗಿ ಕೂಡ್ರುವದು, ತಂದೆ – ತಾಯಿಗಳ ಮಾತನ್ನು ಮೀರುವುದು ಮಕ್ಕಳ ಲಕ್ಷಣವಲ್ಲ. "ಯಜಮಾನರೇ" ನನ್ನ ತಾಯಿ ಸುಡಗಾಡಕ್ಕೆ ಹೋಗು ಎಂದಾಗ ತಾಯಿಯ ಮಾತನ್ನು ಮೀರಲಾರದೆ ನಾನು ಸುಡಗಾಡಿಗೆ ಹೋರಟಿದ್ದೇನೆ. ತುಂಟತನಕ್ಕೆ ಧೈದದ್ದಕ್ಕಾಗಿ ಹಠಮಾರಿತನದಿಂದ ವರ್ತಿಸುವುದು ಸರಿಯೇನು. ಶ್ರೀ ರಾಮಚಂದ್ರ ೧೪ ವರ್ಷ ವನವಾಸ ತೆಗೆದದ್ದು ತಾಯಿಯ ಮಾತಿಗಾಗಿಯಲ್ಲವೇನು. ಅದಕ್ಕೆ ನಾನು ನನ್ನ ತಾಯಿಯ ವಚನ ಪಾಲಿಸಿದ್ದೇನೆ.

ಊಟ, ನೀರು, ನಿದ್ರೆ, ಬಿಟ್ಟು, ದೈಹಿಕ ಮತ್ತು ಆಧ್ಯಾತ್ಮಿಕ ಸಾಧನೆಯಲ್ಲಿ ತೊಡಗಿದ. ತುಂಟನಾಗಿದ್ದ ಈತ ಮನೆಯಲ್ಲಿಯ ಎಲ್ಲ ಹಣವನ್ನು ತೆಗೆದುಕೊಂಡು ಹೋಗಿ, ದೀನದಲಿತರಿಗೆ, ಬಡವರಿಗೆ ಹಂಚುತ್ತಿದ್ದ. ಯಾಕೆ ಮಾದೇವಾ ಹಣ ಯಾಕೆ ಕದ್ದೀದಿ, ಎಲ್ಲಿಟ್ಟದ್ದೀ ತಗೊಂಡು ಬಾ ಎಂದಾಗ, ನನ್ನ ಹಣ ನಾನು ತಗೊಂಡ ಹೋಗಿದ್ದೇನೆ ಅದನ್ನ ತಗೊಂಡು ನೀವೇನು ಮಾಡುವವರಿದ್ದೀರಿ ಎಂದು ಉತ್ತರಿಸುತ್ತಿದ್ದ.

ನೀ ಇನ್ನೂ ಚಿಕ್ಕವ ಇಷ್ಟೊಂದು ಹಣ ಎಲ್ಲಿಂದ ತಂದೀದಿ ನೀನು ಎಂದು ಗದರಿಸಿದಾಗ, ಒಮ್ಮೆ ಕಳ್ಳರು ಕಳ್ಳತನಕ್ಕೆ ಮನೆಗೆ ಬಂದಾಗ, ನಾನು ಮಲಗಿದ ನಿಮ್ಮನ್ನು ಎಬ್ಬಿಸಿ ಹಣ ಉಳಿಸಿದ್ದೇನೆ. ಅದಕ್ಕೆ ಆ ಹಣ ನನ್ನದು ಎಂದು ಉತ್ತರಿಸಿದ. ಬೆಳೆದ ಮಗ ಹರೆಯಕ್ಕೆ ಬಂದಾಗ ಆತನ ಮದುವೆಯ ಸಲುವಾಗಿ ಪಾಲಕರು ಚಿಂತಿತರಾಗುತ್ತಾರೆ.

೪) ವಿದ್ಯಾಭ್ಯಾಸ :

ಮಾನವನಿಗೆ ಮಾನಸಿಕ ಮತ್ತು ಬೌದ್ಧಿಕ ಬೆಳವಣಿಗೆಯ ಜೊತೆ ದೈಹಿಕ ಬೆಳವಣಿಗೆಯ ಶಿಕ್ಷಣ ಅವಶ್ಯ. (ವಿದ್ಯೆ) ಶಿಕ್ಷಣ ಸುಸಂಸ್ಕೃತನಾಗಿ ಒಳ್ಳೆಯ ಸುಂದರ ಮೂರ್ತಿಯನ್ನಾಗಿ ಮಾಡುವುದು. ಕಲ್ಲನ್ನು ಸಂಸ್ಕಾರದಿಂದ ಒಳ್ಳೆಯ ಸುಂದರವಾದ ಮೂರ್ತಿಮಾಡಬಹುದು. ಮೃಗಗಳನ್ನು ಒಳ್ಳೆಯ ಸಂಸ್ಕಾರದಿಂದ ಪಳಗಿಸಿ ತರತರದ ಆಟ ಆಡಿಸಿ ಮನರಂಜನೆ ಮಾಡಬಹುದು. ಅದರಂತೆ ಒಳ್ಳೆಯ ಸಂಸ್ಕಾರ ಹೊಂದಿದ ಮನುಷ್ಯ ದೇವಮಾನವನಾಗಬಹುದು. "ಶಿಕ್ಷಣವೇ ಸರ್ವಸಾಧನೆಗೆ ತಳಪಾಯ" ಇದರಿಂದ ಘನತೆ ಗೌರವ ಹೆಚ್ಚಾಗುವುದು. ಸಮಾಜದಲ್ಲಿ ಗಣ್ಯವ್ಯಕ್ತಿಗಳಾಗಿ ಬಾಳಲು ಅವಕಾಶ. ಇದರಿಂದ ಹಟಮಾರಿತನ, ತುಂಟಾಟ ತೊಲಗುವದು. ಶಿಕ್ಷಣದ ಮಹತ್ವ ತಿಳಿದ "ಶಿವಪ್ರಭುಗಳು" ಎಲ್ಲರಿಗೂ ಮುದ್ದುಮುದ್ದಾಗಿ ಬೆಳೆದ ಮುದ್ದು ಮುಖ ಹೊಂದಿದ ಮಹಾದೇವಪ್ಪನವರನ್ನು ಶಾಲೆಗೆ ಹಚ್ಚಲು ಸಿದ್ಧರಾದರು.

ಅದೇ ಸಮಯದಲ್ಲಿ ಬ್ರಿಟೀಷರ ಆಡಳಿತದಿಂದ ಭಾರತದ ಹಳ್ಳಿ-ಪಳ್ಳಿಗಳಲ್ಲಿ ಪ್ರಾಥಮಿಕ ಶಾಲೆಗಳು ಸ್ಥಾಪಿತಗೊಂಡವು. ಹುಬ್ಬಳ್ಳಿಯಲ್ಲಿ ಪೂರ್ಣ ಪ್ರಾಥಮಿಕ ಶಾಲೆ ಸ್ಥಾಪಿತವಾಯಿತು. ಇಲ್ಲಿ ೭ನೇ ಇಯತ್ತೆಯವರೆಗೆ ಕಲಿಸಲಾಗುತ್ತಿತ್ತು. ಇಂದಿನ ೭ನೇ ಇಯತ್ತೆಗೆ "ಮುಲ್ಕಿ" ಪರೀಕ್ಷೆಯೆಂದು ಕರೆಯುತ್ತಿದ್ದರು. ಈ ಶಾಲೆಗೆ ವಿದ್ಯಾರ್ಜನೆಗಾಗಿ ಸುತ್ತಲಿನ ಹಳ್ಳಿಗಳಿಂದ ವಿದ್ಯಾರ್ಥಿಗಳು ಬರುತ್ತಿದ್ದರು. ಮುಖ್ಯ ಪರೀಕ್ಷೆಗಳು ಜಿಲ್ಲಾ ಕೇಂದ್ರಗಳಲ್ಲಿ ನಡೆಯುತ್ತಿದ್ದವು. ಪರೀಕ್ಷೆಗಳನ್ನು ತಂದೆ-ತಾಯಿಗಳು ಗಾಡಿಕಟ್ಟಿಕೊಂಡು ನೋಡಲಿಕ್ಕೆ ಬರುತ್ತಿದ್ದರು. ಪರೀಕ್ಷೆಯ ಫಲಿತಾಂಶ ವರ್ತಮಾನ ಪತ್ರಿಕೆಯಲ್ಲಿ ಪ್ರಕಟವಾಗುತ್ತಿತ್ತು. ಅದರಲ್ಲಿ ಪಾಸಾದವರು ಕೆಲವೇ ಕೆಲವರು. ಆಗಿನ "ಮುಲ್ಕಿ" ಪರೀಕ್ಷೆ ಎಷ್ಟೊಂದು ಮಹತ್ವ ಪಡೆದಿತ್ತೆಂದು ಇದರಿಂದ ತಿಳಿದು ಬರುವುದು.

ಮುಲ್ಕೀ ಪರೀಕ್ಷೆ ಪಾಸಾದವರಿಗೆ ಸಮಾಜದಲ್ಲಿ ಗೌರವ ಮತ್ತು ಬ್ರಿಟೀಷ ಸರಕಾರದಿಂದ ನೌಕರಿ, ಜೊತೆಗೆ ಸರಕಾರದ ಗೌರವದ ಅವಕಾಶ ಕಲ್ಪಿಸಿಕೊಡುತ್ತಿತ್ತು. ಸಮಾಜದಲ್ಲಿ ಗಣ್ಯವ್ಯಕ್ತಿಗಳಾಗಿ ಬಾಳುತ್ತಿದ್ದರು. ತಂದೆ-ತಾಯಿಗಳು ಮಕ್ಕಳ ಸುಖಕ್ಕಾಗಿ, ಮನೆತನದ ಗೌರವಕ್ಕಾಗಿ ಭೂಮಿಗಳಿಸುವದು ಸಹಜ. ಈ ಭೌತಿಕ ಸಂಪತ್ತನ್ನು ಅಪಹರಿಸಬಹುದು. ಇದು ಹಾಳಾಗಿ, ನಶಿಸಿ ಹೋಗಬಹುದು. ಆದರೆ ಹಾಳಾಗದ, ನಶಿಸಿ ಹೋಗದ ಅನರ್ಘ್ಯರತ್ನ ವಿದ್ಯಾಸಂಪತ್ತನ್ನು ಯಾರಿಂದಲೂ ಅಪಹರಿಸಲು ಸಾಧ್ಯವಿಲ್ಲವೆಂದು ತಿಳಿದ ಶಿವಪ್ಪನವರು ಮಗನನ್ನು ಶಾಲೆಗೆ ಕಳಿಸಲು ನಿರ್ಧರಿಸಿದರು.

ಸುಸಂಸ್ಕೃತರು, ಜನಪ್ರೀಯ ಸದ್ಗ್ರಹಸ್ಥರು, ಸದಾ ಸಾರ್ವಜನಿಕ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡವರು, ಮನೆತನದ ಅಭಿವೃದ್ಧಿ ಕಡೆಗೆ ಲಕ್ಷವಹಿಸಿದ್ದರು. ಮಕ್ಕಳು ಸುಶಿಕ್ಷಿತರಾಗಬೇಕು ಸಮಾಜದಲ್ಲಿ ಗಣ್ಯ ಪ್ರತಿಷ್ಠಿತ ವ್ಯಕ್ತಿಯಾಗಬೇಕೆಂಬ ಆಸೆ ಗುರಿಯುಳ್ಳವರಾಗಿದ್ದ ಶಿವಪ್ರಭು ಎಲ್ಲರಿಗೂ ಮುದ್ದುಮುದ್ದಾಗಿ ಬೆಳೆದ ಮಹಾದೇವಪ್ಪನನ್ನು ಯಜಮಾನರು ಕರೆದುಕೊಂಡು ಹೋಗಿ "ಹಳೆ ಹುಬ್ಬಳ್ಳಿಯ ವೀರಾಪೂರ ಓಣಿಯಲ್ಲಿರುವ ಕನ್ನಡ ಪ್ರಾಥಮಿಕ ಶಾಲೆಗೆ" ಶುಭದಿನದಂದು ಹೆಸರು ಹಚ್ಚಿದರು. ಆ ಶಾಲೆಯಲ್ಲಿದ್ದ ಶಿಕ್ಷಕರು "ಶಿರಹಟ್ಟಿಮಠ" ಹೆಸರಿನವರು. ಇವರು ಶಿವಪ್ರಭುಗಳ ಎದುರಿನ ಮನೆಯವರು. ಮಗುವನ್ನು ನೋಡಿದಾಕ್ಷನ ಈ ಮಗು ಮುಂದೆ ಮಹಾನ್ ವ್ಯಕ್ತಿ, ಸಮಾಜ ಸುಧಾರಕನಾಗುತ್ತಾನೆ, ಜ್ಞಾನಿಯಾಗುವ ಲಕ್ಷಣ, ಸುಲಕ್ಷಣವಾದ ಮುಖದ ಮೇಲಿನ ಚಿನ್ಹೆಯನ್ನು ಕಂಡು ಮಹಾದೇವನನ್ನು ಕರೆದು ಅವನ ಬೆನ್ನ ಮೇಲೆ ಕೈಯಾಡಿಸಿದರು. "ಏನಪ್ಪ! ನೀನು ನಮ್ಮ ಶಾಲೆಯಲ್ಲಿ ಓದುತ್ತೀಯಾ, ಕಲಿಯುವ ಅಭಿರುಚಿಯಿದೆಯಾ, ನಿನ್ನ ಹೆಸರೇನೆಂದು ಕೇಳಿದರು. ಹಾಜರಿ ಪುಸ್ತಕದಲ್ಲಿ ಹೆಸರನ್ನು ನೊಂದಾಯಿಸಿಕೊಂಡರು. ಅಂದಿನ ಪ್ರಾರಂಭದ ವರ್ಗದ ಹೆಸರು "ಭಿನ್ ಇಯತ್ತೆ, ದೊಡ್ಡಬಿನ್ ಇಯತ್ತೆಯಾದ (ಅದಕ್ಕೆ ಇಂದು ನಾವು, ಎಲ್.ಕೆ.ಜಿ – ಯು.ಕೆ.ಜಿ) ಮೇಲೆ ಒಂದನೇ ವರ್ಗ, ಪ್ರಾರಂಭ ಅಲ್ಲಿಂದ ಓದು ಬರಹದ ಜೊತೆಗೆ ಆಡಲಿಕ್ಕೆ ಹಚ್ಚುವದು, ಇತರ ಚಟುವಟಿಕೆಗಳು ನಡೆಯುತ್ತಿದ್ದವು. ಗುರುಗಳು ಹುಡುಗನ ಮುಖಲಕ್ಷಣ ನೋಡಿ ಇಂಥ ಹುಡುಗ ನಮ್ಮ ಶಾಲೆಗೆ ಬಂದದ್ದು ನಮ್ಮ ಪುಣ್ಯವೆಂದು ತಿಳಿದರು. ಅಂದಿನಿಂದ ಬಾಲಕ ಮಹಾದೇವಪ್ಪನವರ ಮನೆಯಿಂದ ಶಾಲೆಗೆ ಹೋಗುವಾಗ ತಮ್ಮ ವರ್ಗ ಗುರುಗಳಾದ ಶಿರಹಟ್ಟಿಮಠರ ಸಂಗಡ ಹೋಗಿ ಬರುತ್ತಿದ್ದನು. ಮಹಾದೇವಪ್ಪನವರಿಗೆ ಶಾಲೆಗೆ ಹೋಗುವುದೆಂದರೆ ಸೆರೆಮನೆಗೆ ಹೋದಂತೆ, ಸದಾ ತುಡಿಯುವ ಮನೊಧೋರಣೆ ಹೊಂದಿದ ಮಹಾದೇವಪ್ಪನವರಿಗೆ ನಾಲ್ಕು ಗೋಡೆ ಮಧ್ಯೆ ಕುಳಿತು ಕಲಿಯುವ ಶಿಕ್ಷಣ, ಶಾಲೆಗೆ ಹೋಗುವದೆಂದರೆ ಸೆರೆಮನೆಗೆ ಹೋದಂತೆ, ಆದರೂ ತಂದೆಯ ಒತ್ತಾಯಕ್ಕೆ ಹೋಗುತ್ತಿದ್ದನು.

"ಬೆಳೆಯುವ ಸಿರಿ ಮಳಕೆಯಲ್ಲಿ" ಎಂಬಂತೆ ಮಹಾದೇವಪ್ಪನವರ ಬಾಲ್ಯದಿಂದಲೇ ಚುರುಕಾದ ಹುಡುಗ ಆಕರ್ಷಕ – ಮನಮೋಹಕ ವ್ಯಕ್ತಿತ್ವ ಹೊಂದಿದ್ದು, ಶಾಲೆಯಲ್ಲಿರುವ ಎಲ್ಲ ವಿದ್ಯಾರ್ಥಿಗಳಿಗಿಂತಲೂ ಸೂಕ್ಷ್ಮ ಬುದ್ಧಿಯುಳ್ಳವ, ಚಾಣಾಕ್ಷನಾಗಿದ್ದನು. ಇವನು ಗುರು ವರ್ಗದವರಿಗೆಲ್ಲ ಬೇಕಾದವ. ಗುರುಗಳೆಲ್ಲ ಇವನ ಮೇಲೆ ಅಪಾರವಾದ ಪ್ರೀತಿ ಹೊಂದಿದ್ದರು. ಗುರುಗಳು ಪಾಠ ಹೇಳುವಾಗ ಲಕ್ಷಕೊಟ್ಟು ಕೇಳುತ್ತಿದ್ದನು. ಹೇಳಿದ್ದನ್ನು ಚಾಚೂತಪ್ಪದೆ ಮಾಡಿಕೊಂಡು ಬರುತ್ತಿದ್ದ. ಯಾರ ಜೊತೆ ಜಗಳವಾಡದೆ, ಎಂಥವರಿದ್ದರೂ ಅವರ ಜೊತೆಗೆ ಹೊಂದಿಕೊಳ್ಳುವ ಸ್ವಭಾವದವನು. ವಿದ್ಯಾರ್ಥಿ ಗೆಳೆಯರಿಗೆ ಏನಾದರೂ ಕಷ್ಟ, ತೊಂದರೆ ಬಂದರೆ ಅವರಿಗೆ ಸ್ಪಂದಿಸಿ ನಿವಾರಿಸುತ್ತಿದ್ದನು. ಆದ್ದರಿಂದ ಇವನನ್ನು ವಿದ್ಯಾರ್ಥಿ ಗೆಳೆಯರು ಆಧರಿಸುತ್ತಿದ್ದರು. ಅವರಲ್ಲಿ ಸಹಭಾಗಿತ್ವ ಹೊಂದಿ ಪರಿಹಾರ ಕಂಡುಕೊಂಡು ನಿವಾರಿಸುವ ಸಾಮರ್ಥ್ಯ ಚಿಕ್ಕಂದಿನಲ್ಲೆ ಹೊಂದಿದ್ದನು.

ವರ್ಗಗಳಿಗೆ ಶಿಕ್ಷಕರು ಬರದಿದ್ದ ಸಮಯದಲ್ಲಿ ಮಹಾದೇವಪ್ಪನವರು ಆ ವರ್ಗದ ಗುರುವಾಗಿ ಬಿಡುತ್ತಿದ್ದನು. ಎಲ್ಲರಿಗೂ ಧ್ಯಾನದ ಮಹತ್ವ ಹೇಳಿ ಧ್ಯಾನ ಮಾಡಿಸುತ್ತಿದ್ದ, ಮಕ್ಕಳಿಗೆಲ್ಲ ಆತ ಹೇಳಿದ್ದೇ ವೇದ ವಾಕ್ಯ!

ಮಹಾದೇವಪ್ಪನವರು ವಿದ್ಯಾರ್ಥಿ ಇರುವಾಗಲೇ ಅಪೂರ್ವವಾದ ಸಂಘಟನಾ ಶಕ್ತಿಯನ್ನು ಹೊಂದಿದ್ದರು. ಶಾಲೆಯಲ್ಲಿ ಯಾವುದಾದರೂ ಕಾರ್ಯಕ್ರಮ ನಡೆದರೆ ಅದರಲ್ಲಿ ಮುಂದಾಳತ್ವವಹಿಸಿ ಎಲ್ಲ ವಿದ್ಯಾರ್ಥಿಗಳನ್ನು ಸಂಘಟಿಸಿ ಕೆಲಸ ಪೂರೈಸಿಕೊಂಡು ಹೋಗುವ ಜಾಣ್ಮೆವುಳ್ಳವನಾಗಿದ್ದನು. ಕೆಲಸಲ ಗುರುಗಳು ಇನ್ನುಳಿದ ವಿದ್ಯಾರ್ಥಿ ಗೆಳೆಯರನ್ನು ನೋಡಿಕೊಳ್ಳಲಿಕ್ಕೆ ಹೇಳಿ ಹೋಗುತ್ತಿದ್ದರು. ಸಮಯ ಸಾಧಿಸಿ ಮಹಾದೇವಪ್ಪನವರು ವಿದ್ಯಾರ್ಥಿ ಗೆಳೆಯರನ್ನೆಲ್ಲ ಒಂದೆಡೆ ಕೂಡಿಸಿ ದೇವರ ಧ್ಯಾನ, ಆಧ್ಯಾತ್ಮದ ಮಹತ್ವ, ಶರಣರ ತತ್ವಗಳನ್ನು ಬೋಧನೆ ಮಾಡುತ್ತಿದ್ದನು. ಕೆಲವು ಸಲ ಎಲ್ಲ ವಿದ್ಯಾರ್ಥಿಗಳನ್ನು ಸ್ಮಶಾನಕ್ಕೆ ಕರೆದುಕೊಂಡು ಹೋಗಿ ಧ್ಯಾನ ಮಾಡಲಿಕ್ಕೆ ಹಚ್ಚಿ ತಾನು ಸಮಾಧಿಸ್ತನಾಗುತ್ತಿದ್ದನು.

ಬೌದ್ಧಿಕ ಬೆಳವಣಿಗೆಗೆ ಮತ್ತು ಧ್ಯಾನ ಸಾಧನೆಗೆ ಲಕ್ಷಕೊಟ್ಟ ಮಹಾದೇವಪ್ಪನವರು ದೈಹಿಕ ಬೆಳವಣಿಗೂ ಮಹತ್ವ ಕೊಟ್ಟಿದ್ದನು. ಅದೇ ಶಾಲೆಯಲ್ಲಿ ವ್ಯಾಯಾಮ ವರ್ಗಗಳು (ಇಂದಿನ ಪಿ.ಇ) ನಡೆಯುತ್ತಿದ್ದವು. ಚಿಕ್ಕಂದಿನಿಂದಲೂ ವ್ಯಾಯಾಮದ ಬಗ್ಗೆ ಅಭಿರುಚಿ ಹೊಂದಿದ್ದನು. ವ್ಯಾಯಾಮ ವರ್ಗಗಳು ಇವನಿಗೆ ಪ್ರಚೋದನೆ ನೀಡಿದವು. ಅಭ್ಯಾಸದ ಜೊತೆಗೆ, ಯೋಗಾಸನ, ಶಾಲೆಯಲ್ಲಿ ನಡೆಯುವ ಕವಾಯತು, ಕಸರತ್ತು, ಲಾಠಿ ವರ್ಗಗಳಲ್ಲಿ ಸೇರಿ ಹುಮ್ಮಸ್ಸಿನಿಂದ ಕಲಿಯತೊಡಗಿದನು. ಶಾಲೆಯಲ್ಲಿ ಹಾಡುವ ರಾಷ್ಟ್ರಗೀತೆಗಳು, ಹುಮ್ಮಸ್ಸಿಗೆ ಮತ್ತೊಂದು ಬಲವಾದ ಕಾರಣ. ಇಲ್ಲಿ ಅವನಿಗೆ ದೇಶ ಭಕ್ತಿಯ ಬೀಜಾರೋಪಣ ಮಾಡಿದಂತಾಯಿತು. ಅದಕ್ಕೆ ಇನ್ನೊಂದು ಪೂರಕ ವಾತಾವರಣ ಆತನಿಗೆ ಹುಬ್ಬಳ್ಳಿಯ "ಸೇವಾದಲದ" ಚಟುವಟಿಕೆಗಳಿಂದ ದೊರೆಯಿತು.

ಕವಾಯತ ಕಲಿಯುವಾಗ, ಆಟ ಆಡುವಾಗ, ಸಂಘ ಪ್ರೀತಿ ಮೊಳಕೆಯೊಡೆದುದು ಮುಂದೆ ಜೀವನದಲ್ಲಿ ಉದಾತ್ತ ಧ್ಯೇಯಕ್ಕಾಗಿ ಕೂಡಿ ಮಾಡಬೇಕಾದ ಹೋರಾಟ. ತಪಸ್ಸುಗಳ ಪೂರ್ವಸಿದ್ಧತೆ ಇದೇ ಹಂತದಲ್ಲಿ ದೊರೆಯಿತು.

ವರ್ಗ ಗುರುಗಳಾದ ಶಿರಹಟ್ಟಿಮಠರು ವಿದ್ಯಾರ್ಥಿಗಳಿಗೆ ರಾಜ್ಯಶಾಸ್ತ್ರ ಇತಿಹಾಸವನ್ನು ರಸವತ್ತಾಗಿ ಮನಸ್ಸಿನ ಮೇಲೆ ಪರಿಣಾಮ ಬೀರುವಂತೆ ಬೋಧಿಸುತ್ತಿದ್ದರು. ಬಂಗಾಳದ ವಿಭಜನೆಯ ನಂತರ ಬ್ರಿಟಿಷರ ದಬ್ಬಾಳಿಕೆ, "ಮೆಂಟೆಗೊ ಚೇಮ್ಸ ಫರ್ಡ" ಸುಧಾರಣೆಗಳಿಗೆ ಜನರ ತೀವ್ರ ಪ್ರತಿಭಟನೆ, ರಾಷ್ಟ್ರಪ್ರೇಮ, ದೇಶಭಕ್ತಿ, ಪರಕೀಯ ದಾಸ್ಯದಿಂದ ಬಿಡುಗಡೆ ಹೊಂದಲು ನಮ್ಮ ಮುಖಂಡರು ಮಾಡಿದ ತ್ಯಾಗ, ಬಲಿದಾನವನ್ನು ಬೋಧಿಸುತ್ತಿದ್ದರು. ಮಹಾದೇವಪ್ಪನವರಿಗೆ ಹೋರಾಟದ ಪೂರ್ವ ಸಿದ್ಧತೆ ವಿದ್ಯಾರ್ಥಿ ದಿಶೆಯಲ್ಲಿ, ಗುರುಗಳ ಪ್ರೇರಣೆಯಿಂದ ದೊರೆತಂತಾಗಿದೆ.

ಮಹಾದೇವಪ್ಪನವರು ಓದುಬರಹದ ಬಗ್ಗೆ ಆಸಕ್ತಿ ವಹಿಸಲಿಲ್ಲ. ಕಾರಣ ಇದರಿಂದೇನು ಪ್ರಯೋಜನ, ಕಾರಕೂನ ಆಗಲಿಕ್ಕೆ, ನೌಕರಿ ಮಾಡಲಿಕ್ಕೆ, ಕಲಿಸುವ ಶಿಕ್ಷಣವೇ ಹೊರತು ಆತ್ಮಜ್ಞಾನ ಸಿಗುವದಿಲ್ಲ. ಆಧ್ಯಾತ್ಮದ ವಿದ್ಯೆಯೇನಲ್ಲ. ನಾನು ಕಲಿಯುವ ಶಿಕ್ಷಣ ಇಂದಿನ ಗುರುಗಳಿಗೆ ಕಲಿಸಲು ಸಾಧ್ಯವಿಲ್ಲ ಎನ್ನುತ್ತಿದ್ದನು. ಗುರುಗಳನ್ನು ಕರೆದು ಯಜಮಾನರು ಕೇಳಿದಾಗ ಅವನಿಗೆ ಎಲ್ಲವು ಗೊತ್ತು, ನಾವು ಅವನಿಗೆ ಕಲಿಸುವಷ್ಟು ಸಮರ್ಥರಿಲ್ಲವೆಂದು ನಿರುರರಾಗಿಬಿಟ್ಟರು.

ಮಹಾದೇವಪ್ಪ ಎರಡನೆಯ ವರ್ಗದಲ್ಲಿ ಓದುತ್ತಿದ್ದಾಗ ಶಾಲೆ ತಪಾಸಣೆ ನಡೆದಿತ್ತು. ಆಗ ಅವರ ದೃಷ್ಟಿ ತೇಜಪುಂಜವಾದ ಮುಖ, ಹುರುಪು, ಉತ್ಸಾಹ, ಗಾಂಭಿರ್ಯದಿಂದ ಕೂಡಿದ ಮಹಾದೇವಪ್ಪನವರ ಮೇಲೆ ಬಿತ್ತು. ಅವನನ್ನು ಎದ್ದು ನಿಲ್ಲಿಸಿದರು. ಅವನ ಜೊತೆ ಸಂಭಾಷಣೆ ತೊಡಗಿದರು. ಆದರೆ ಆ ಹುಡುಗ ಅವರಿಗೆ ಹದರದೆ ದೈರ್ಯದಿಂದ ಎದ್ದು ನಿಂತು ಉತ್ತರಿಸತೊಡಗಿದನು. ನಿನ್ನ ಹೇಸರೇನು, ತಂದೆ ಯಾರು ಎಂದು ಕೇಳಿದಾಗ ಮಹಾದೇವಪ್ಪನವರು ಯಾವ ತಂದೆ ಎಂದು ಕೇಳಿದರು. ಸಾಹೇಬರು ಎಷ್ಟು ಮಂದಿ ತಂದೆಗಳಿರುತ್ತಾರೆ ಎಂದು ಪ್ರಶ್ನಿಸಿದರು. ಸಾಹೇಬರೆ, ಜೀವ ಹೊಸದಾಗಿ ಹುಟ್ಟುವಾಗ ಅದಕ್ಕೊಬ್ಬ ತಂದೆ ಇರುತ್ತಾನೆ. ಹಿಂದೆ ನಾನು ನೂರುಸಲ ಹುಟ್ಟಿದ್ದೇನೆ. ನೂರು ಸಲ ಸತ್ತಿದ್ದೇನೆ. ನೂರು ಸಲ ಜನಿಸಿದಾಗ ನೂರು ತಂದೆಗಳಿದ್ದರು. ಇಂತ ನೂರು ಜನ ತಂದೆಗಳ ಪೈಕಿ ನೀವು ಯಾವ ತಂದೆಯ ಹೆಸರು ಕೇಳಿದಿರಿ. ನನಗೆ ತಿಳಿದರೆ ನೆನಪು ಮಾಡಿಕೊಂಡು ಹೇಳುತ್ತೇನೆ ಅಂದ.

ಸಾಹೇಬರೇ ಮುಖ್ಯವಾಗಿ ಒಂದು ಜೀವನಕ್ಕೆ ಹಡೆದಪ್ಪ ಮತ್ತು ಪಡೆದಪ್ಪ ಎಂದು ಇಬ್ಬರು ತಂದೆಯರಂತು ಬೇಕೆಬೇಕು. ಎಲ್ಲರು ಆಶ್ಚರ್ಯ ಚಕಿತರಾದರು. ಸಾಹೇಬರು ಹಡೆದಪ್ಪ ಅಂದರೆ ಯಾರು ಪಡೆದಪ್ಪಾ ಅಂದರೆ ಯಾರು? ಹೇಳು ಅಂದಾಗ – ಆಗ ಸಾಹೇಬರೆ ಈ ಜೀವಕ್ಕೆ ದೇಹ ಕೊಡುವವನೇ ಹಡೆದಪ್ಪ, ದೀಕ್ಷಾ ಕೊಟ್ಟು ಮುಕ್ತಿಯ ಹಾದಿಯಲ್ಲಿ ಕೊಂಡೊಯುವವನೇ ಪಡೆದಪ್ಪ. ಜೀವವನ್ನು ಮೊಕ್ಷಕ್ಕೆ ತಳ್ಳಿ ದೇಹಕ್ಕೆ ಮುಕ್ತಿ ಕೊಡುವವನು ಎಂದು ಸ್ಪಷ್ಟಪಡಿಸಿದನು.

ಅಲ್ಲಿರುವವರೆಲ್ಲರು ಭಯಭಕ್ತಿಯಿಂದ ಹಡೆದಪ್ಪಾ "ಶಿವಪ್ರಭು" ಆದರೆ ಪಡೆದಪ್ಪ ಯಾರಿರಬಹುದು? ಆಗ ಮಹಾದೇವಪ್ಪನವರು ನನ್ನ ಜನನವನ್ನು ಮೊದಲೆ ಹೇಳಿ ನಾನು ಜನ್ಮ ತಾಳಿದ ಮೇಲೆ ಸಮಾಧಿಸ್ಥಿತಿಯಲ್ಲಿದ್ದಾಗ ನನಗೆ ನಾಮವನ್ನು ಕೊಟ್ಟು ಚಲನವಲನಕ್ಕೆ ತೊಡಗಿಸಿ ಮಹಾದೇವಪ್ಪನೆಂದು ನಾಮಕರಣ ಮಾಡಿದ ಶ್ರೀ ಇಂಚಗೇರಿ ಸಂಪ್ರದಾಯದ ಸ. ಸ. ಗೀರಮಲ್ಲೇಶ್ವರರು ನನ್ನ ಪಡೆದಪ್ಪಗಳೆಂದನು. ಆಗ ಶಾಲೆಯ ಸಾಹೇಬರು ಇವನ ಮಾತಿಗೆ ಬೆಚ್ಚಿಬಿದ್ದು, ನಾನು ಅಸಂಖ್ಯಾತ ಹುಡುಗರನ್ನು ನೋಡಿದ್ದೇನೆ. ಪರೀಕ್ಷಿಸಿದ್ದೇನೆ. ಅಂತವನಲ್ಲನಿವನು. ಇವನೊಬ್ಬ "ದೇವ ಮಾನವ" ಎಂದರು. ಇವನ ಜಾಣ್ಮೆಗೆ ಮೆಚ್ಚಿದ ಸಾಹೇಬರು ೨೫ ರೂಪಾಯಿ ಕಾಣಿಕೆ ಕೊಡಲು ಬಂದಾಗ ಆ ಹಣದಿಂದ ಬಡವರಿಗೆ "ಫಲಹಾರ" ಮಾಡಿಸಿರಿ ಎಂದನು. ಇದು ಮಹಾದೇವಪ್ಪನವರ ತ್ಯಾಗ ಗುಣ ಚಿಕ್ಕಂದಿನಿಂದಲೆ ಮೈಗಂಟಿಕೊಂಡಿತ್ತು.

೩) ಮದುವೆಯ ಪ್ರಸಂಗ :

ಮಗನ ತುಂಟತನ, ಹಠಮಾರಿತನ, ಊರಿನ ಶ್ರೀಮಂತರಿಂದ, ಶಾಲೆಯ ಗುರುಗಳಿಂದ ದೂರು ಶಿವಪ್ರಭುಗಳು ಕಣ್ಣಾರೆ ಕಂಡು ಕಳವಳಗೊಂಡರು. ಇವನನ್ನು ಹೀಗೆ ಸುಮ್ಮನೆ ಬಿಟ್ಟರೆ ಅಪಕೀರ್ತಿ, ಅಪದೆಸೆ ತರುವಂತಹ ಕಾರ್ಯವೆಸಗಬಹುದು. ಮನೆತನದ ಗೌರವ ಕಾಪಾಡಿಕೊಳ್ಳಲು, ಅವನನ್ನು ಸನ್ಮಾರ್ಗಕ್ಕೆ ತರಲು ಮದುವೆಯೇ ಸರಳವಾದ ದಾರಿಯೆಂದು ಮದುವೆ ಮಾತೆತ್ತಿದಾಗ, ನಾನು ಬಂದ ಕೆಲಸವೇ ಬೇರೆ ಹೆಣ್ಣನ್ನು ಕಟ್ಟಿಕೊಂಡು ಏನು ಮಾಡಲಿ ಎಂದು ಮಾಯೇಗೆದ್ದ ಮಾದೇವಪ್ಪ ಹೆಣ್ಣಿನ ಸಂಗದಲ್ಲಿ ಏನಿದೆ ಸುಖ, ನಿಜವಾದ ಸುಖ ಅಲ್ಲಿದೆ ಎಂದು ಮೇಲೆ ಕೈಯತ್ತುತ್ತಿದ್ದ. ಸರ್ವಸಂಘ ಪರಿತ್ಯಾಗಿ ಆತ. ಸೂಕ್ಷ್ಮಾತೀಸೂಕ್ಷ್ಮವಾಗಿ ಕಾರ್ಯ ಮಾಡುವ "ಮಾಯೆ"ಗೆ ಮನಸೋಲದವನಾಗಿದ್ದ. ನಿರಾಕಾರ–ಸಾಕಾರವಾದ "ಮಾಯೆ" ಪಂಚಭೂತಗಳಿಂದ ನಿರ್ಮಿತವಾದ ದೇಹಕ್ಕೆ ಪಂಚೇಂದ್ರೀಯಗಳಿಗೆ ಅಂಟಿಕೊಂಡಿದೆ. ಅವು ನಮ್ಮನ್ನು ಒಂದಿಲ್ಲೊಂದು ರೀತಿಯಲ್ಲಿ ಕಾಡುತ್ತವೆ. ಅಜ್ಞರು ಇದನ್ನು ತಿಳಿಯದೆ ಹಾಳಾಗಿದ್ದಾರೆ. ಅಲ್ಲಮಪ್ರಭುವಿನ ವಚನದಲ್ಲಿ –

"ಹೆಣ್ಣು ಮಾಯೆ ಎಂಬರು ಹೆಣ್ಣು ಮಾಯೆಯಲ್ಲ
ಹೊಣ್ಣು ಮಾಯೆಯೆಂಬರು ಹೊಣ್ಣು ಮಾಯೆಯಲ್ಲ
ಮಣ್ಣು ಮಾಯೆಯೆಂಬರು ಮಣ್ಣು ಮಾಯೆಯಲ್ಲ
ಮನದ ಮುಂದಣ ಆಸೆಯೇ ಮಾಯೆ ಕಾರಣ ಗುಹೇಶ್ವರಾ॥

ಮನದ ಮುಂದಿನ ಅಳಿಯಾಸೆ "ಮಾಯೆ". ಈ ಮಾಯೆಯ ಬಲೆಯಲ್ಲಿ ಎಲ್ಲರೂ ಒಂದಿಲ್ಲೊಂದು ರೀತಿಯಲ್ಲಿ ಸಿಕ್ಕಿದ್ದಾರೆ.

ಒಂದು ಪ್ರಸಂಗ ಶಾಲೆಗೆ ಹೋಗದೆ ಎಂಟಹತ್ತು ಹುಡುಗರನ್ನು ಕೂಡಿಸಿ ಗೋಲಿಗಳನ್ನು ಆಡುತ್ತಿದ್ದನು. ಅವರಲ್ಲಿ ಒಬ್ಬ ಹುಡುಗ ಶ್ರೀಮಂತರ ಮಗ. ಎಲ್ಲಾ ಗುಂಡುಗಳನ್ನು ಸೋತು, ಮನೆಗೆ ಹೋಗಿ ತಾಯಿಯನ್ನು ಕರೆದುಕೊಂಡು ಬಂದ, ಆಗ ಚಿಕ್ಕ ಬಾಲಕನಾಗಿದ್ದ ಮಹಾದೇವಪ್ಪನನ್ನು ಆ ತಾಯಿ ಗದರಿಸಿ ಗುಂಡು ಕೊಡಲು ಹೇಳಿದಳು. ಆಗ ಅವನು ಅವೆಲ್ಲ ಗುಂಡುಗಳನ್ನು ತನ್ನ ಬಾಯಲ್ಲಿ ಹಾಕಿಕೊಂಡು ತನ್ನ ತಾಯಿಯ ಕಡೆ ಓಡಿ ಹೋಗಿಬಿಟ್ಟ. ಶ್ರೀಮಂತ ಹುಡುಗನ ತಾಯಿ ಅವರ ತಾಯಿಯಲ್ಲಿಗೆ ಫಿರ್ಯಾದಿ ತಗೆದುಕೊಂಡು ಬಂದಳು. ಆಗ ಕಾಳಮ್ಮನವರು ಮಹಾದೇವಪ್ಪನಿಗೆ ಬುದ್ದಿವಾದ ಹೇಳುತ್ತಾಳೆ. ಗುಂಡು ಕೊಟ್ಟು ಬಿಡು ಮಗು, ಎಲ್ಲಿ ನೋಡೋಣ ಬಾಯಿ ತಗೆ ಎಂದಾಗ, ಮಹಾದೇವಪ್ಪ ಬಾಯಿ ತಗೆಯುತ್ತಾನೆ. ಆಕೆ ಅವನ ಬಾಯಲ್ಲಿ ಕಂಡದ್ದು ಗುಂಡಲ್ಲ ಬ್ರಹ್ಮಾಂಡ. ಇದನೆಲ್ಲ ಅವರಿವರು ತಾಯಿಗಳು ನೋಡಿ ದಂಗಾಗಿ ನಿಂತು ಬಿಟ್ಟರು. ಮಾತೆ ಬರಲಿಲ್ಲ. ನಾವು ಶ್ರೀ ಕೃಷ್ಣನ ಬಾಯಲ್ಲಿ ಹದಿನಾಲ್ಕು ಲೋಕವನ್ನು ತಾಯಿ ಯಶೋಧಾ ಕಂಡಿದ್ದಳಂತೆ, ಕೇಳಿದ್ದೇವು.

ಈಗ ನಿಮ್ಮ ಮಗನ ಬಾಯಲ್ಲಿ ಪ್ರತ್ಯಕ್ಷವಾಗಿ ಕಂಡೆವು. ಇವನೇನು ಸಾಮಾನ್ಯನಲ್ಲ ಪ್ರತ್ಯಕ್ಷ "ಶಿವನೆ" ಎಂದು ಇಂತ ಮಗನನ್ನು ಹೆತ್ತ ಕಾಳಮ್ಮನಿಗೆ ಸಾಷ್ಟಾಂಗ ನಮಸ್ಕಾರ ಹಾಕಿದಳು.

ಮಹಾದೇವಪ್ಪ ೭-೮ ವರ್ಷದವನಿದ್ದಾಗ ಅನೇಕ ಬಡಹುಡುಗರನ್ನು ಕರೆದುಕೊಂಡು ಮಾರ್ಕೆಟಿಗೆ ಹೋಗಿ ಹಳ್ಳಿಯವರ ಮಾರಲಿಕ್ಕೆ ತಂದಿದ್ದ ಹಣ್ಣು, ಹಂಪಲ, ಹಾಲು ಮೊಸರುಗಳನ್ನು ಒಬ್ಬನೇ ಖರೀದಿಸಿ ಶ್ರೀಮಂತರಿಗೆ ಸಿಗದಂತೆ ಮಾಡಿದ ಮತ್ತು ಹಳ್ಳಿಯಿಂದ ಮಾರಲಿಕ್ಕೆ ಬಂದಿದ್ದವರು ನಾವು ಇಂದು ದಲಾಲರ ಕೈಯಿಂದ ಪಾರಾದೆವು ಎಂದು ಸಂತಸಪಟ್ಟರು. ಇದರಿಂದ ದಲ್ಲಾಲರಿಗೂ ತುಂಬಾ ನಷ್ಟವುಂಟಾಯಿತು. ಆಗ ಊರಿನ ಶ್ರೀಮಂತರು, ದಲ್ಲಾಲರು ಬಂದು ನಡೆದ ಎಲ್ಲ ಸಂಗತಿಯನ್ನು ಯಜಮಾನರಿಗೆ ಹೇಳಿದರು. ತಮ್ಮ ಮನೆಯ ಮುಂದೆ ಜನ ಸಮೂಹ ನೆರೆದಿತ್ತು, ಅಷ್ಟೊತ್ತಿಗೆ ಮಹಾದೇವಪ್ಪನು ಬಂದನು. ನಡೆದ ಸಂಗತಿ ತಿಳಿದು "ಬಡಮಕ್ಕಳು ಭಾರತದಲ್ಲಿ ಜನಿಸಿಲ್ಲವೇನು". ಅವರು ಯಾವಾಗ ತಿನ್ನಬೇಕು. ನೀವು ಕಂತ್ರಾಟ ಮಾಡಿ ದುಡ್ಡುಗಳಿಸಿದ್ದೀರಿ, ಅದರಲ್ಲಿ ಬಡವರದು ಪಾಲಿದೆಯಂದು ತಿಳಿಯಿರಿ, ಧಾನ, ಧರ್ಮಮಾಡಿರಿ, ಲಕ್ಷ್ಮಿ ಸ್ಥಿರವಲ್ಲ. ಮಹಾಚಂಚಳು, ಸಮಸ್ತರಿಗೆ ಇವಳು ಭೋಗ ಲಕ್ಷ್ಮಿಯಾಗಿದ್ದಾಳೆ ಹಾದರಗಿತ್ತಿ ಯಾರಬೇಕಾದವರ ಕೂಡ ಸಂಘ ಮಾಡುವಳು. ಇಂದು ನನ್ನನ್ನು ವರಿಸಿ ಮೆರೆಸುವಳು. ನಾಳೆ ಮತ್ತೊಬ್ಬನನ್ನು ಕೈ ಹಿಡಿಯುವಳು. ಇವಳ ಆಟ ತರತರ ಇವಳು ಕುಲಗೇಡಿ ಜಾಣರಾಗಿರಿ, ಹೆಣ್ಣು, ಮಣ್ಣು, ಹೊಣ್ಣು ಮಾಯೆಯಲ್ಲ ಅವಳ ಮೊಹಕ್ಕೆ ಸಿಗಬೇಡಿರಿ, ಅಜ್ಞರು ತಿಳಿಯದೆ ಹಾಳಾಗಿದ್ದಾರೆ. ಪ್ರಭುದೇವರು ಹೊನ್ನು, ಮಾಯೆಯಲ್ಲ, ಹೆಣ್ಣು ಮಾಯೆಯಲ್ಲ, ಮನದ ಮುಂದಿನ ಅಳಿಯಾಸೆ ಮಾಯೆ ಎಂದಿದ್ದಾರೆ.

ಹರಿಯ ನುಂಗಿತ್ತು ಮಾಯೆ
ಅಜನ ನುಂಗಿತ್ತು ಮಾಯೆ
ಇಂದ್ರನ ನುಂಗಿತ್ತು ಮಾಯೆ
ಚಂದ್ರನ ನುಂಗಿತ್ತು ಮಾಯೆ
ಒಲ್ಲೆನೆಂಬವರ ಬಲುಗೈ ನುಂಗಿತ್ತು ಮಾಯೆ
ಅರಿಯನೆಂಬ ಅಜ್ಞಾನಿಗಳ ನುಂಗಿತ್ತು ಮಾಯೆ
ಈರೇಳುಭುವನನ್ನು ಆವರಸಿಕ್ಕೊಂಡಿತ್ತು ಮಾಯೆ ॥

ಚನ್ನಬಸವಣ್ಣನವರು – ಬಿಟ್ಟೆನೆಂದರೆ ಬಿಡದೀ ಮಾಯೆ, ಎನ್ನುವಂತೆ "ಮಾಯೆ"ಯ ಸ್ವರೂಪ, ಕ್ರೀಯೆ, ಮಹಿಮೆ, ರೀತಿನೀತಿ, ಆಟ, ಚಲನವಲನ, ಮರುಳಾಟ ಜಗತ್ತನ್ನೇ ಹುಚ್ಚು ಹಿಡಿಸಿದೆ. ಈಕೆಯಿಂದ ಪಾರಾದವರು ಬಹುವಿರಳ. ಅಂಥವರಲ್ಲಿ ಮಹಾದೇವಪ್ಪನವರು ಒಬ್ಬರು. ಮಾಯೆಯನ್ನು ಗೆದ್ದು, ಹೆಣ್ಣಿನ ಸಂಗದಲ್ಲೇನಿದೆ ಸುಖ, ಮದುವೆ ಒಲ್ಲೆನೆಂದು ತಿರಸ್ಕರಿಸುವನು.

ಮದುವೆಯನ್ನು ತಿರಸ್ಕರಿಸಿದ ಮಹಾದೇವರಿಗೆ, ಗೆಳೆಯರಿಂದ, ಬಂಧು ಬಳಗದವರಿಂದ ತಮ್ಮ ಮನೆತನಕ್ಕೆ ನಿಕಟ ಸಂಬಂದ ಇಟ್ಟುಕೊಂಡಿದ್ದ, ಹಿರಿಯನಾದಂತಹ ಮಲ್ಲಪ್ಪ ಜೋಳದ [೧] ರಿಂದ ತಿಳಿಹೇಳಿಸಿದರು. ಮನೆಯವರೆಲ್ಲರೂ ಸೇರಿ ಒತ್ತಡ ತಂದರು. ಅದಕ್ಕೊಪ್ಪದ ಮಾದೇವಪ್ಪ ಆತ್ಮಾಹುತಿಗಾಗಿ ಚೂರಿ ತೆಗೆದುಕೊಂಡು ಇರಿದುಕೊಳ್ಳಲಿಕ್ಕೆ ನಿಂತಾಗ ಅವನ ಪಾಡಿಗೆ ಅವನನ್ನು ಬಿಟ್ಟು ಬಿಟ್ಟರು.

ಹಠಮಾರಿ ಮಹಾದೇವಪ್ಪನಿಗೆ "ಹಠಯೋಗದಲ್ಲಿ" ಆಸಕ್ತಿಯುಂಟಾಯಿತು. ಹುಬ್ಬಳ್ಳಿಯಲ್ಲಿರುವ ಮಹಾನ್ ಶಕ್ತಿಯ ಆರಾಧಕ, ಪವಾಡ ಪುರುಷ ಈರಪ್ಪನ ಸಹಾಯ ಪಡೆದು ಹುಬ್ಬಳ್ಳಿಯ ಸ್ಮಶಾನಕ್ಕೆ (ಇಂದಿನ ಕಿಮ್ಸ್ ಆವರಣ ಅಂದು ಕಾಡು, ಸ್ಮಶಾನ) ಹೋಗಿ ಹಗಲಿರುಳೆನ್ನದೆ ಧ್ಯಾನ ಮಾಡುತ್ತಿದ್ದ. ಅದು ತಂದೆ-ತಾಯಿಯವರಿಗೆ ತಿಳಿದು ಮತ್ತಷ್ಟು ಗಾಭರಿಯಾಗಿ ಆತನ ಗುರುಗಳಾದ ಶಿರಹಟ್ಟಿ ಮಠ ಮಾಸ್ತರರ ಕಡೆಗೆ ಹೋಗಿ ತಮ್ಮ ಭಯ, ಆತಂಕ, ಅಳಲು ತೋಡಿಕೊಂಡರು. ಆಗ ಶಿರಹಟ್ಟಿ ಮಾಸ್ತರರು ಅವರಿಗೆ ಗಾಬರಿಯಾಗದಿರಲು ತಿಳಿಹೇಳಿದರು. "ಮಹದೇವ-ದೇವನೇ ಆಗುವ ಸಾಮರ್ಥ್ಯ ಪಡೆಯುವವ ಅವನ ಬಗೆಗ ಚಿಂತಿಸಬೇಡಿರಿ. ಅವನನ್ನು ಅವನ ಸಾಧನೆ ಮಾಡಲು ಬಿಡಿರಿ" ಎಂದು, ಅವರ ಸಾಧನೆ ಅಣಿಮಾ, ಲಘಿಮಾ, ಮಹಿಮಾ ಮುಂತಾದ ಅಷ್ಟ ಸಿದ್ಧಿಗಳನ್ನು ವಶಪಡಿಸಿಕೊಳ್ಳುವವರೆಗೆ ಮುಂದುವರಿಯಿತು. ಆದರೆ ಇದರಿಂದಲೂ ಶಾಶ್ವತ ಸುಖ ದೊರಕುವದಿಲ್ಲವೆಂದು ತಿಳಿದು, ಚಮತ್ಕಾರದಿಂದ ಜನರನ್ನು ಮೋಸಗೊಳಿಸುವುದು ಧರ್ಮಬಾಹಿರವೆಂದು ಅರಿತು, ಶಾಶ್ವತ ಸುಖಕ್ಕಾಗಿ ಆತ್ಮೋನ್ನತಿಗಾಗಿ ಸರ್ವಸಂಘ ಪರಿತ್ಯಾಗ ಮಾಡಿ "ಆತ್ಮಜ್ಞಾನ" ಪಡೆದ. ಜ್ಞಾನಿಯಾಗಿ, ಲೋಕೋದ್ಧಾರಕ್ಕೆ ತೊಡಗಿದರು. ಸಮಾಜವೇ ನನ್ನ ಬಳಗ ಅವರ ಸೇವೆಯೇ ನನ್ನ ಗುರಿಯೆಂದು ಕಾರ್ಯತತ್ಪರರಾದರು. ಅವರ ಆಧ್ಯಾತ್ಮ ಸಾಧನೆಯ ಬಗೆಗೆ ಮುಂದೆ ಪ್ರತ್ಯೇಕವಾಗಿ ವಿವರಿಸುತ್ತೇನೆ.

ಅದೇ ವೇಳೆಗೆ ಮಂದಗಾಮಿ ಮಹಾತ್ಮಾ ಗಾಂಧೀಜಿ ಮತ್ತು ತೀವ್ರಗಾಮಿ ಸುಭಾಶಚಂದ್ರ ಭೋಸರ ಮುಖಂಡತ್ವದಲ್ಲಿ ದೇಶ ಬಂಧ ಮುಕ್ತಗೊಳಿಸುವ ರಣ ಕಹಳೆಯ ಗಾಳಿ ಬೀಸಿತು. ಮುಖಂಡರನ್ನು ಬಂಧಿಸಿದ ಸುದ್ದಿ ದೇಶದಾದ್ಯಂತ ಹಬ್ಬಿತು. ಇದನ್ನು ತಿಳಿದ ಮಹಾದೇವಪ್ಪನವರು ಮುರಗೋಡರು ರಣ ಕಹಳೆಯ ಬಿಸಿಗಾಳಿಗೆ ಕರಗದೆ ಇರಲಿಲ್ಲ. ಹೊಟ್ಟೆ ಹೊರೆಯುವ ಶಿಕ್ಷಣಕ್ಕೆ ಶರಣು ಹೊಡೆದು ಮನೆಯನ್ನು ಬಿಟ್ಟರು. ಹುಬ್ಬಳ್ಳಿಯಿಂದ ಇಂಚಗೇರಿಗೆ ಹೊರಟ "ದಿಂಡಿಯ" ಜೊತೆ ಉಸಿರು ಬಿಡದೆ ಧ್ಯಾನ ಮಾಡುತ್ತಾ ಹೋಗಿ ಗೀರಮಲ್ಲೇಶ್ವರರಿಂದ ಆಶೀರ್ವಾದ ಪಡೆದುಕೊಂಡರು.

ಹುಬ್ಬಳ್ಳಿ, ಹಾವೇರಿ, ಗದಗಗಳಲ್ಲಿಯ ಯುವಕರನ್ನು ಸಂಘಟಿಸಿ ತರುಣ ಸಂಘ ಕಟ್ಟಿದರು. ಅದಕ್ಕೆ ಸೇವಾದಳದ ಮಾದರಿಯೂ ಇತ್ತು. ಯುವಕರ ತಂಡದೊಡನೆ ಹರಿಪುರ ಕಾಂಗ್ರೇಸ್ ಅಧಿವೇಶನಕ್ಕೆ ಹೊರಟೆ ಬಿಟ್ಟರು. ಈ ಯುವ ತಂಡಕ್ಕೆ ಸುಭಾಶಚಂದ್ರ ಭೋಸರು ಪ್ರೀತಿಯ ನಾಯಕರಾಗಿದ್ದರು. ಈ ಅಧಿವೇಶನದಲ್ಲಿ ಗಾಂಧೀಜಿ ಪಟ್ಟಾಭಿ ಸೀತಾರಾಮಯ್ಯನವರ ಹೆಸರನ್ನು ಅಧ್ಯಕ್ಷತೆಗಾಗಿ ಸೂಚಿಸಿದ್ದರು.

---

೧. ಮಹಾ ಮಾನವತಾವಾದಿ ಮಾದೇವರು - ಪುಟಸಂಖ್ಯೆ : ೧೨ ಲೇಖಕ : ಮಹಲಿಂಗ ಮಂಗಿ

ಯುವಕರ ತಂಡದವರಿಗೆ ಸುಭಾಶಚಂದ್ರರನ್ನು ಅಧ್ಯಕ್ಷತೆಗಾಗಿ ಆರಿಸುವ ಉತ್ಸಾಹ. ತರುಣರು ಮಹಾದೇವಪ್ಪನವರ ನೇತೃತ್ವದಲ್ಲಿ ಸುಭಾಶಚಂದ್ರರನ್ನು ಅಧ್ಯಕ್ಷರಾಗುವಂತೆ ಪ್ರಯತ್ನಿಸಿ ಸಫಲರಾದರು. ಕೊನೆಗೆ ಯುವಕರ ಕಣ್ಮಣಿ ಆದರ್ಶದ ಗಣಿಯಾದ ಸುಭಾಶಚಂದ್ರರು ೧೯೩೮ರ ಹರಿಪುರ ಕಾಂಗ್ರೇಸ್‌ಗೆ ಅಧಿವೇಶನದ ಅಧ್ಯಕ್ಷರಾದರು.

ಅಧಿವೇಶನ ಮುಗಿಸಿ ಬಂದ ನಂತರ ಮಹಾದೇವಪ್ಪನವರಿಗೆ ಸ್ವಾತಂತ್ರ್ಯ ಸಮರದ ಹುಚ್ಚು ನೆತ್ತಿಗೇರತೊಡಗಿತು. ಅವರು ಪ್ರತ್ಯಕ್ಷವಾಗಿ ಗಾಂಧೀಜಿ ಪ್ರಭಾವಕ್ಕೆ ಒಳಗಾದವರು. ನೂಲುವದು ಖಾದಿ ಧರಿಸುವದು ಅವರಿಗೆ ಅತ್ಯಂತ ಪ್ರೀತಿಯ ವಿಷಯ, ನಿತ್ಯ ಧ್ಯಾನ, ಭಜನೆ, ವ್ಯಾಯಾಮ, ಯುವಕರ ತಂಡಕ್ಕೆ ಬೋಧನೆಗಳೊಂದಿಗೆ ನೂಲು ತೆಗೆಯುವ ಕಾರ್ಯವನ್ನು ಆರಂಭಿಸಿದರು. ಆಗ ನೂಲುವದು ಎಲ್ಲರ ಮನೆಯಲ್ಲಿ ನಿತ್ಯದ ಕಾಯಕದಂತೆ, ಅಡಿಗೆ ಮಾಡುವಷ್ಟೇ ಮಹತ್ವದ ಕಾರ್ಯ ನೂಲುವದಾಗಿತ್ತು.

ಗಾಂಧೀಜಿ ಪ್ರಣೀತ ಸತ್ಯಾಗ್ರಹಿಗಳು, ವೈಯಕ್ತಿಕ ಚಳುವಳಿಗಳು ನಡೆಯುತ್ತಿದ್ದ ಕಾಲದಲ್ಲಿ ಮಹಾದೇವಪ್ಪನವರು ಹಿಂದೆ ಬೀಳಲಿಲ್ಲ. ಜನರಿಗೆ ಧ್ಯಾನದಷ್ಟೇ ಮಹತ್ವದ ಕಾಯಕ ಚಳುವಳಿಗಳೆಂದು ಅದರ ಬಗೆಗೆ ಜಾಗ್ರತಿ ಮೂಡಿಸಲು ಅವರು ನಿರಂತರ ಪ್ರಯತ್ನ ಮಾಡಿದರು. ಗೀರಮಲ್ಲೇಶ್ವರರ ಹೆಸರಿನಲ್ಲಿ ಅನೇಕ ಆಶ್ರಮಗಳನ್ನು ಕರ್ನಾಟಕ – ಮಹಾರಾಷ್ಟ್ರದಲ್ಲಿ ಸ್ಥಾಪಿಸಿದರು. ಅಲ್ಲಲ್ಲಿಗೆ ಹೋಗಿ ಬೋಧನೆಗಳನ್ನು ಮಾಡತೊಡಗಿದರು. ಅದರ ಪರಿಣಾಮದಿಂದ ಆಧ್ಯಾತ್ಮ ಪಂಥವೆಂದು ಹೆಸರಾದ ಇಂಚಗೇರಿಯ ಅನುಯಾಯಿಗಳಲ್ಲಿ ದೇಶಕ್ಕಾಗಿ ಹೋರಾಡುವುದು ಅವರ ಜೀವನದ ಪಥವೇ ಆಯಿತು.

೧೯೩೮ರಲ್ಲಿ ಜರುಗಿದ 'ಹರಿಪುರ' ಕಾಂಗ್ರೇಸ್ ಅಧಿವೇಶನಕ್ಕೆ, ಸುಭಾಶಚಂದ್ರ ಭೋಸ್, ಗಾಂಧೀಜಿ ಪ್ರಭಾವಕ್ಕೊಳಗಾಗಿ ಆ ಅಧಿವೇಶನಕ್ಕೆ ತಮ್ಮ ವಿದ್ಯಾಗುರುಗಳಾದ ಶಿರಹಟ್ಟಿಮಠರನ್ನು ಮತ್ತು ಕೆಲ ಸಂಗಡಿಗರನ್ನು ಹುರುದುಂಬಿಸಿ ಕರೆದುಕೊಂಡು ಪಾಲ್ಗೊಂಡಿದ್ದರು. ಆಗ ಅವರ ಅಧಿವೇಶನದಿಂದ ಅವರಿಗೆ ರಾಜಕೀಯದಲ್ಲಿ ಪಾಲ್ಗೊಳ್ಳಲು ತುಡಿಯುವ ಮನಸ್ಸಿಗೆ ಪ್ರೇರಣೆ ದೊರಕಿತು. ಇವರ ರಾಜಕೀಯಕ್ಕೆ ಭದ್ರವಾದ ಅಡಿಪಾಯ ಇಲ್ಲಿಂದಲೆ ಸಿಕ್ಕಂತಾಯಿತು. (ಇದರ ಕುರಿತು ಮುಂದಿನ ಅಧ್ಯಾಯದಲ್ಲಿ ಸವಿಸ್ತಾರವಾಗಿ ಪ್ರಸ್ತಾಪ ಪಡಿಸಿದ್ದೇನೆ).

೧೯೩೯ರಲ್ಲಿ ನಡೆದ ಚಳುವಳಿ ಬ್ರಿಟೀಷ ಸಾಮ್ರಾಜ್ಯಶಾಹಿ ರಕ್ಷಣೆಗಾಗಿ ಮಾಡುವುದು ಇದಾಗಿತ್ತು. ಇದು ಭಾರತಕ್ಕೆ ಯಾವ ಸಂಬಂಧ ಇಲ್ಲದಂತಹದ್ದು, ಜರ್ಮನಿಗೆ ಯಾವುದೇ ದ್ವೇಷವಿಲ್ಲದ ಯುದ್ಧದಲ್ಲಿ ಭಾಗಿಯಾಗಲು ವೈಯಕ್ತಿಕ ನಿಲವು ಭಾರತಕ್ಕೆ ಇರಲಿಲ್ಲ. ಆಗ ಕಾಂಗ್ರೇಸ್ ಮಂತ್ರಿಮಂಡಲ ರಾಜೀನಾಮೆ ನೀಡಿತ್ತು. ಇದು ಸಾಮೂಹಿಕ ಚಳುವಳಿಯಲ್ಲಿ ವೈಯಕ್ತಿಕವಾಗಿ ಮಾಡುವ ಹೋರಾಟ ಇದಾಗಿತ್ತು.

ಇದರಲ್ಲಿ ಇಂಚಗೇರಿ ಮಹಾದೇವಪ್ಪನವರು ಪಾಲ್ಗೊಂಡಿದ್ದರು. (ಇದರ ಕುರಿತು ಮುಂದಿನ ಅಧ್ಯಾಯದಲ್ಲಿ ಸವಿಸ್ತಾರವಾಗಿ ಪ್ರಸ್ತಾಪ ಪಡಿಸಿದ್ದೇನೆ).

ವೈಯಕ್ತಿಕ ಸತ್ಯಾಗ್ರಹದ ತೀವ್ರತೆ ಹೆಚ್ಚಾಯಿತು. ಬ್ರಿಟೀಷ ಸರಕಾರಕ್ಕೆ ದಿಕ್ಕು ತೋಚದಂತಾಯಿತು. ಯುದ್ಧ ವಿರೋಧಿ ನೀತಿಯನ್ನು ದಮನ ಮಾಡಲು ಸರಕಾರ "ಕ್ರಿಪ್ಸ್"ರ ಮುಖಾಂತರ ಸಂಧಾನಕ್ಕೆ ಇಳಿಯಿತು. ಅದಕ್ಕೊಪ್ಪದ ಮಹಾತ್ಮಾ ಗಾಂಧೀಜಿಯವರು ಒಂದು ಹೆಜ್ಜೆ ಮುಂದೆ ಇಟ್ಟು ೧೯೪೨ರ **"ಚಲೇಜಾವ" "ಭಾರತ ಬಿಟ್ಟು ತೊಲಗಿರಿ"** ಎಂಬ ಘೋಷಣೆ ಕೂಗಿದರು. ಇದು ಭಾರತದ ಉದ್ದಗಲ್ಲಕ್ಕು ಹಬ್ಬಿ ಪ್ರತಿಧ್ವನಿತವಾಯಿತು. ಈ ಚಳುವಳಿಯ ದಳ್ಳುರಿ ಕರ್ನಾಟಕಕ್ಕೆ ತಾಗದೆ ಇರಲಿಲ್ಲ. ಇಂಚಗೇರಿ ಸಂಪ್ರದಾಯದ ಮಹಾದೇವಪ್ಪನವರು ಈ ಚಳುವಳಿಯಲ್ಲಿ ಸುಭಾಶಚಂದ್ರ ಭೋಸ್ ಮಾದರಿಯ ಶಸ್ತ್ರ ಹೋರಾಟಕ್ಕಿಳಿದರು. ರೈಲ್ವೆ ಹಳಿಕಿತ್ತುವುದು, ಪೋಸ್ಟ ಆಫೀಸ್ ಸುಡುವುದು, ಬಂದೂಕುಗಳನ್ನು ಅಪಹರಿಸುವುದು. ೧೯೪೨ರ ಚಲೆಜಾವ ಚಳುವಳಿಯಲ್ಲಿ ಸುಭಾಶಚಂದ್ರ ಭೋಸರ ಆದರ್ಶದ ಉಗ್ರಗಾಮಿ ಹೋರಾಟಕ್ಕೂ ಅವಕಾಶ ಸಿಕ್ಕಂತಾಯಿತು. (ಈ ಹೋರಾಟಗಳ ಕುರಿತು ಮುಂದಿನ ಅಧ್ಯಾಯದಲ್ಲಿ ಪ್ರತ್ಯೇಕವಾಗಿ ವಿವರಿಸಲಾಗಿದೆ).

ಈ ಹೊತ್ತಿಗಾಗಲೇ ಮಹಾದೇವಪ್ಪನವರು ಮುಂದಾಳತ್ವದಲ್ಲಿ ಲಕ್ಷಾನುಗಟ್ಟಲೇ ರೈತರು, ಕಾರ್ಮಿಕರು ಹೋರಾಟಕ್ಕೆ ತೊಡಗಿ, ಹೊಲಮನೆ ಕಳೆದುಕೊಂಡು ಬಂಧು-ಬಾಂಧವರನ್ನು ಕಳೆದುಕೊಂಡು ಮಹಾದೇವಪ್ಪನವರ ಆಶ್ರಮಗಳಲ್ಲಿ ಆಶ್ರಯ ಹೊಂದಿದ್ದರು. ಲಿಂಗಬೇಧ ಮರೆತು ಎಲ್ಲ ಅನುಯಾಯಿಗಳು ಇದರಲ್ಲಿ ಪಾಲ್ಗೊಂಡಿದ್ದರು. (ಈ ಹೋರಾಟಗಳ ಕುರಿತು ಮುಂದಿನ ಅಧ್ಯಾಯದಲ್ಲಿ ಪ್ರತ್ಯೇಕವಾಗಿ ವಿವರಿಸಲಾಗಿದೆ).

ಅವರ ಉಪಜೀವನಕ್ಕಾಗಿ ದೇಶಿ ಪುರೋಹಿತಶಾಹಿ, ಬಂಡವಾಳಶಾಹಿ ವರ್ಗದವರಿಂದ ಇಂಥ ಕಾರ್ಯಗಳ ಮುಂದಾಳುಗಳು ಮಾಡುತ್ತಿದ್ದಂತೆ ಇವರೂ ಒತ್ತಾಯಪೂರಕವಾಗಿ ಹಣ ವಸೂಲಿ ಮಾಡುವ ಪ್ರಸಂಗವು ಕೆಲವೊಮ್ಮೆ ಒದಗಿರಬಹುದು. ಹಲವಾರು ಸಲ ಅವರ ಅನುಯಾಯಿಗಳು ಮಹಾದೇವಪ್ಪನವರು ಕೇಳಿದ್ದನ್ನೆಲ್ಲ ತಮ್ಮದಾದ ಆಸ್ತಿಪಾಸ್ತಿಯನ್ನೆಲ್ಲ ಧಾರೆ ಎರೆದಿದ್ದಾರೆ.

ಅನೇಕ ರಾಷ್ಟ್ರನಾಯಕರ, ರಾಜಕೀಯ ಮುಖಂಡರ, ವಿವಿಧ ಸಂಘಟನೆಗಳ ಸಂಘಟಕರ, ಸಂಘ ಸಂಸ್ಥೆಗಳ ಹೋರಾಟದ ಪರಿಶ್ರಮದ ಫಲದಿಂದ ೧೯೪೭ ಆಗಸ್ಟ ೧೫ ರಂದು ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಿತು. ಆದರೆ ಹೋರಾಟ ಮಾತ್ರ ಇನ್ನೂ ನಿಂತಿರಲಿಲ್ಲ.

ಆಶ್ರಯ ಬಯಸಿ ಬಂದವರಿಗೆ ಆಶ್ರಯ ಕಲ್ಪಿಸಿ ಅವರನ್ನು ಕಾರ್ಯತತ್ಪರರನ್ನಾಗಿ ಮಾಡುತ್ತಿದ್ದರು. ಚಳುವಳಿಯಲ್ಲಿ ಒಗ್ಗೂಡಿ ಪಾಲ್ಗೊಂಡವರ ಒಗ್ಗಟ್ಟು ಮುರಿಯಬಾರದು. ನಮ್ಮ ಬಲ ಕಡಿಮೆಯಾಗುವದು ಎಂದು ಅವರಲ್ಲಿ ಅಂತರ್ ಜಾತಿ ವಿವಾಹ ಮಾಡಿದರು. ಪುರೋಹಿತಶಾಹಿಗಳು, ಶ್ರೀಮಂತರು ಮಹಾದೇವಪ್ಪನವರು ಜಾತಿ ಕೆಡಿಸುವರೆಂದು ಕಿಡಿಕಾರಿದರು.

ಸ್ವಾತಂತ್ರ್ಯಕ್ಕಿಂತ ಪೂರ್ವದಲ್ಲಿ ಬ್ರಿಟಿಷ ಸರಕಾರ ತನ್ನ ಆಡಳಿತದ ಸುಗಮತಿಗಾಗಿ ಭಾರತವನ್ನು ಒಡೆದು ಸಂಸ್ಥಾನಗಳನ್ನು ನಿರ್ಮಿಸಿಕೊಂಡು ತಮ್ಮ ಆಡಳಿತ ನಡೆಸುತ್ತಿತ್ತು. ಒಂದೊಂದು ಸಂಸ್ಥಾನಕ್ಕೆ ದೇಶಿಯರನ್ನು ಆಡಳಿತಗಾರನ್ನಾಗಿ ನೇಮಿಸಿದ್ದರು. (ದೇಸಾಯರು, ಸಾವಕಾರ, ಧನೇರು, ಕುಲಕರ್ಣಿಯವರು, ದೇಶಪಾಂಡೆಯವರು) ಅವರಿಂದ ಕಂದಾಯ ವಸೂಲಿ ಮಾಡಿಕೊಳ್ಳುತ್ತಿದ್ದರು. ಸಂಸ್ಥಾನಿಕರೆಲ್ಲರು ಸಾಮಾನ್ಯ ಜನರ ರಕ್ತ ಹೀರಿ ಶೋಷಣೆಗೊಳಪಡಿಸುತ್ತಿದ್ದರು. ಭಾರತದ ಒಕ್ಕೂಟದಲ್ಲಿ ಸೇರಲು ಹಿಂದೇಟು ಹಾಕುತ್ತಿದ್ದ ರಾಜರುಗಳಿಗೆ ತಿಳಿಹೇಳಿ ಅವರ ಮನಪರಿವರ್ತನೆಗೆ ಮುರಗೋಡ ಮಹಾದೇವಪ್ಪನವರು ಶ್ರಮಿಸಿದರು. ಅದಕ್ಕೊಪ್ಪದಿದ್ದಾಗ ಹೋರಾಟಕ್ಕೆ ಇಳಿಯುವ ಪ್ರಸಂಗ ಬಂದೊದಗಿತು.

ಸದ್ಗುರು ಸಂಪ್ರದಾಯಕ್ಕನುಗುಣವಾಗಿ ದಾಸಬೋಧೆ, ಶರಣರ, ದಾಸರ, ಸಂತರ ಸಂದೇಶಗಳನ್ನು ಸ್ಮರಿಸಲು ಅವರ ಸಾಹಿತ್ಯವನ್ನು, ಮಹಾರಾಷ್ಟ್ರದ ಸತ್ ಸಂಪ್ರದಾಯದಂತೆ, ವಾರಕರೀ ಪಂಥದಂತೆ ಕರ್ನಾಟಕದ ಭಕ್ತರ ಸರ್ವೋದಯದ ಪ್ರಚಾರ ಪಾದಯಾತ್ರೆಯನ್ನು ಇವರು ಅಳವಡಿಸಿಕೊಂಡು ಈಗಲೂ ವರ್ಷಕ್ಕೊಮ್ಮೆ ೧ (ಒಂದು) ತಿಂಗಳ ಪಾದಯಾತ್ರೆಯನ್ನು ಮಾಡುತ್ತಾರೆ. ಅದೇ ಸಮಯದಲ್ಲಿ ವಿನೋಭಾಜಿಯವರ "ಸರ್ವೋದಯದ" ಗಾಳಿ ಬೀಸತೊಡಗಿತ್ತು. ಸ್ವಾತಂತ್ರ್ಯ ಹೋರಾಟಕ್ಕಾಗಿ ಸಂಘಟಿತಗೊಂಡ ರೈತ ಕಾರ್ಮಿಕರ ಸೈನ್ಯ ಬಹುಸಂಖ್ಯಾಬಲದೊಂದಿಗೆ ಇವರ ಆಶ್ರಮಗಳಲ್ಲಿ ನೆಲೆ ನಿಂತರು. ಆಶ್ರಮದ ಸಾಮೂಹಿಕ ಜೀವನದಲ್ಲಿ ತಂದೆ-ತಾಯಿಯರನ್ನು ಕಳೆದುಕೊಂಡ ಮಕ್ಕಳ ಜೈಲಿನಲ್ಲಿದ್ದು, ರೋಗಕ್ಕೆ ತುತ್ತಾದವರ, ಬಿಡುಗಡೆಯಾಗಿ ಬಂದರೂ ದುಡಿಯಲು ಸಾಮರ್ಥ್ಯವಿಲ್ಲದ ಅಸಹಾಯಕರ, ಹೆಂಡತಿಯರನ್ನು ಕಳೆದುಕೊಂಡು "ಮನೆ" ನಡೆಸಲಾರದಾದ, ವಯಸ್ಸಾಗಿ ದುಡಿಯಲಾಗದವರ ಆರೈಕೆ ಅನೂಚಾಣವಾಗಿ ನಡೆದು ಹೋಗುತ್ತಿತ್ತು. ಅದೂ ಧ್ಯಾನ, ನಿತ್ಯ ನಿಯಮಗಳ ದಿನಚರಿಯಲ್ಲಿ ಶಾಂತಿ ತೃಪ್ತಿಯೊಂದಿಗೆ ಇಂಥ ಸಮೂಹಕ್ಕೊಂದು ರೂಪು ಕೊಡಲು ಧ್ಯೇಯವಾಗಿ ಸರ್ವೋದಯ ತಾರಕಮಂತ್ರವಾಗಿ ಕಂಡಿತು. ಮಹಾದೇವಪ್ಪನವರ ಮನಸ್ಸು ಅದನ್ನು ಗ್ರಹಿಸಲು ತಡಮಾಡಲಿಲ್ಲ. ಆಗ ಸ್ವಾತಂತ್ರ್ಯ ಹೋರಾಟದ ದಾರಿಯಂತೆ ಸರ್ವೋದಯದ ಪಥದಲ್ಲಿ ಮುನ್ನಡೆಯುವ ಪ್ರತಿಜ್ಞೆ ಮಹಾದೇವಪ್ಪನವರದಾಯಿತು. ಮೊದಲ ಹೆಜ್ಜೆಯಾಗಿ ಸಾಮೂಹಿಕ ಬೇಸಾಯದ ಪ್ರಯೋಗಕ್ಕೆ ಅಣಿಯಾದರು. ಗಿರೀಶ್ ಫಾರ್ಮ ನಿರ್ಮಿಸಿ ಕರ್ನಾಟಕ – ಮಹಾರಾಷ್ಟ್ರದ ಗಡಿಯಲ್ಲಿ ಹಳ್ಳಿ-ಸಂಖ-ಉಟಗಿ ಎಂಬ ಮೂರು ಗ್ರಾಮಗಳ ಹೊಲಗಳನ್ನು ಕೂಡಿಸಿ ಸಾಮೂಹಿಕ ಬೇಸಾಯ ಆರಂಭಿಸಿದರು. ಇದಕ್ಕೆ ಅಲ್ಲಿ ದುಡಿಯುವ ರೈತರು ಒಗ್ಗಟ್ಟಾಗಿರಲು ಮಹಾದೇವಪ್ಪನವರು ಅಂತರ್ ಜಾತಿ ವಿವಾಹಗಳನ್ನು ಮಾಡಿಸಿದರು. ವಿನೋಭಾಜಿ ಹೇಳಿದ "ಗೋದಾನ, ಭೂದಾನ ಚಳುವಳಿಗಳಿಗೆ" ಚಾಲನೆ ಇತ್ತರು. "ಸರ್ವೋದಯ" ಜೀವನ ಪದ್ಧತಿಯನ್ನು ಪ್ರಾರ್ಥನಾ ಪದ್ಧತಿಯನ್ನು ತಮ್ಮ ಅನುಯಾಯಿಗಳಲ್ಲಿ ತಂದರು. ದಾಸಬೋಧೆಯ ಶ್ಲೋಕ ಪಠಣದೊಂದಿಗೆ ಭಗವದ್ಗೀತೆಯೂ ಸಮರಸಗೊಂಡಿತು. ಈ ಬಗೆಗೆ ಮುಂದಿನ ಅಧ್ಯಾಯಗಳಲ್ಲಿ ಪ್ರತ್ಯೇಕವಾಗಿ ವಿವರಿಸಲಾಗುತ್ತದೆ.

ತಮ್ಮಲ್ಲಿಯ ಚಳಿವಳಿಕಾರರನ್ನು ಅದರಲ್ಲಿ ಪಾಲ್ಗೊಳ್ಳಲು ಹಚ್ಚಿದರು ಮತ್ತು ಮಠದಲ್ಲಿ ಯಾರು ನಿರುದ್ಯೋಗಿಗಳಾಗಕೂಡದು ಎಂದು ಹೇಳಿ ಅವರೆಲ್ಲರಿಗೆ ಸಹಕಾರಿತತ್ವದ ಮೇಲೆ ಸಾಮೂಹಿಕ

ಬೇಸಾಯ ಮಾಡಲಿಕ್ಕೆ ಅಣಿಗೊಳಿಸಿದರು. ಇಂಚಗೇರಿ ಮಠ ದೈಹಿಕ ಮತ್ತು ಮಾನಸಿಕವಾಗಿ ಸದೃಢಗೊಳಿಸುವ ವಿದ್ಯಾಕೇಂದ್ರವಾಗಿದೆ.

ಅವರಿಗೆ ವಿನೋಭಾಜೀಯವರ ಜೀವನ ಶೈಲಿಯನ್ನು ಪದ್ಧತಿಯನ್ನು ಅಳವಡಿಸಿಕೊಳ್ಳುವಂತೆ ಮಾಡಿದರು. ಭಕ್ತಿಯ ಸಂದೇಶ, ಪ್ರಾರ್ಥನೆ, ಜೀವನ ಪದ್ಧತಿ, ಹಬ್ಬಗಳ ವೈಶಿಷ್ಟ್ಯಗಳನ್ನು ಹೇಳಿ ಅದರಲ್ಲಿ ಅವರನ್ನು ತೊಡಗಿಸಿದರು.

ಆಶ್ರಮಗಳ ನಿರ್ವಹಣೆಯಲ್ಲಿ ಮಹಿಳೆಯರಿಗೆ ಪ್ರಮುಖ ಸ್ಥಾನಕೊಟ್ಟಿದ್ದು, ಮಹಿಳಾ ಶಕ್ತಿ ಜಾಗ್ರತಿಗೆ ಮೂಲ ಪ್ರೇರಣೆಯಾಯಿತು. ರೈತ-ಕಾರ್ಮಿಕ ವರ್ಗಗಳಲ್ಲಿ ಮದುವೆ ಅತ್ಯಂತ ಅನಿವಾರ್ಯ ಅಂಗವಲ್ಲ, ಮಕ್ಕಳನ್ನು ಹುಟ್ಟಿಸುವದೇ ಬದುಕು ಅಲ್ಲ ಎನ್ನುವುದನ್ನು ಬ್ರಹ್ಮಚಾರ್ಯವನ್ನು ಸಂಸಾರಿಗಳು ಅನುಸರಿಸಲು ಸಾಧ್ಯವೆಂದು ಶರಣರು ಹೇಳಿದ "ಪ್ರವೃತ್ತಿ" ಮಾರ್ಗದ ಪರಮತತ್ವವನ್ನು ಆಚರಣೆಗೆ ತಂದರು. ಕೆಲವು ಸ್ತ್ರೀ ಪುರುಷರು ಸ್ವ-ಇಚ್ಛೆಯಿಂದ ಬ್ರಹ್ಮಚಾರಿಗಳಾಗಿಯೇ ಇರುವುದನ್ನು ಇವರ ಅನುಯಾಯಿಗಳಲ್ಲಿ ನೋಡಬಹುದು. ಮಹಾದೇವಪ್ಪನವರು ಬದುಕಿನುದ್ದಕ್ಕು ನಿಂದಿಸಿದ, ಬೋಧಿಸಿದ, ಅನುಸರಿಸಿದ ತತ್ವಗಳನ್ನು ತಾವು ನಡೆದು ತೋರಿದರು. ಅವರ ಅನುಯಾಯಿಗಳು ನಡೆಸಿಕೊಂಡು ಬರುವುದನ್ನು ಇಂದಿಗೂ ಕಾಣುತ್ತೇವೆ.

"ಜನರ ಸೇವೆಯೇ ಜನಾರ್ಧನ ಸೇವೆ" ಆಧ್ಯಾತ್ಮದ ಜೊತೆ ರಾಷ್ಟ್ರೀಯ ಭಾವನೆ ತುಂಬಿ ದೇಶ ಭಕ್ತಿ-ದೇವಭಕ್ತಿ, ದೇಶಸೇವೆ-ಈಶಸೇವೆ ಮನವರಿಕೆ ಮಾಡಿಕೊಟ್ಟು ಹುಟ್ಟಿನಿಂದ ನಿರ್ಗಮನದವರೆಗೆ, ಅಖಂಡ ಬ್ರಹ್ಮಚಾರಿಯಾಗಿ ದೀನದಲಿತರ ದಿಕ್ಕು ಧ್ವನಿಯಾಗಿ, ಶೋಷಿತ, ಸ್ತ್ರೀಯರ, ರೈತಕಾರ್ಮಿಕರ, ಅನೇಕ ಹೋರಾಟಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ತಮ್ಮ ಅನುಯಾಯಿಗಳನ್ನು ಅದರಲ್ಲಿ ಪಾಲ್ಗೊಳ್ಳುವಂತೆ ಬೋಧಿಸಿ ಅಮರರಾದ ಮಹಾ ಮಾನವತಾವಾದಿಯಾಗಿದ್ದಾರೆ.

ಅಧ್ಯಾಯ – ೩

ಮಹಾದೇವಪ್ಪನವರ ಚಳುವಳಿಗಳು

ಅಧ್ಯಾಯ – ೩

ಮಹಾದೇವಪ್ಪನವರ ಚಳುವಳಿಗಳು

ಸ್ವತಂತ್ರ ಚಳುವಳಿ – ಮುರಗೋಡ ಮಹಾದೇವಪ್ಪನವರು :

ಜಗತ್ತಿನ ನಾನಾ ದೇಶಗಳ ಜನಾಂಗಗಳ ಚರಿತ್ರೆಯಕ್ಕಿಂತ ಭಾರತದ ಚರಿತ್ರೆ ಭಿನ್ನ. ಭಾರತ ಒಡಿಬಂದವರನ್ನು ಎದುರುಗೊಂಡಿದೆ. ಇರಿಯಬಂದವರನ್ನು ಅಪ್ಪಿಕೊಂಡಿದೆ. ಭಾರತದ ವೈಭವಕ್ಕೆ ಮಾರು ಹೋದ ಡಚ್ಚರು ಪೋರ್ಚುಗೀಸರು ಇಲ್ಲಿಯೇ ನೆಲೆಸಿದರು. ವ್ಯಾಪಾರದ ನೆಪದಲ್ಲಿ ಬಂದ ಬ್ರಿಟಿಷರು ೧೮೬೫ರಲ್ಲಿ ಸಂಪೂರ್ಣ ಅಧಿಕಾರ ಸ್ಥಾಪಿಸಿದರು. ಒಗ್ಗಟ್ಟು ಇರದ ಭಾರತೀಯರಿಗೆ ವೈಚಾರಿಕತೆಯ ಕೊರತೆ, ಆಳುವವನೇ ದೇವರು ಅವನ ಎದುರಾಡಿದರೆ ನರಕ ಪ್ರಾಪ್ತಿಯಾಗುವುದೆಂದರು ದೇವರು, ಗುರು, ಧರ್ಮ, ಸಂಸ್ಕೃತಿಯ ಮೌಢ್ಯಕ್ಕೆ ಅಂಟಿಕೊಂಡಿದ್ದರು. ಭಾರತೀಯರಲ್ಲಿ ಐಕ್ಯಮತವಿರಲಿಲ್ಲ. ರಾಷ್ಟ್ರೀಯತೆಯ ಕೊರತೆ ಎದ್ದುಕಾಣುತ್ತಿತ್ತು. ಊಳಿಗ ಕೆಲಸವನ್ನು ನಿರ್ವಹಿಸುತ್ತಿದ್ದರು. ಇನ್ನೊಂದು ಕಡೆ ದೇಶಿಯ ರಾಜರುಗಳು ತಮ್ಮ ಅಧಿಕಾರದ ಉಳಿವಿಗಾಗಿ ತೆರೆಯ ಮರೆಯಲ್ಲಿ ಇಂಗ್ಲೀಷರಿಗೆ ಸಹಾಯ ಮಾಡುತ್ತಿದ್ದರು. ಇದನ್ನರಿತ ನರಿಹಂಚಿಕೆಯ, ಕುಹಕ ಬುದ್ಧಿಯ ಬ್ರಿಟಿಷರು ವಾಮಮಾರ್ಗದಿಂದ ಒಡೆದು ಒಡೆತನ ಮಾಡಹತ್ತಿದರು. ೧೮೦೦ ರಲ್ಲಿ ಮೊಗಲರನ್ನು, ಮರಾಠರನ್ನು, ಟಿಪ್ಪುನನ್ನು ಸೋಲಿಸಿ ಭಾರತದಲ್ಲಿ ವಸಾಹತುಶಾಹಿ ಸಾಮ್ರಾಜ್ಯ ಸ್ಥಾಪಿಸುವಲ್ಲಿ ಯಶಸ್ವಿಯಾದರು. ಮರಾಠರ ಪೇಶ್ವೆಗಳ ಆಡಳಿತ ವೈಖರಿಗೆ ಬೇಸತ್ತ ಜನ ಬದಲಾವಣೆ ಬಯಸುತ್ತಿದ್ದರು.

ಬ್ರಿಟಿಷರ ಆಡಳಿತ ಮೊದಮೊದಲು ಅಪ್ಯಾಯವೆನಿಸಿತ್ತು. ಅನಂತರ ಅವರ ದುರಾಡಳಿತದಿಂದ ಸಮಾನ ಅವಕಾಶಗಳಿಂದ ವಂಚಿತರಾಗ ತೊಡಗಿದರು. ಆಗ ದೇಶ ಪ್ರೇಮಿಗಳಿಗೆ ಇದು ಹಿಡಿಸದಾಯಿತು. "ಸಹಾಯಕ ಸೈನ್ಯ ಪದ್ಧತಿ" ದತ್ತು ಮಕ್ಕಳಿಗೆ ಹಕ್ಕಿಲ್ಲ, ದೇಸಿಯ ಸಂಸ್ಥಾನಗಳನ್ನು ತಮ್ಮ ತೆಕ್ಕೆಗೆ ತೆಗೆದುಕೊಳ್ಳುವ ಹುನ್ನಾರ ತಿಳಿದ ದೇಸಿಯ ಸಂಸ್ಥಾನಿಕರಲ್ಲಿ, ದೇಶ ಪ್ರೇಮಿಗಳಲ್ಲಿ ಐಕ್ಯತೆ, ರಾಷ್ಟ್ರೀಯ ಭಾವನೆ ಮೊಳಕೆಯೊಡೆದು ಪ್ರತಿಭಟಿಸತೊಡಗಿದರು. ೧೮೫೭ನೇ ವರ್ಷವಂತು ಇಡೀ ಭಾರತದ ತುಂಬ ಬ್ರಿಟಿಷ ವಿರೋಧಿ ವರ್ಷವಾಯ್ತು. ದೇಶದ ಯಾವುದೇ ಮೂಲೆಯಲ್ಲಿ ಹುಟ್ಟಿದ ಬೆಂಕಿ ದೇಶದಾದ್ಯಂತ ಚಾಚದೆ ಇರಲಿಲ್ಲ. ಉತ್ತರ–ದಕ್ಷಿಣ ಭಾರತವೆಂಬ ಅಂತರ ಉಳಿಯಲಿಲ್ಲ. ಕಿತ್ತೂರ ಬಂಡಾಯ ಹಲಗಲಿ ಬೇಡರ ಬಂಡಾಯಗಳಿಂದ ಬ್ರಿಟಿಷರಿಗೆ ದಿಕ್ಕ ತೋಚದಾಯಿತು. ಮುಂದೆ ಇವು "ಶಸಸ್ತ್ರ" ಬಂಡಾಯದಲ್ಲಿ ಪರ್ಯಾವಸಾನಗೊಂಡವು. ೧೮೫೭ರ ಸಿಪಾಯಿ ದಂಗೆ ಹೊಸ ದಿಕ್ಕನ್ನು ತೋರಿಸಿತು. ದಂಗೆಕೋರರನ್ನು ಬ್ರಿಟಿಷ ಸರಕಾರ ನಿಶಸ್ತ್ರರನ್ನಾಗಿ ಮಾಡುವ ಉದ್ದೇಶ ಹೊಂದಿತ್ತು.

ಇದರಿಂದ ದಂಗೆಕೋರರನ್ನು ಮತ್ತಷ್ಟು ವಿರೋಧಿ ತತ್ವವನ್ನು ಗಲಭೆಗೊಳಿಸುವಂತಾಯಿತು. ಭಾರತದಲ್ಲಿ ಬ್ರಿಟಿಷರ ಆಡಳಿತಕ್ಕೆ ಒಳಗಾಗದ ಪ್ರದೇಶವೇ ಇರಲಿಲ್ಲ. ಜೊತೆಗೆ ದೇಶಿಯರ ಸರ್ವನಾಶ, ರಾಜಮಹಾರಾಜರ ಪತನ, ಧರ್ಮಕ್ಕೆ ಅಪಮಾನ, ಕಂದಾಯದಲ್ಲಿ ಹೆಚ್ಚಳ, ಚಾಕಿದಾರರ ತೆರಗೆಯಲ್ಲಿ ಹೆಚ್ಚಳದಿಂದ ಜನಜೀವನ ಅಸ್ತವ್ಯಸ್ತವಾಯಿತು. ಇದರಿಂದ ಬ್ರಿಟಿಷ ಆಡಳಿತ ಕುರಿತು ಜನರಲ್ಲಿ ಅಪ್ರೀಯ ಭಾವನೆ ಮೂಡತೊಡಗಿತು. ಆಗ ದೇಶದಾದ್ಯಂತ "ಕ್ರಾಂತಿಕಾರಕ ಸಂಘಟನೆಗಳು" ಉಗಮಗೊಂಡವು.

ಮಹಾರಾಷ್ಟ್ರದಲ್ಲಿ "ವಾಸುದೇವ ಬಳವಂತ ಪಡಕೆ" ನಾಸಿಕದಲ್ಲಿ ಸಾವರಕರ "ಅಭಿನವ ಭಾರತ" ಸ್ಥಾಪಿತವಾದವು. ಇದರಲ್ಲಿ ನಮ್ಮ ಕರ್ನಾಟಕದ ಆಲೂರವೆಂಕಟರಾಯ, ಮುರುಡೇಶ್ವರ ಚಂದಾವರಕರ ಕಾಕಾ ಕಾವೆಲಕರರು ಸದಸ್ಯರಿದ್ದರು. ಬಂಗಾಲದಲ್ಲಿ "ಅನುಸೀಲನ ಸಮಿತಿ" ಪಂಜಾಬದಲ್ಲಿ 'ಗದರ' ಹುಟ್ಟಿ ಶಸಸ್ತ್ರ ಕ್ರಾಂತಿಯ ಪ್ರಚಾರ ಮಾಡತೊಡಗಿದರು.

೧೮೩೨ ರಲ್ಲಿ ರಾಜಾರಾಮ ಮೋಹನರಾಯ 'ಬ್ರಿಟಿಷ ಇಂಡಿಯಾ ಅಸೋಸೆಶಿಯನ್' ೧೮೫೨ ರಲ್ಲಿ ಬಂಗಾಲದಲ್ಲಿ 'ಬ್ರಿಟಿಷ – ಇಂಡಿಯಾ ಅಸೋಸೆಶಿಯನ್' ೧೮೬೩ರಲಿ 'ಜಾನ್‌ಬ್ರೆಟ್ ಇಂಡಿಯನ್ ರಿಪಾರ್ಮ ಸೊಸಾಯಿಟಿ', ೧೮೮೫ರಲ್ಲಿ 'ಇಂಡಿಯನ್ ನ್ಯಾಶನಲ ಕಾನ್ಪರನ್ಸ್' ಸ್ಥಾಪನೆಗೊಂಡು ೧೮೮೬ರಲ್ಲಿ 'ಇಂಡಿಯನ್ ನ್ಯಾಶನಲ್ ಕಾಂಗ್ರೇಸ್' ಸ್ಥಾಪನೆಯಾಯಿತು. ಈ ಸಂಸ್ಥೆ ವರ್ಷದಲ್ಲಿ ೨ ದಿನ ಕ್ರಿಸಮಸ್ ಸೂಟಿಯಲ್ಲಿ ಅಧಿವೇಶನ ಸೇರಿ ರಾಜಕೀಯ ವಿಷಯ ಚರ್ಚಿಸಲ್ಪಡುತ್ತಿತ್ತು. ಸ್ವಾತಂತ್ರ್ಯವನ್ನು ಪಡೆಯಲು ಚಳುವಳಿಕಾರರನ್ನು ಎಚ್ಚರಿಸುವ ಧೈರ್ಯ ಯಾರಿಗೂ ಇರಲಿಲ್ಲ. ಕೇವಲ ವಿನಂತಿ ಅರ್ಜಿಗಳೇ ನಡೆದು ಹೋದವು. ಮುಂದೆ ೧೯೦೬ರಲ್ಲಿ ಸ್ವಾತಂತ್ರ್ಯದ ಶಬ್ಧ ದೇಶವ್ಯಾಪಿ ಮೊಳಗಿ ಎಚ್ಚರಿಸತೊಡಗಿತು.

ಆಗ ಕಾಂಗ್ರೇಸ್ಸಿನಲ್ಲಿ ಎರಡು ಬಣಗಳಿದ್ದವು. ಉಗ್ರವಾದಿ, ತೀವ್ರಗಾಮಿಗಳ ಒಂದು ಗುಂಪು. ಇನ್ನೊಂದು ಸೌಮ್ಯವಾದಿಗಳ ಗುಂಪು. ದೇಶದ ಸ್ವಾತಂತ್ರ್ಯಕ್ಕಾಗಿ ಶಸಸ್ತ್ರ ಹೋರಾಟ ಮಾಡಬೇಕೆಂಬುದು ಉಗ್ರವಾದಿಗಳ ನಿಲುವಾಗಿತ್ತು. ಇದರ ಮುಂದಾಳತ್ವವನ್ನು ಬಾಲಗಂಗಾಧರ ತೀಲಕ, ಲೋಕಮಾನ್ಯ ತಿಲಕ ವಹಿಸಿದ್ದರು. ಇವರ ಹಿಂಬಾಲಕರಾಗಿ ಲಾಲ್–ಬಾಲ–ಪಾಲ, ಸುರೇಂದ್ರನಾಥ ಬ್ಯಾನರ್ಜಿ, ಅರವಿಂದ ಘೋಷರು ಇದ್ದರು. ಇವರ ತತ್ವವನ್ನು "ಇಂಚಗೇರಿ ಸಂಪ್ರದಾಯದ ಮುರಗೋಡ ಮಹಾದೇವಪ್ಪನವರು ಅನುಸರಿಸಿದರು. ಮತ್ತು ತಮ್ಮೆಲ್ಲ ಅನುಯಾಯಿಗಳನ್ನು ಸ್ವತಂತ್ರ್ಯ ಭಾರತಕ್ಕಾಗಿ ಹೋರಾಟ ಮಾಡಲು ತೊಡಗಿಸಿದರು. ತಾವೂ ಅದರಲ್ಲಿ ಭಾಗಿಯಾದರು ಸ್ವರಾಜ್ಯವೇ ನಮ್ಮ ಜನ್ಮ ಸಿದ್ಧ ಹಕ್ಕಾಗಲಿ ಮತ್ತು "ಒಂದೇ ಮಾತರಂ" ಉಚ್ಚರಿಸುವ ಧೈರ್ಯವನ್ನು ತಮ್ಮೆಲ್ಲ ಅನುಯಾಯಿಗಳಲ್ಲಿ ತುಂಬಿದರು.

ದೇಶದಾದ್ಯಂತ ಸ್ವತಂತ್ರಕ್ಕಾಗಿ ನಡೆದ ಹೋರಾಟ ಪ್ರತಿಭಟನೆ, ಚಳುವಳಿಯ ಕಾವು ಬ್ರಿಟೀಷರಿಗೆ ತಾಗದೆ ಇರಲಿಲ್ಲ. ಆಗ ಗಾಂಧಿಜೀಯವರಿಂದ "ಸೈತಾನಿ ಸರಕಾರ" ಎಂದು ಕರೆಯಿಸಿಕೊಂಡ ಸರಕಾರ ಭಾರತವು ಸ್ವಾತಂತ್ರ್ಯಕ್ಕೆ ಯೋಗ್ಯವಿದೆಯೇ ಎಂದು ಕಂಡು ಹಿಡಿಯಲು ಒಂದು ಸಮಿತಿ ರಚಿಸಿತು. ಅದರ ವರದಿ ಸಿಪಾರಸ್ಸು ನೋಡಿ ಮುಂದೆ ವಿಚಾರಿಸಲಾಗುವುದೆಂದೂ ಅಲ್ಲಿಯವರೆಗೆ ಉಪದೇಶ ನೀಡಿ, ಯಾರಾದರು ವಿರೋಧ ಮಾಡಿದರೆ ಹತ್ತಿಕ್ಕುವ ಬೆದರಿಕೆ ಹಾಕಿ ಮೂಗಿಗೆ ತುಪ್ಪ ಒರಸಿ ಯಾರು ಪ್ರತಿಭಟನೆ ಮಾಡಬಾರದೆಂದು ಸಭೆ, ಸಮಾರಂಭ, ಮೆರವಣಿಗೆ ಮಾಡಬಾರದೆಂದು ಪ್ರತಿಬಂದಿಸಿತು. ಇದಕ್ಕೆ ಮನಿಯದ ಚಳುವಳಿಕಾರರು 'ಜಾಲಿಯನ್-ವಾಲ್' ಭಾಗದಲ್ಲಿ ಸಭೆ ಸೇರಿತು. ಆಗಿನ ಗವ್ಹರ್ನರ ಜನರಲ್ 'ವ್ರುಡ್ ಡಾಯರನ' ಕೃತ್ಯದಿಂದ ಐದಾರು ನೂರು ಹೆಣಗಳು ಬಿದ್ದವು.

೧೯೨೦ರಲ್ಲಿ ತಿಲಕರ ಅನಿರೀಕ್ಷಿತವಾದ ಮರಣದ ನಂತರ ಸೌಮ್ಯಗಾಮಿ "ಗಾಂಧಿಜೀ" ಯುಗ ಪ್ರಾರಂಭವಾಯಿತು. ಕಲ್ಕತ್ತಾದಲ್ಲಿ ೧೯೨೮ರಲ್ಲಿ ಕಾಂಗ್ರೇಸ್ ಅಧಿವೇಶನದಲ್ಲಿ ಮೊತಿಲಾಲ ನೆಹರೂರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಭಾರತಕ್ಕೆ ಸಂಪೂರ್ಣ ಸ್ವಾತಂತ್ರ್ಯ ಸಿಗಬೇಕೆಂಬ ಗೊತ್ತುವಳಿ ಪಾಸು ಮಾಡಿತು. ೧೯೩೦ ಜನೇವರಿ ೨೬ ಸ್ವಾತಂತ್ರ್ಯ ದಿನವೆಂದು ಆಚರಿಸಲು ಕರೆಕೊಟ್ಟರು. ದೃತಿಗೇಡಿ, ಹೊನೆಗೇಡಿ ಸರಕಾರ ಸಭೆ, ಸಮಾರಂಭ, ಮೆರವಣಿಗೆ, ಮಾಡಗೊಡದೆ ಮುಖಂಡರನ್ನು ಬಂಧಿಸತೊಡಗಿತು. ಇದರ ಕಾವು ದೇಶದಾದ್ಯಂತ ಹಬ್ಬಿತು. ಇದರ ಕಾವು ನಮ್ಮ ಇಂಚಗೇರಿ ಮಠದ ಗುರುಗಳಾದ "ಗೀರಮಲ್ಲೇಶ್ವರ ಮಹಾರಾಜ"ರಿಂದ ಕಾಕಡಾರತಿ ಸಮಯದಲ್ಲಿ "ದೇವರೆಂದು" ಕರೆಯಿಸಿಕೊಂಡು ಸಂಪ್ರದಾಯದ ಮುಂದಲ ಗುರುವಾಗಲಿದ್ದ ಗುರು ಮಹಾದೇವಪ್ಪನವರು ಅಪೂರ್ವ ದೇಶ ಪ್ರೇಮಿ, ಸ್ವಾತಂತ್ರ್ಯ ಪ್ರೇಮಿ. ಸದಾ ದೇಶ ಪಾರತಂತ್ರ್ಯದಲ್ಲಿ ನರಳುವಂತಿದ್ದು ಮಹಾದೇವಪ್ಪನವರ ಮನಸ್ಸಿನಲ್ಲಿ ಕಟೆಯುತ್ತಿತ್ತು. ಇದೇ ಒಳ್ಳೆಯ ಸಮಯ ಎಂದು ಬ್ರಿಟಿಷ ಪಾಶವಿ ಬಂಧ ಮುಕ್ತಗೊಳ್ಳಲು ಎಂದು ಮಠದ ಕಟ್ಟುಪಾಡುಗಳನ್ನು ಮುರಿದು, "ಸ್ವಾತಂತ್ರ್ಯವೇ ನಮ್ಮ ಜನ್ಮ ಸಿದ್ದ ಹಕ್ಕು" ಎಂದು ಘೋಷಣೆ ಕೂಗಿದರು, ಹಾಗೂ ಬೀದಿಗಿಳಿದರು. ಸೌಮ್ಯ ಮತ್ತು ಉಗ್ರವಾದಿಗಳರಡನ್ನು ಅಳವಡಿಸಿಕೊಂಡಂತವರು, ಸುಭಾಶಚಂದ್ರ ಭೋಸ್‌ರ ಮಾದರಿಯ ಸ್ವಾತಂತ್ರ್ಯ ಯೋಧ ಗಾಂಧಿಜೀಯವರ ಪ್ರಭಾವಕ್ಕೊಳಗಾಗಿ ಸ್ವಾತಂತ್ರ್ಯ ಚಳುವಳಿಯಲ್ಲಿ ತಾನು ಮತ್ತು ತನ್ನೆಲ್ಲ ಅನುಯಾಯಿಗಳನ್ನು ತೊಡಗಿಸಿದರು. ಇದರಿಂದ ಅನೇಕರಿಗೆ ಅಸಹನೆಯಾಯಿತು. ಮಠದ ಸ್ವಾಮಿಗೆ ಇದು ತಕ್ಕ ಕೆಲಸವಲ್ಲವೆಂದು ಪ್ರತಿಭಟಿಸಿದರು. ಕೆಲವರು ಮೂಗು ಮುರಿದರು, ಅಲ್ಲಸಲ್ಲದ ಮಾತನ್ನಾಡಿದರು. ಇದಾವುದಕ್ಕೆ ಜಗ್ಗದೆ ಎಲ್ಲರ ಪ್ರೀತಿ, ವಿಶ್ವಾಸ ಗಳಿಸಿದ ಮಹಾದೇವಪ್ಪನವರು ಸ್ವಾತಂತ್ರ್ಯ ಚಳುವಳಿಯಲ್ಲಿ ತೊಡಗಿದರು. ಮತ್ತು ೧೯೩೮ರಲ್ಲಿ 'ಹರಿಪುರ'ದಲ್ಲಿ ಕಾಂಗ್ರೇಸ್ ಅಧಿವೇಶನ ಸೇರಿತ್ತು. ಆ ಅಧಿವೇಶನಕ್ಕೆ ಮುರಗೋಡ ಮಹಾದೇವಪ್ಪನವರು ಭಾಗವಹಿಸಿದ್ದರು. ತಮ್ಮ ಜೊತೆ ವಿದ್ಯಾಗುರುಗಳಾದ "ಸಿದ್ರಾಮಯ್ಯ ಶಿರಹಟ್ಟಿ ಮಠ"[೧] ಮತ್ತು ಕೆಲಸಗಂಡಿಗರನ್ನು ಕರೆದುಕೊಂಡು ಹೋಗಿದ್ದರು.

---

೧. ದೇವಮಾನವ ಹಸ್ತ ಪ್ರತಿ – ಪುಟಸಂಖ್ಯೆ : ೩. ಶ್ರೀ ಎಸ್. ಪಿ. ಚವಲಾರ

ಹರಿಪುರ ಕಾಂಗ್ರೇಸ್ ಅಧಿವೇಶನದಲ್ಲಿ ಪಾಲ್ಗೊಂಡ ಮಹಾದೇವಪ್ಪನವರು :

ಸ್ವಾತಂತ್ರ್ಯಕ್ಕಾಗಿ ಬ್ರಿಟಿಷರ ವಿರುದ್ಧ ಪ್ರತಿಭಟಿಸಿ ಭಾಷಣ ಮಾಡಿದ್ದರಿಂದ ಮುರಗೋಡ ಮಹಾದೇವಪ್ಪನವರಿಗೆ ಒಂದು ತಿಂಗಳ ಜೈಲಿನಲ್ಲಿ ಇಡಲಾಗಿತ್ತು. ಅದನ್ನು ಪೂರೈಸಿ ಬಿಡುಗಡೆ ಹೊಂದಿ ಬಂದಿದ್ದರು. ಅದೇ ವೇಳೆಗೆ ಹರಿಪುರದಲ್ಲಿ ಕಾಂಗ್ರೇಸ್ ಅಧಿವೇಶನ ಕರೆದ ಸುದ್ಧಿ ಮಹಾದೇವಪ್ಪನವರಿಗೆ ಮುಟ್ಟದೆ ಇರಲಿಲ್ಲ. ಈ ಸುದ್ಧಿ ತಿಳಿದ ಮಹಾದೇವಪ್ಪನವರು ಅಧಿವೇಶನದಲ್ಲಿ ಪಾಲ್ಗೊಳ್ಳಲು ನಿರ್ಧರಿಸಿದರು. ಕರ್ನಾಟಕ ಮತ್ತು ಮಹಾರಾಷ್ಟ್ರದಲ್ಲಿಯ ಭಕ್ತರೆಲ್ಲರಿಗೂ ಇದರ ಸಮಾಚಾರ ಮುಟ್ಟಿಸಿದರು. ಅದೇ ಸಂದರ್ಭದಲ್ಲಿ ಇವರ ಜೊತೆ ಜೈಲಿಗೆ ಹೋದವರೆಲ್ಲರೂ ಬಿಡುಗಡೆ ಹೊಂದಿ ಇಂಚಗೇರಿಗೆ ಬಂದು ಮಹಾದೇವಪ್ಪನವರಿಗೆ ಬೆಟ್ಟಿಯಾದರು. ತಮ್ಮೆಲ್ಲ ಅನುಯಾಯಿಗಳನ್ನು ಸೇರಿಸಿ ಸಭೆ ಮಾಡಿದರು. ಮಹಾದೇವಪ್ಪನವರು ಜನರಿಗೆ ಉಪದೇಶ ಮಾಡುತ್ತಾ, ಜನೇವರಿ ಮೊದಲನೆ ವಾರದಲ್ಲಿ 'ಹರಿಪುರ'ದಲ್ಲಿ ಕಾಂಗ್ರೇಸ್ ಅಧಿವೇಶನ ಇರುವುದು. ಅದರಲ್ಲಿ ನಾವೆಲ್ಲರೂ ಭಾಗವಹಿಸೋಣ! ಎಂದು ತಿಳಿಸಿದರು. ಕಾಂಗ್ರೇಸ್ಸಿನಲ್ಲಿ ಎರಡು ಬಣಗಳಿದ್ದಂತೆ ತೋರುತ್ತದೆ. 'ಬಾಲಪಕ್ಷ' ಇದರ ಮುಖಂಡತ್ವವನ್ನು ಸುಭಾಶಚಂದ್ರ ಭೋಸ್‌ರು ವಹಿಸುತ್ತಾರೆ. ಇನ್ನೊಂದು ಬಣ "ಮವಾಳ ಪಕ್ಷ" ಇದರಲ್ಲಿ ಬಹುತೇಕ ವಯಸ್ಸಾದವರು ಇರುವರು. ಇದರ ಮುಖಂಡತ್ವವನ್ನು "ಮಹಾತ್ಮಾ ಗಾಂಧೀಜಿ" ಅವರು ವಹಿಸುತ್ತಾರೆ. ಇವರು ಸೌಮ್ಯವಾದಿಗಳು ಬ್ರಿಟಿಷರನ್ನು ಅಹಿಂಸಾತ್ಮಕದಿಂದ ಗೆಲ್ಲೋಣೊ ಎಂದು ಕೈಯಲ್ಲಿ 'ಅಹಿಂಸೆಯ' ಖಡ್ಗ ಹಿಡಿದವರು. ಇದರಿಂದ ಸ್ವಾತಂತ್ರ್ಯ ಪಡೆಯಬೇಕೆನ್ನುವಂತವರು. ಇವರ ತತ್ವಕ್ಕೆ ವಿರೋಧವಾಗಿರುವಂತದ್ದು ಭೋಸರದು. ಇವರು ಉಗ್ರವಾದಿಗಳು. "ಮುಳ್ಳಿನಿಂದ ಮುಳ್ಳನ್ನು" ತೆಗೆಯಬೇಕೆಂಬ ಧೋರಣೆವುಳ್ಳವರು. ಅತ್ತು ಕರೆದರೆ ಯಾರು ಸ್ವಾತಂತ್ರ್ಯವನ್ನು ಕೊಡಲಾರರು. ಅದು ಪುಕ್ಕಟೆಯಾಗಿ ಸಿಗುವ ವಸ್ತುವಲ್ಲ. ಅದಕ್ಕೆ ತಕ್ಕ ಬೆಲೆ ಕೊಟ್ಟು ಪಡೆಯಬೇಕು ಕೈ ಒಡ್ಡಬಾರದು. ಎಂದು ಉಗ್ರ ಮತ್ತು ಸೌಮ್ಯವಾದವನ್ನು ಅಳವಡಿಸಿಕೊಂಡ 'ಮಹಾದೇವಪ್ಪನವರು' ನರೆದ ಭಕ್ತರೆಲ್ಲರಿಗೆ ಭೋದಿಸಿದರು. ನಾವು ಇಂಚಗೇರಿಯವರು ಇವೆರಡನ್ನು ಅನುಸರಿಸಿ ಬ್ರಿಟಿಷರ ಜೊತೆ ಹೋರಾಡಿದರೆ ಅವರ ಆಡಳಿತ ಯಂತ್ರ ಕುಸಿದು ಬಿಳುತ್ತದೆ. ಯಾವಾಗ ಯಾವ ಪ್ರಸಂಗ ಬರುತ್ತದೆ ಹಾಗೆ ನಾವು ನಡೆದುಕೊಳ್ಳಬೇಕು ಎಂದು ನಾಳೆ ನಡೆಯುವ ಅಧಿವೇಶನದಲ್ಲಿ ಪಾಲ್ಗೊಳ್ಳೋಣ. ಸುಭಾಶಚಂದ್ರರನ್ನು ಆರಿಸಿ ತರೋಣ! ಎಂದು ತಮ್ಮೆಲ್ಲ ಅನುಯಾಯಿಗಳಿಗೆ ಬೋಧಿಸಿದರು. ಇವರ ಮಾತಿಗೆ ಸಮ್ಮತಿಸಿದ ಭಕ್ತ ಜನರೆಲ್ಲರೂ 'ಪಾದಯಾತ್ರೆ' ಮೂಲಕ ಹೋಗಲು ನಿರ್ಧರಿಸಿದರು. ಅದರಂತೆ ಎಲ್ಲ ಸಿದ್ಧತೆ ಮಾಡಿಕೊಂಡು "ಜೈಕಾರ" ಹಾಕುತ್ತಾ ಪಾದಯಾತ್ರೆ ಕೈಕೊಂಡರು. ದಾರಿಯಲ್ಲಿ ಹೊತ್ತು ಮುಳಗಿದ ಊರಲ್ಲಿ ಆ ಊರಿನ ಜನರನ್ನು ಜಾಗ್ರತೆಗೊಳಿಸಲು ಸಭೆ-ಸಮಾರಂಭ ಏರ್ಪಡಿಸಿ, ಸ್ವಾತಂತ್ರ್ಯದ ಬಗ್ಗೆ ತಿಳಿ ಹೇಳುತ್ತಾ ಹರಿಪುರಕ್ಕೆ ಬಂದು ತಲುಪಿದರು.

ಮಾರನೆ ದಿನ "ಅಖಿಲ ಭಾರತ ಕಾಂಗ್ರೇಸ್" ಅಧ್ಯಕ್ಷರ ಆಯ್ಕೆಯ ಕಾರ್ಯದಲ್ಲಿ ೩-೪ ಸಾವಿರ ಜನ ಸೇರಿದ್ದರು. ಸೌಮ್ಯವಾದಿ ಗಾಂಧಿಜೀಯವರು ಸತ್ಯಾಗ್ರಹ ಕುರಿತು ಭಾಷಣ ಮಾಡಿದರು. ಇವರನ್ನು ಕೆಲ ಹಿರಿಯ ಮುಖಂಡರು ಬೆಂಬಲಿಸಿದರು. ಸುಭಾಶಚಂದ್ರ ಭೋಸ್‌ರು ಉಗ್ರವಾದಿಗಳು "ಏಟಿಗೆ ಎದುರೇಟು ಗುಂಡಿಗೆ ಗುಂಡು", ಕೈವಡ್ಡಿ ಬೇಡಿದರೆ ಸ್ವಾತಂತ್ರ್ಯ ಲಭಿಸಲಾರದು. ಉಗ್ರವಾದಬೇಕು

ಎಂದು ಹೇಳಿದರು. ಎರಡು ಗುಂಪಿನ ವಿಚಾರ ತಿಳಿದಿದ್ದ "ಮುರಗೋಡ ಮಹಾದೇವಪ್ಪನವರು ಎದ್ದು ನಿಂತು 'ಸ್ವಾತಂತ್ರ್ಯ ನಮ್ಮ ಜನ್ಮ ಸಿದ್ದ ಹಕ್ಕು', ರಾಜಕೀಯ ಸ್ವಾತಂತ್ರ್ಯ ಸಿಕ್ಕರೆ ಧಾರ್ಮಿಕ ಸ್ವಾತಂತ್ರ್ಯ ಸಿಗುವುದು. ನಮಗೆ ಧರ್ಮ ಬೆಳಸಲಿಕ್ಕೆ ಅನೂಕುಲವಾಗುವುದು. ಇವೆರಡು ಸತ್ಯಶುದ್ಧವಾದವುಗಳು. ಸತ್ಯವು ಶಕ್ತಿದಾಯಕ, ನಿರ್ಮಲವಾದುದು, ಜ್ಞಾನಪೂರಿತವಾದದ್ದು, 'ಸತ್ಯವೇ ದೇವರು' ಶರೀರ, ಮನಸ್ಸು, ಆದ್ಯಾತ್ಮವನ್ನು ಶಸಕ್ತಗೊಳಿಸುವದು ಹಾಳು ಮಂತ್ರ, ತಂತ್ರಗಳಿಂದ ಪ್ರಯೋಜನವಾಗಲಾರದು ಎಂದು ಉಪದೇಶ ನೀಡಿದರು. ಕಪಟ, ಕುಟಿಲ ಕಾರ್ಯಸ್ಥಾನದ ಇಂಗ್ಲೀಷರ ವಿರುದ್ಧ ಹಿಂಸಾತ್ಮಕ ಹೋರಾಟಬೇಕು. ನಾವು ಧ್ಯಾನ ಮಾಡುತ್ತಾ ಹೋರಾಟ ಮಾಡಿದರೆ ಜಯ ಕಟ್ಟಿಟ್ಟ ಬುತ್ತಿ, ಹೇಡಿಗೆ ಉಳಿಗಾಲವಿಲ್ಲ. ಹೆಡಿತನವನ್ನು ತುಳಿದು ಮೇಲೇಳಬೇಕು. "ಇದ್ದರೆ ಸ್ವರಾಜ್ಯ ಸತ್ತರೆ ಸ್ವರ್ಗ" ಎಂದು ಬೋಧಿಸಿದರು. ಹಿರಿ-ಕಿರಿಯರಲ್ಲಿ ಚರ್ಚೆ ನಡೆದು ಚುನಾವಣೆ ಅನಿವಾರ್ಯವಾಯಿತು. ಗಾಂಧೀಜಿಯವರು ಅಪಜಯುವಾಗುವುದೆಂದು ತಿಳಿದು "ಪಟ್ಟಭಿ ಸೀತಾರಾಮಯ್ಯನವರನ್ನು" ಚುನಾವಣೆ ಕಣಕ್ಕಿಳಿಸಿದರು. ಕಿರಿಯ ಬಣದವರು "ಸುಭಾಶಚಂದ್ರ ಭೋಸ್‌ರನ್ನು ಕಣಕ್ಕಿಳಿಸಿದರು. ಭೋಸರ ಬೆನ್ನೆಲುಬಾಗಿನಿಂತ ಮಹಾದೇವಪ್ಪನವರ ಪರಿಶ್ರಮದಿಂದ ಕರ್ನಾಟಕ ಮತ್ತು ಬಂಗಾಲದಿಂದ ಬೆಂಬಲ ದೊರಕಿತು. 'ಭೋಸರು' ಆರಿಸಿಬಂದರು. ಸುಭಾಶಚಂದ್ರ ಭೋಸ್‌ರು IAS ಕಲಿತ ಪಂಡಿತ ಆದರೆ ಮಹಾದೇವಪ್ಪನವರು ಕೇವಲ ಕನ್ನಡ ೨ನೇ ಇಯತ್ತೆ ಕಲಿತವರು. ಆತ್ಮಜ್ಞಾನ ಪಡೆದ, ಸ್ಥಿತ ಪ್ರಜ್ಞೆ ತ್ರಿಗುಣಾತೀತನು ಸಕಲ ಸಿದ್ದಿಪಡೆದ ಆಧ್ಯಾತ್ಮ ಜೀವಿಯಾದ ಮಹಾದೇವಪ್ಪನು 'ಜಯ' ಲಭಿಸುವುದೆಂದು ಭವಿಷ್ಯ ನುಡಿದಿದ್ದರು.

ಅಧ್ಯಕ್ಷ ಸ್ಥಾನ ಅಲಂಕರಿಸಿದ ಸುಭಾಶಚಂದ್ರ ಭೋಸರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ನಾವು ಬಿಸಿರಕ್ತವುಳ್ಳವರು. ಪೂರ್ವಕ್ಕೆ ಮೂಡಿಸುವ ಸೂರ್ಯನನ್ನು ಪಶ್ಚಿಮಕ್ಕೆ ಮೂಡಿಸುವ ಸಾಮರ್ತ್ಯ ಹೊಂದಿದವರು ಬ್ರಟಿಷರ ಬಾಯಂಜಲಕ್ಕೆ ಕೈವಡ್ಡಬಾರದು. ಉಗ್ರ ಹೋರಾಟ ಮಾಡಬೇಕು. ಬಂದೂಕು, ಪಿಸ್ತೂಲ ತಯಾರಿಸಿಕೊಳ್ಳಬೇಕು. ಚಳುವಳಿಕಾರರ ಗುಂಪನ್ನು ಸಿದ್ಧಪಡಿಸಬೇಕು. ಬ್ರಿಟಿಷ ಆಡಳಿತ ಯಂತ್ರ ಕುಸಿಯುಬೇಕಾದರೆ ಸರಕಾರ ಒಡೆತನದಲ್ಲಿರುವ ಎಲ್ಲ ಕಛೇರಿಗಳನ್ನು ದ್ವಂಸಗೊಳಿಸಬೇಕು, ಹೆಡಿಗಳಾಗಬಾರದು, ಪರರ ಎಂಜಲಕ್ಕೆ ಕೈ ಒಡ್ಡಬಾರದು, ದಾಸ್ಯವೃತ್ತಿ ತೊಲಗಿಸಬೇಕು. ಧೈರ್ಯದಿಂದ ಮುನ್ನುಗ್ಗಬೇಕು. "ಧೈರ್ಯವೇ ಸರ್ವತ್ರ ಸಾಧನಂ" ಎಂದು ಹೇಳಿ ತಮ್ಮ ಭಾಷಣಕ್ಕೆ ವಿರಾಮ ಹಾಕಿದರು. ಇವರ ಭಾಷಣದಿಂದ ಪ್ರಚೋದಿತರಾದ ಮಹಾದೇವಪ್ಪನವರು ತಿರುಗಿ ಇಂಚಗೇರಿಗೆ ಬಂದು ತಮ್ಮೆಲ್ಲ ಭಕ್ತರನ್ನು ಕೂಡಿಸಿ ಹರಿಪುರದಲ್ಲಿ ನಡೆದ ವಿಷಯ ಪ್ರಸ್ತಾಪಿಸಿದರು. ಸುಭಾಶಚಂದ್ರ ಭೋಸರು ಹಾಕಿಕೊಟ್ಟ ಮಾರ್ಗದಲ್ಲಿ ತಾವು ನಡೆದು ಮತ್ತು ತಮ್ಮ ಅನುಯಾಯಿಗಳನ್ನು ಅದರಲ್ಲಿ ತೊಡಗಿಸಿದರು. "ಸುಭಾಶಚಂದ್ರ ಭೋಸ್"ರು ಕರ್ನಾಟಕಕ್ಕೆ ಬಂದಾಗ ಮಹಾದೇವಪ್ಪನವರು 'ಗಿರೀಶ" ಆಶ್ರಮಕ್ಕೆ ಕರೆದುಕೊಂಡು ಬಂದಿದ್ದರು.

ಕಾನೂನುಭಂಗ ಚಳುವಳಿ : ಮುರಗೋಡ ಮಹಾದೇವಪ್ಪನವರು :

ಬ್ರಿಟಿಷ ಸರಕಾರ ಉಪ್ಪಿನ ಮೇಲೆ ಕರ ಹೇರಿ ವಸೂಲಿ ಮಾಡತೊಡಗಿತು. ಅನುಮತಿ ಇಲ್ಲದೆ ಯಾರು ಉಪ್ಪ ತಯಾರಿಸಬಾರದು, ಕಾಯ್ದೆ ಜಾರಿಯಲ್ಲಿ ತಂದಿತು. ಬಡ-ಬಲ್ಲಿದರಿಗೆ ಇದು ಎಲ್ಲರಿಗೂ ಅವಶ್ಯವೆಂದರಿತು ಗಾಂಧಿಜೀ ಆ ಕಾಯ್ದೆಯನ್ನು ಉಲ್ಲಂಘಿಸಿ, ೦೬-೦೪-೧೯೩೦ ರಂದು ಸತ್ಯಾಗ್ರಹಕ್ಕೆ ಕರೆ ನೀಡಿ ಕಾಲ್ನಡಿಗೆಯಿಂದ ದಂಡಿಯಾತ್ರೆ ಕೈಕೊಂಡರು. "ಹಿಡಿ ಉಪ್ಪು ಕ್ರಾಂತಿಯ ಕಿಡಿಯಾಯ್ತು" ಈ ಸುದ್ದಿ ದೇಶ ವ್ಯಾಪ್ತಿ ಹಬ್ಬತು. ಚಳುವಳಿಕಾರರ ಸಂಘಟನೆಗಳು ಇದರಲ್ಲಿ ಭಾಗವಹಿಸಿದವು. ದೇಶದ ನಾನಾ ಕಡೆಗಳಿಂದ ಒಟ್ಟು ೩೦,೦೦೦ ಸಾವಿರ ಚಳುವಳಿಕಾರರು ಪಾಲ್ಗೊಂಡಿದ್ದರು.

ಈ ಕಾನೂನು ಭಂಗ ಚಳುವಳಿಗೆ ನಮ್ಮ ಕರ್ನಾಟಕ ಹೊರತಾಗಿರಲಿಲ್ಲ. ಮಂಗಳೂರು, ಕುಂದಾಪುರ, ಉಡುಪಿ, ಕಾರ್ಕಳ, ಪುತ್ತೂರು ಮಲ್ಪೆ (ದ.ಕ) ಉತ್ತರ ಕನ್ನಡ ಜಿಲ್ಲೆ ವಿಜಾಪುರ ಜಿಲ್ಲೆಯ ಬಿಸನಾಳ ಧಾರವಾಡ ಜಿಲ್ಲೆಯ 'ಯಾವಗಲ್' ಕಿರೆಸೂರ ಮೊದಲಾದ ೩೦ ಸ್ಥಳಗಳಲ್ಲಿ ಉಪ್ಪು ತಯಾರಿಸಲಾಗುತ್ತಿತ್ತು. ಈ ಚಳುವಳಿ ವಿರಾಟ್-ರೂಪ ತಾಳಿತು. ಈ ಚಳುವಳಿಕಾರರ ಮುಖಂಡತ್ವವನ್ನು ಗಂಗಾಧರರಾವ ದೇಶಪಾಂಡೆ, ಕಡಪಾ ರಾಘವೇಂದ್ರ, ಶ್ರೀನಿವಾಸ ಕೌಜಲಗಿ, ಆರ್.ಆರ್. ದಿವಾಕರ ಮತ್ತು ಮೈಲಾರ ಮಹಾದೇವಪ್ಪ, ಇಂಚಗೇರಿ ಸಂಪ್ರದಾಯದ ಮುರಗೋಡ ಮಹಾದೇವಪ್ಪನವರು ವಹಿಸಿದ್ದರು.

೧೩-೦೪-೧೯೩೦ ರಂದು ದಂಡಿಯಲ್ಲಿ ಉಪ್ಪು ತಯಾರಿಸುವುದೆ ತಡ ದೇಶದಾದ್ಯಂತ ಲಕ್ಷಾವಧಿ ಜನ ಕಾಯ್ದೆ ಭಂಗ ಮಾಡಿ ಉಪ್ಪು ತಯಾರಿಸಿ ಮಾರತೊಡಗಿದರು. ಸಮುದ್ರದ ಬಳಿ ಇದ್ದವರಷ್ಟೆ ಅಲ್ಲಿ ಸಮುದ್ರದ ಬಳಿ ಇಲ್ಲದವರು ಉಪ್ಪು ತಯಾರಿಸಿ ಸತ್ಯಾಗ್ರಹ ಮಾಡಿದರು. ಯಾದವಾಡ, ಮುರಗೋಡ ಹಳ್ಳದ ಕುಲದರವಾಡದಲ್ಲಿಯ ಒಂದೆರಡು ಭಾವಿಗಳು, ನೇಗಿನಾಳದ ಒಂದು ಭಾವಿ ನೀರಿನಿಂದ ಉಪ್ಪು ತಯಾರಿಸಿ ಮಾರಲಾಯಿತು. ಕರ್ನಾಟಕದಲ್ಲಿ ಅಂಕೊಲೆಯನ್ನು ಉಪ್ಪಿನ ಸತ್ಯಾಗ್ರಹದ ಕೇಂದ್ರವನ್ನಾಗಿ ಮಾಡಲಾಗಿತ್ತು.[೧] ಕರ್ನಾಟಕದ ವಿವಿಧ ಭಾಗಗಳಿಂದ ಸತ್ಯಾಗ್ರಹಗಳ ಗುಂಪು ಬರತೊಡಗಿದವು. ಆದರೆ ಹುಬ್ಬಳ್ಳಿಯಿಂದ ಅಂಕೊಲೆಗೆ ಹೊರಟ ಉಪ್ಪಿನ ಸತ್ಯಾಗ್ರಹದ ಪಥಕಕ್ಕೆ ಮುರಗೋಡ ಮಹಾದೇವಪ್ಪನವರ ಮುಖಂಡತ್ವ ವಹಿಸಿದ್ದರು. ಇವರ ಗುಂಪಿನಲ್ಲಿ ಬನಹಟ್ಟಿಯ 'ಕಲಕಂಬ ಮಾಸ್ತರು' ನೀಲಕಂಠ ಗಣಾಚಾರಿ ಕೂಡಾ ಇದ್ದರು. ಮರಳಿಬಂದ ಮೇಲೆ ಮಹಾದೇವಪ್ಪನವರು ಸುಮ್ಮನೆ ಕೂಡದೆ ಧಾರವಾಡ, ಬೆಳಗಾವಿ, ಬಾಗಲಕೋಟ, ಜಿಲ್ಲೆಯ ಇತ್ಯಾಧಿ ಕಡೆಗಳಲ್ಲಿ ಪ್ರಚಾರ ಮಾಡತೊಡಗಿದರು. ರಾಯಬಾಗ, ಚಿಕ್ಕೋಡಿ, ಅಥಣಿ, ವಿಜಾಪುರ ಜಿಲ್ಲೆಯ ಜಮಖಂಡಿ, ಇಂಡಿ, ಸಾವಳಗಿ, ಬೀಳಗಿ, ಬಾಗಲಕೋಟ ಇದನ್ನರಿತ ಬ್ರಿಟಿಷ ಸರಕಾರ ೧೪೪ ಕಲಂ ನೀಡಿ ಕಾಯ್ದೆ ಬಂಗ ಚಳುವಳಿಯಲ್ಲಿ ಭಾಗವಹಿಸಿದ ಚಳುವಳಿಕಾರರನನ್ನು ಬಂಧಿಸಿದರು.

೧. ಮಾ. ಜಿ. ದ-ಭಾಗ ೨. ಪುಟಸಂಖ್ಯೆ - ೧೩೬. ಸಂ. ಮಹಲಿಂಗ ಮಲಗಿ ಪ್ರಕಾಶಕರು : ಶ್ರೀಕ್ಷೇತ್ರ ಇಂಚಗೇರಿ ಮಠ.

ಅರಣ್ಯ ಸತ್ಯಾಗ್ರಹದಲ್ಲಿ – ಮುರಗೋಡ ಮಹಾದೇವಪ್ಪನವರು :

ಮಳೆಗಾಲ ಪ್ರಾರಂಭವಾಗಿ ಉಪ್ಪಿನ ಸತ್ಯಾಗ್ರಹಕ್ಕೆ ನಾಂದಿಯಾಯಿತು. ಮಣ್ಣಿನ ಮಕ್ಕಳಾದ ರೈತರು ದೇಶದಾದ್ಯಂತ ಜಂಗಲ್ ಸತ್ಯಾಗ್ರಹ ಪ್ರಾರಂಭಿಸಿದರು. ಸರಕಾರಕ್ಕೆ ಕೊಡಬೇಕಾದ ಹುಲಬನ್ನಿ ಕರವನ್ನು ನಿರಾಕರಿಸಿ ಅರಣ್ಯಗಳಲ್ಲಿ ದನ–ಕರ ಮೆಯಿಸತೊಡಗಿದರು. ಚಳುವಳಿಕಾರರು ಸುಮ್ಮನೆ ಕೈಕಟ್ಟಿ ಕೂಡುವಂತಿಲ್ಲ. ಸರಕಾರಕ್ಕೆ ಹೆಚ್ಚು ಆದಾಯ ಅರಣ್ಯದಿಂದ ಬರುತ್ತಿತ್ತು. ಇದನ್ನರಿತ ಗಾಂಧೀಜಿಯವರು ಅರಣ್ಯದಲ್ಲಿಯ, ಅರಣ್ಯ ಇಲ್ಲದ ಕಡೆ ಸಿಂಧಿ, ತೇಗು, ಚಂದನ ಗೀಡ ಕಡಿಯುವ ನಿರ್ಧಾರ ಕೈಕೊಂಡು ಕರೆ ನೀಡಿದರು. ಇದರಿಂದ ಕಾಂಟ್ರ್ಯಾಕ್ಟರ ಇಲ್ಲದಂತಾದರು. ಸರಕಾರಕ್ಕೆ ಬರುವ ಆದಾಯ ಕಡಿಮೆಯಾಯಿತು. ೧೯೩೧ರಲ್ಲಿ ದುಂಡುಮೇಜಿನ ಪರಿಷತ್ತಿನಲ್ಲಿ 'ಇರ್ವಿನ್' ಒಪ್ಪಂದವಾಗಿ ಸ್ವತಂತ್ರ್ಯ ಕೊಡುವುದಾಗಿ ಒಪ್ಪಿದ ಸರಕಾರ ಒಪ್ಪಂದದ ಪ್ರಕಾರ ನಡೆಯಲಿಲ್ಲ. ೨ನೇ ದುಂಡುಮೇಜಿನ ಪರಿಷತ್ತಿನಲ್ಲಿ ಸರಕಾರ ಒಪ್ಪದಿದ್ದಾಗ ಗಾಂಧೀಜಿ 'ಅಸಹಕಾರ ಚಳುವಳಿ'ಗೆ ಕರೆ ನೀಡಿದರು. ಇದರಲ್ಲಿ ಪಾಲ್ಗೊಂಡ ಚಳುವಳಿಕಾರರನ್ನು ಬಂದಿಸಿ ಜೈಲಿಗೆ ಹಾಕಲಾಯಿತು. ಪದ್ಧತಿಯಂತೆ ಚಳುವಳಿಕಾರರಿಗೆ ಆರತಿ ಮಾಡಿ ಕಳಿಸುತ್ತಿದ್ದರು. ಹುರುಪಿನಿಂದ ರಣಹಲಗೆ ಬಾರಿಸುತ್ತಾ, ಕಹಳೆ ಊದುತ್ತಾ ಮೆರವಣಿಗೆಯಿಂದ ಹೋಗಿ ಶಿಂಧಿ ಗಿಡ ನೆಲಸಮ ಮಾಡುತ್ತಿದ್ದರು.

ಈ ಚಳುವಳಿಯ ಕಾವು ದೇಶದಾದ್ಯಂತ ಹಬ್ಬಿತು. ಇದರ ಪ್ರಭಾವ ಇಂಚಗೇರಿ ಸಂಪ್ರದಾಯದ ಮಹಾದೇವಪ್ಪ ಮುರಗೋಡರ ಮೇಲೆಯಾಗದೆ ಇರಲಿಲ್ಲ. ಹುಟ್ಟಾ ಹೋರಾಟಗಾರರಾದ ಮಹಾದೇವಪ್ಪನವರು ಹಿಂದೆ ಬೀಳಲಿಲ್ಲ. ತಮ್ಮ ವಿದ್ಯಾಗುರುಗಳಾದ "ಶಿರಹಟ್ಟಿ ಮಠರ" ಪ್ರೋತ್ಸಾಹ ಮತ್ತು ಆಶೀರ್ವಾದದಿಂದ ಮುನ್ನುಗ್ಗಿದರು. ತಮ್ಮೆಲ್ಲ ಚಳುವಳಿಕಾರರನ್ನು ಕರೆದುಕೊಂಡು ಬಂದು ಹೊಂಬಳದಲ್ಲಿ ಗುಪ್ತವಾಗಿ ಬಿಡುಬಿಟ್ಟರು. ಹೊಂಬಳದಲ್ಲಿ ಸಭೆ ಮಾಡಿ ಜನರನ್ನು ಜಾಗ್ರತಿಗೊಳಿಸಿದರು. ದೇಶದ ಎಲ್ಲಾ ಊರುಗಳಲ್ಲಿ ಚಳುವಳಿ ನಡೆದಾವ, ಪ್ರಭಾತ ಪೇರಿ ನಡೆದಾವ, ನಾವು ಸುಮ್ಮನೆ ಕೂಡುವುದು ಸರಿಯಲ್ಲ ಎಂದು ತಮ್ಮ ಭಾಷಣದ ಮೂಲಕ ಎಲ್ಲರಲ್ಲಿ ದೇಶ ಪ್ರೇಮ ಮೂಡಿಸಿದರು. ನಾವು ಆ ಕಾರ್ಯದಲ್ಲಿ ತೊಡಗೋನ ಪ್ರಭಾತ್ಪೇರಿ ಮಾಡೋನ ಎಂದು ತಮ್ಮೆಲ್ಲ ಅನುಯಾಯಿಗಳ ನರನಾಡಿಗಳಲ್ಲಿ ದೇಶಭಕ್ತಿಯ ರಕ್ತ ಸಂಚಾರಕ್ಕೆ ಚಾಲನೆ ನೀಡಿದರು. ಇವರ ಮುಖಂಡತ್ವ ವಹಿಸಿದ ಮಹಾದೇವಪ್ಪನವರ ಗುಂಪಿನಲ್ಲಿ ಶಿವಪ್ಪ ಕೊರನ್ನವರ, ಶಿವಬಸಪ್ಪ, ಪಕೀರಪ್ಪ, ನಾಗಯ್ಯ, ಸಂಗಯ್ಯ ೭ ಜನ ಗಂಡಸರು ೮ ಜನ ಹೆಂಗಸರು ಇವರ ಭಾಷಣದಿಂದ ಪ್ರಚೋದನೆಗೊಂಡು ಹೆಗಲ ಮೇಲೆ ಕೊಡ್ಲಿ ಕಿತ್ತುಕೊಂಡು ಅದರ ತುದಿಗೆ ಬುತ್ತಿ ಕಟ್ಟಿಕೊಂಡು, ಬಗಲಿಗೆ ತತ್ರಾಣಿ ಹಾಕಿಕೊಂಡು ಬಡಗಿ, ಕುಡಗೋಲ ಕೈಯಲ್ಲಿ ಹಿಡಿದುಕೊಂಡು 'ವಂದೆಮಾತರಂ' ಜಯಘೋಷ ಹಾಕುತ್ತಾ ಹಳ್ಳದ ದಂಡಿಯ ಈಚಲಗಿಡಕ್ಕೊಬ್ಬರಂತೆ ನಿಂತು ಕೊಡಲಿ ಏಟು ಹಾಕುತ್ತಾ "ಜೈ ಭಾರತ ಮಾತಾಕಿ" 'ಸುಭಾಶಚಂದ್ರ ಭೋಸ್ ಕಿ ಜೈ', 'ಗಾಂದಿಜೀಕಿ ಜೈ', 'ಸದ್ಗುರು ಸಮರ್ಥ ಗುರುಲಿಂಗ ಜಂಗಮ ಮಹಾರಾಜಕಿ ಜೈ' ಸದ್ಗುರು ಸಮರ್ಥ ಮಧವಾನಂದ ಮಹಾರಾಜಕಿ ಜೈ ಎಂದು ಜೈಕಾರ ಹಾಕುತ್ತಾ ಗಿಡಗಳನ್ನು ನೆಲಸಮ ಮಾಡಿದರು. ಮಹಾದೇವಪ್ಪನವರು ಕರಮಡಿ ಹಳ್ಳ (ಸವುಳಹಳ್ಳ)ದಿಂದ ವೆಂಕಟಾಪುರದವರೆಗೆ[1] ಸಿಂಧಿ ಗಿಡಗಳನ್ನು ನೆಲಸಮ ಮಾಡಿದರು. ಮತ್ತು ಚಳುವಳಿಕಾರರು ತಮ್ಮ ಖರ್ಚನ್ನು ತಾವೇ ನಿಭಾಯಿಸಿಕೊಳ್ಳುತ್ತಿದ್ದರು.

---

೧. ದೇವ ಮಾನವ ಹಸ್ತಪ್ರತಿ : ಪುಟಸಂಖ್ಯೆ – ೧೮. ಡಾ. ಎಸ್. ಪಿ. ಚವಲಾರ.

ಈ ಚಳುವಳಿಯ ಪ್ರಭಾವವು ಹೆಣ್ಣುಮಕ್ಕಳ ಮೇಲಾಯಿತು. ನಮ್ಮ ವೀರ ವನಿತೆಯರು ಸೈನಿಕರಿಗೆ ಊಟ ಮಾಡಿ ಹಾಕಿ ಅವರ ಯೋಗಕ್ಷೇಮ ನೋಡಿಕೊಳ್ಳುತ್ತಿದ್ದರು ತಾವು ಅದರಲ್ಲಿ ಕಾರ್ಯೋನ್ಮುಕರಾದರು. ಇದೇ ಸಮಯದಲ್ಲಿ ಬೈಲಹೊಂಗಲದ ನಾಗನೂರ ಗ್ರಾಮದ ವೀರ ಮಹಿಳೆ 'ನಾಗಮ್ಮ' ಬೆಳಗಾವಿಯ ಪ್ರಾಂತ ಸಾಹೇಬ (ವೆಲ್ಸ)ರಿಗೆ ಚಪ್ಪಲಿ ರುಚಿ ತೋರಿಸಿದಳು. ರೊಚ್ಚಿಗೆದ್ದ ಸರಕಾರ ಗಿಡಗಂಟಿ ಲೂಟಿ ಮಾಡುವವರಿಗೆ ಅರಣ್ಯದಲ್ಲಿ ಪ್ರವೇಶ ಮಾಡಿದ ದನಗಳ ಮಾಲಿಕರಿಗೆ 'ಮಂಡಗಾದಾಯ' ಕರೆ ವಸೂಲಿ ಮಾಡಿತು. ಇಂಚಗೇರಿ ಸಂಪ್ರದಾಯದ ವೀರವನಿತೆಯರು, ಮಹಾದೇವಪ್ಪನವರ ಪ್ರಭಾವಕ್ಕೊಳಗಾಗಿ ಅವರ ಮಾರ್ಗದರ್ಶನದಲ್ಲಿ ನಡೆದು ಚಳುವಳಿಯಲ್ಲಿ ಭಾಗವಹಿಸಿದ್ದರು. ಅಂತವರಲ್ಲಿ ಮಹಾದೇವಿ ಮಸಳಿ, ಸೋನಿಹಾಳ, ಪದ್ಮಾವತಿ ಜೈನ, ಸಣ್ಣಬಾಗವ್ವ ತೇರದಾಳ[೨]. ಚಳುವಳಿಕಾರರ ಊಟದ ವೆಚ್ಚವನ್ನು ಮಹಾದೇವಪ್ಪನವರ ನೋಡಿಕೊಳ್ಳುತ್ತಿದ್ದರು. ಅದಕ್ಕಾಗಿ ಶ್ರೀಮಂತ ಭಕ್ತರ ಮನವೊಲಿಸಿ 'ಧನ' ಸಂಗ್ರಹ ಮಾಡಿ ತಮ್ಮ ಸಂಗಡಿಗರೆಲ್ಲರನ್ನು ಸಾಕಿದರು. ಕೆಲಸಲ ಶ್ರೀಮಂತರನ್ನು 'ಧನ' ಸಹಾಯ ಕೇಳಿದ್ದುಂಟು ಅವರು ಕೊಡಲು ಮುಂದೆ ಬರದೆಯಿದ್ದಾಗ ದಂಡೋಪಾಯ ಮಾರ್ಗ ಅನುಸರಿಸಿದ್ದುಂಟು. ಇನ್ನು ಎಷ್ಟೋ ಜನ ಅನುಯಾಯಿಗಳು ತಮ್ಮ ಸಿರಿ, ಸಂಪತ್ತನ್ನು ಮಹಾದೇವಪ್ಪನವರ ಮೇಲಿನ ನಂಬಿಕೆಯಿಂದ ಒಪ್ಪಿಸಿ ಇಂದಿಗೂ ಅವರು ಮಠದ ಅನುಯಾಯಿಗಳಾಗಿಯೇ ಉಳಿದಿದ್ದಾರೆ. ಆ ಸಂಪತ್ತಿನಿಂದ ಮಹಾದೇವಪ್ಪನವರು ತಮ್ಮ ಸುಃಖದ ಜೀವನ ನಡೆಸಲಿಲ್ಲ. ಇನ್ನೊಬ್ಬರನ್ನು ಕಲ್ಲು ಮುಳ್ಳಲ್ಲಿ ತಳ್ಳಿ ಸುಃಖದ ಸುಪ್ಪತ್ತಿಗೆಯಲ್ಲಿ ಲೋಲಾಡಲಿಲ್ಲ. ಅನುಯಾಯಿಗಳನ್ನು ಚಳುವಳಿಯಲ್ಲಿ ತೊಡಗಿಸಿ ತಾವು ಅದರಲ್ಲಿ ಪಾಲ್ಗೊಂಡು ಎಲ್ಲರ ಸುಃಖದಲ್ಲಿ ತಮ್ಮ ಸುಖವಿದೆಯೆಂದು ಸತ್ಯಾಗ್ರಹದ ಪಥಕರೊಡನೆ ದೇಶ ಬಿಡುಗಡೆಯ ಚಳುವಳಿಗೆ ಹೋದರು.

ವಿದೇಶಿ ಬಟ್ಟೆಯ ಪಿಕೆಟಿಂಗ ಆಂದೋಲನದಲ್ಲಿ – ಮಹಾದೇವಪ್ಪನವರು :

'ಖಾದಿಯಿಂದಲೇ ದೇಶಕ್ಕೆ ಹಾದಿ, ಖಾದಿ ಸ್ವರ್ಗಕ್ಕೆ ಹಾದಿ' ಎಂದರಿತ ಚಳುವಳಿಕಾರರು ಸ್ವಾವಲಂಬಿಗಳಾಗಿ ಬದುಕಬೇಕಾದರೆ ಖಾದಿಯೇ ನಮಗೆ ಹಾದಿ ಎಂದು ಎಲ್ಲೆಡೆ ಘೋಷಣೆ ಮೊಳಗಿತು. ಇದರಿಂದ ಎಚ್ಚೆತ್ತ ಜನ ಸ್ವದೇಶಿ ವಸ್ತುವಿನ ಬಳಕೆಗೆ ಮನಸೋತು ವಿದೇಶಿ ಬಟ್ಟೆಗಳನ್ನು ಮತ್ತು ವಿದೇಶಿ ಬಟ್ಟೆಗಳನ್ನು ತೊಡುವವರನ್ನು ಬಹಿಷ್ಕರಿಸ ತೊಡಗಿದರು. ಕಾಂಗ್ರೆಸ್ ಮುದ್ರೆಯಿರುವ ಖಾದಿ ಬಟ್ಟೆಗೆ ಬೇಡಿಕೆಯುಂಟಾಯಿತು. ಇದರಿಂದ ವಿದೇಶಿ ಬಟ್ಟೆ ತಯಾರಿಸುವ ೨೧ ಗಿರಣಿಗಳು ಬಂದಾದವು.

ಖಾದಿಯ ಪ್ರಚಾರ ದೇಶದಾದ್ಯಂತ ಹಬ್ಬಿತು. ಇದರ ಮುಖಂಡತ್ವವನ್ನು ಮಹಾತ್ಮಾ ಗಾಂಧಿಜೀಯವರು ವಹಿಸಿದ್ದರು. ಪ್ರತಿ ಹಳ್ಳಿಗಳಿಗೆ ಇದರ ಗಾಳಿಬೀಸಿತು. ಜನರು ಪ್ರಭಾತಪೇರಿ ಹೊರಟು ಬಟ್ಟೆಯ ಅಂಗಡಿಯೊಂದನ್ನು 'ಪಿಕೆಟಿಂಗ್' ಮಾಡಿ, ಪರದೇಶದ ಬಟ್ಟೆಗಳನ್ನು ಹೊರತಂದು ಸುಟ್ಟು ಹಾಕತೊಡಗಿದರು. ವಿದೇಶಿ ಬಟ್ಟೆ ತೊಟ್ಟಿದ್ದವರನ್ನು ಅಲ್ಲಿಯೇ ಕಳಸತೊಡಗಿದರು. ಕೆಲವರು ತಪ್ಪಿಸಿಕೊಂಡು ಓಡಿ ಹೋದದ್ದುಂಟು.

---

೨. ಮಾಧವಾನಂದ ಪ್ರಭುಜಿನುವರ ಜೀವನ ಚರಿತ್ರೆ : ಪುಟಸಂಖ್ಯೆ – ೩೦. ಮುತ್ತಪ್ಪ ಮಹಾರಾಜ ಚೊಜ್ಜಾನಟ್ಟಿ.

ಇದೇ ವೇಳೆಗೆ ಇಂಚಗೇರಿಯ ಮಠಾಧಿಪತಿ "ಮಹಾದೇವಪ್ಪ ಮುರಗೋಡ" ಖಾದಿಧಾರಿಗಳಾಗಿದ್ದರು. ಸೀದಾ-ಸಾದಾ ವೇಷ ಧರಿಸುತ್ತಿದ್ದರು. ಖಾದಿ ಅಂಗಿ, ಧೋತರ, ಕರಿ 'ಖಾದಿ' ಟೊಪ್ಪಿಗೆ (ಸ್ವತಂತ್ರ ಸಿಕ್ಕ ಮೇಲೆ ಬಿಳಿಟೊಪ್ಪಿಗೆ) ಹಾಕುತ್ತಿದ್ದರು[೧]. ಇವರ ಪ್ರಭಾವ ರಾಯಪ್ಪ ಬೆಳಗಲಿ, ಬಾಸ್ಕರಪ್ಪ ಕೊಪರ್ಡೆ ಮೇಲಾಯಿತು. ಇವರು ತಮ್ಮೆಲ್ಲ ತಂಡದವರೊಂದಿಗೆ ಖಾದಿ ಪ್ರಚಾರ ಕಾರ್ಯದಲ್ಲಿ ತೊಡಗಿದರು. ವಿದೇಶಿ ಬಟ್ಟೆಗಳ 'ಪಿಕೆಟಿಂಗ್' ಮಾಡತೊಡದರು. ಈ ಚಳುವಳಿಕಾರರ ಮುಂದಾಳತ್ವವನ್ನು 'ಮಹಾದೇವಪ್ಪ ಮುರಗೋಡರು' ವಹಿಸಿದ್ದರು. ಧಾರವಾಡ, ಹುಬ್ಬಳ್ಳಿ, ಗದಗ, ಬೆಳಗಾವಿ, ರಾಯಭಾಗ, ಅಥಣಿ, ಚಿಕ್ಕೋಡಿ, ವಿಜಾಪುರ, ಜಮಖಂಡಿ, ಬನಹಟ್ಟಿ, ಬೀಳಗಿ, ಮುಧೋಳ, ಜತ್ತ, ಬದಾಮಿಗಳಲ್ಲಿ ಖಾದಿ ಪ್ರಚಾರ ಮಾಡಿ ಜನರನ್ನು ಜಾಗೃತಗೊಳಿಸಿದರು. ಸ್ವಾವಲಂಬಿ ಬದುಕು ಬದುಕಲು ತಿಳಿಹೇಳಿ ಅವರನ್ನು ಚಳುವಳಿಯಲ್ಲಿ ಪಾಲ್ಗೊಳ್ಳುವಂತೆ ಪ್ರಚೋದಿಸಿದರು.

ಪ್ರಚಾರ ಕಾರ್ಯವು ಭರದಿಂದ ಮುಂದೆ ಸಾಗಿತು. ಇದನ್ನು ಕುರಿತು ಯಾರು ಪತ್ರಿಕೆಯಲ್ಲಿ ಸಮಾಚಾರ ಕೊಡಬಾರದೆಂದು, ಕೊಡುವ ಲೇಖನವನ್ನು ಪ್ರಕಟಿಸಬಾರದೆಂದು ಹೆದರಿಕೆ ಹಾಕಿತು. ಇದಕ್ಕೆ ಯಾರಾದರೂ ಬೆಂಬಲ ಕೊಟ್ಟವರನ್ನು 'ಹಿಂಡಲಗಿ ಜೈಲಿಗೆ' ಹಾಕುತ್ತಿದ್ದರು.

೧೩-೦೮-೧೯೩೨ ರಂದು ಬ್ರಿಟಿಷ ಸರಕಾರ ಹರಿಜನರಿಗೆ ಪ್ರತ್ಯಕ ಸ್ವತಂತ್ರ್ಯ ಸಂಘ ಮತ್ತು ಚುನಾವಣೆಗೆ ಸ್ಪರ್ಧಿಸುವ ಹಕ್ಕು ಕೊಟ್ಟಿತು. ಅಸ್ಪ್ರಶ್ಯರ ಈ ನೀತಿಗೆ ಗಾಂಧಿಜೀ ಉಪವಾಸ ಸತ್ಯಾಗ್ರಹ ಕೈಕೊಂಡರು. ಮತ್ತು ಅಸ್ಪ್ರಶ್ಯ ನಿವಾರಣೆಗಾಗಿ ಜಯದೇವ ಕುಲಕರ್ಣಿ, ಗುದ್ಲೆಪ್ಪ ಹಳ್ಳಿಕೇರಿ, ಮಹಾದೇವಪ್ಪ ಮುರಗೋಡ, ವೀರನಗೌಡ ಪಾಟೀಲ, ಬಾಸ್ಕರಪ್ಪ ಕೂಪರ್ಡೆ, ಮಹಾದೇವಪ್ಪನವರ ಪ್ರಭಾವದಿಂದ ಪಾಲ್ಗೊಂಡು ಪ್ರಚಾರ ಕಾರ್ಯ ನಡೆಸಿದರು.

ವ್ಯಾಪಾರದ ನೆವದಿಂದ ಬಂದ ಬ್ರಿಟಿಷರು, ನಮ್ಮ ಅಜ್ಞಾನ, ಮೌಢ್ಯತನ, ಮುಗ್ಧತನ ನಮ್ಮಲ್ಲಿದ್ದ ಬಿರುಕು, ತಿಳಿದು ಒಡೆದು ಆಳ ತೊಡಗಿದರು. ನಾವು ಕಟುಕನ ಮನೆಗೆ ಹೋಗುವ ಕುರಿಗಳಂತಾಗಿದ್ದೇವು. ಇದನ್ನರಿತ ಮುರಗೋಡ ಮಹಾದೇವಪ್ಪನವರು ನಾವು ಮೂಲೆಯಲ್ಲಿ ಸುಮ್ಮನೆ ಕೂಡುವ ಕಾಲ ಇದಲ್ಲ. ರಾಜಕೀಯ ಸ್ವಾತಂತ್ರ್ಯ ಸಿಗದೆ ಧಾರ್ಮಿಕ ಸ್ವಾತಂತ್ರ್ಯ ಸಿಗದು. ಎಲ್ಲಿಯವರೆಗೆ ನಾವು ಗುಲಾಮರಾಗಿರುತ್ತೇವೆಯೋ ಅಲ್ಲಿಯವರೆಗೆ ನಮ್ಮ ದೇಶ ಉದ್ದಾರವಾಗಲಾರದು. 'ತರುಣರೇ ಎದ್ದೇಳಿರಿ ಇಂಗ್ಲೀಷರನ್ನು ಹೊಡೆದೊಡಿಸುವ ದೃಢ ಸಂಕಲ್ಪ ಮಾಡಿರಿ', ಅವರು ಕೊಡುವ ಶಿಕ್ಷಣ ಹೇಡಿಗಳನ್ನಾಗಿ ಮಾಡುವುದು, ಅದು ಕಾರಕೂಣಕಿ ಕೆಲಸ, ಅಸ್ಪ್ರಶ್ಯತೆಯನ್ನು ಮರೆಮಾಚಿರಿ ಎಂದು ಮುರಗೋಡ ಮಹಾದೇವಪ್ಪನವರು ಭಾಷಣ ಮಾಡಿದರು. ಮತ್ತು ಎಡಪಂತಿಯ ಮುರೋಗಾಮಿ ಪ್ರಭಾವಿತ ವ್ಯಕ್ತಿ "ಭೋಸರ್' ಸಂದೇಶ ಬಿಕ್ಷೆ ಬೇಡಿದರೆ ಸ್ವಾತಂತ್ರ್ಯ ಕೊಡಲಾರರು ಅದನ್ನು ಪಡೆಯುವದು ನಮ್ಮ ಜನ್ಮ ಸಿದ್ಧ ಹಕ್ಕು ಎಂಬ ನೇತಾಜಿಯವರ ಮಾತನ್ನು ಹೇಳಿ ಜನತೆ ಕಣ್ಣು ತೆರೆಯುವಂತೆ ಮಾಡಿದರು.

---

೧. ದೇವಮಾನವ ಹಸ್ತಪ್ರತಿ : ಪುಟಸಂಖ್ಯೆ – ೧೯, ಡಾ. ಎಸ್. ಪಿ. ಚವಲಾರ

ವೈಯಕ್ತಿಕ ಸತ್ಯಾಗ್ರಹದಲ್ಲಿ ಮಹಾದೇವಪ್ಪನವರು :

ಬ್ರಿಟಿಷರ ಕಪಿಮುಷ್ಟಿಯಲ್ಲಿದ್ದ ಭಾರತೀಯರಿಗೆ ವೈಯಕ್ತಿಕ ನಿಲವು ಇರಲಿಲ್ಲ. ಅವರ ನೀತಿಯನ್ನು ವಿರೋಧಿಸತೊಡಗಿದರು. ಕಾಂಗ್ರೆಸ್ ಮಂತ್ರಿಮಂಡಳ ರಾಜಿನಾಮೆ ನೀಡಿತು. ಬ್ರಿಟಿಷ ಸಾಮ್ರಾಜ್ಯ ಶಾಹಿಯ ರಕ್ಷಣೆಗಾಗಿ ಯುದ್ಧದಲ್ಲಿ ಸಹಾಯ ಮಾಡುವುದು ಪಾಪವೆಂದು, ಯುದ್ಧ ವಿರೋಧಿ ಘೋಷಣೆಯೇ ವೈಯಕ್ತಿಕ ಚಳುವಳಿ. ಈ ಚಳುವಳಿ ಸಾಮೂಹಿಕ ಸಾರ್ವತ್ರಿಕವಾದದ್ದಲ್ಲ. ಒಬ್ಬೊಬ್ಬರೇ ಚಳುವಳಿ ಮಾಡಿ ಬಂಧನಕ್ಕೊಳಗಾಗುವುದೇ ಇದರ ಉದ್ದೇಶ. ದೇಶದಲ್ಲಿ ಮೊದಲನೇಯ ವೈಯಕ್ತಿಕ ಸತ್ಯಾಗ್ರಹ ವಿನೋಬಾ ಭಾವೆಯವರು ಎರಡನೇಯ ಸತ್ಯಾಗ್ರಹ ಜವಾಹರಲಾಲ ನೇಹರುವರು ಮಾಡಿದರು. ಗಾಂಧಿಜೀಯವರು ಈ ಚಳುವಳಿಗೆ ಚಾಲನೆ ನೀಡಿದರು. ವೈಯಕ್ತಿಕ ಸತ್ಯಾಗ್ರಹ ಮಾಡುವ ಚಳುವಳಿಕಾರರು ಗಾಂಧಿಜೀಯವರಿಂದ ಒಪ್ಪಿಗೆ ಪಡೆದು ಮುದ್ರಿತ ಪಾರ್ಮ ತುಂಬಿ ಕಳುಹಿಸಬೇಕಾಗುತ್ತಿತ್ತು. ಮತ್ತು ಚಳುವಳಿ ಮಾಡುವಂತವರು ಮೊದಲೇ ಪೋಲಿಸ್ ಸ್ಟೇಶನ್ನಿಗೆ ತಿಳಿಸಬೇಕು ಎಂಬ ನಿಯಮವು ಕೂಡಾ ಇತ್ತು.

ಈ ಸುದ್ಧಿ ಮಹಾದೇವಪ್ಪ ಮುರಗೋಡರಿಗೆ ಮುಟ್ಟದೆ ಇರಲಿಲ್ಲ. ಸುಭಾಶಚಂದ್ರ ಭೋಸ್‌ರಿಂದ ಪ್ರಭಾವಿತರಾದ ಮಹಾದೇವಪ್ಪನವರು ಗಾಂಧಿಜೀಯವರಿಂದ ಅನುಮತಿಯನ್ನು ಪಡೆದರು. ೦೧–೦೧–೧೯೪೧ ರಂದು ಇಂಚಗೇರಿಯ ಗೀರಮಲ್ಲೇಶ್ವರ ಗುಡಿಯ ಮುಂದೆ ಸತ್ಯಾಗ್ರಹ ಪ್ರಾರಂಭಿಸಿದರು. ಬ್ರಿಟಿಷರಿಗೆ ತನು, ಮನ, ಧನದಿಂದ ಸಹಾಯ ಮಾಡುವದು ಘೋರ ಪಾಪವೆಂದು ಘೋಷಣೆ ಮಾಡಿದರು. ಇವರ ಜೊತೆ ಸಂಗಡಿಗರಾದ ಕಂಬಾಳಿಮಠ, ಪಕೀರಯ್ಯ ಶಿರಹಟ್ಟಿಮಠ, ಶಿರಹಟ್ಟಿಮಠ ಮಾಸ್ತರರು, ಚನ್ನಪ್ಪ ಹಳಕಟ್ಟಿ, ಈರಪ್ಪ ಹಳ್ಳಿಕೇರಿ, ಬಾಸ್ಕರಪ್ಪ ಕೂಪರ್ಡೆ ಆ ಚಳುವಳಿಯಲ್ಲಿ ಭಾಗವಹಿಸಿದ್ದರು. ಇವರ ಮುಂದಾಳತ್ವವನ್ನು ಮಹಾದೇವಪ್ಪ ಮುರಗೋಡ ವಹಿಸಿದ್ದರು. 'ಕುರಿ ಕೇಳಿ ಮಸಾಲೆ ಅರಿಯುವ ಸ್ವಭಾವದವರಾಗಿರಲಿಲ್ಲ. ಪೋಲಿಸ್ ಸ್ಟೇಶನಕ್ಕೆ ತಿಳಿಸದೆ ಕಾಯ್ದೆ ಭಂಗಮಾಡಿ ವೈಯಕ್ತಿಕ ಚಳುವಳಿಮಾಡಿದರು. ಇದನ್ನು ತಿಳಿದ ಬ್ರಿಟಿಷ ಸರಕಾರ ಮಹಾದೇವಪ್ಪನವರನ್ನು ಬಂಧಿಸಿ ವಿಜಾಪುರ ಜೈಲಿಗೆ ಹಾಕಿತು.[೧] ವಿಜಾಪುರದಲ್ಲಿ ಗುಜರಾತದ ಕೈದಿಗಳಿದ್ದರು. ಅವರ ಜೊತೆ ರಾಜಕೀಯ ಚರ್ಚೆಮಾಡಲು ಅವಕಾಶ ದೊರೆಯಿತು. ರಾಜಕಾರಣದ ಅನುಭವ ಪಡೆದರು.

ಎರಡನೆ ಸಲ ವೈಯಕ್ತಿಕ ಸತ್ಯಾಗ್ರಹ ಕರೆ ನೀಡಲಾಯಿತು. ಮಹಾದೇವಪ್ಪನವರಿಗೆ ಅದು ಹೊರತಾಗಿರಲಿಲ್ಲ. ೧೯೪೧ ನವ್ಹೆಂಬರ್‌ದಲ್ಲಿ 'ಹಿಪ್ಪರಗಿಯ ಸಂಗಮೇಶ್ವರ ಮಠದ ಮುಂದೆ ಸತ್ಯಾಗ್ರಹ ನಡೆಸಿದರು. ಇದರಲ್ಲಿ ೧೫೦೦ ಜನ ಮಹಾದೇವಪ್ಪನವರ ಅನುಯಾಯಿಗಳು ಭಾಗವಹಿಸಿದ್ದರು. ಎಂ. ಪಿ. ಪಾಟೀಲ, ದಂದೂರ ವಕೀಲರು, ದೊಡ್ಡಮೇಟಿ ಅಂದಾನೆಪ್ಪ, ಸರದಾರ ವಿರನಗೌಡರು, ತಲ್ಲೂರ ರಾಯನಗೌಡರು, ಹೂಲಿ ವೆಂಕಟರೆಡ್ಡಿ, ಅಣ್ಣುಗೂರೂಜಿ ಚಳುವಳಿ ಮಾಡಿದ ಅವರನ್ನು ಬಂಧಿಸಿ ಹಿಂಡಲಗಾ ಜೈಲಿಗೆ ಹಾಕಲಾಯಿತು. ಮಹಾದೇವಪ್ಪನವರಿಗೆ ರಾಜಕೀಯ ಚರ್ಚೆಗೆ ಅವಕಾಶ ದೊರಕಿತು. ಮತ್ತು ಜೈಲಿನಲ್ಲಿದ್ದು ಮಹಾದೇವಪ್ಪನವರು ತಮ್ಮ ಅನುಯಾಯಿಗಳಿಗೆ ಪತ್ರ ಬರೆದು

೧. ಮಾಧವ ಜೀವನ ದರ್ಶನ ಭಾಗ–೧. ನಮ್ಮ ಮುಂದೆ ಎಷ್ಟೆಲ್ಲಾ ಮಾಡಿ ಬಿಟ್ಟು ಹೋದ ದೇವರೆಂದು ನಂಬಲಾದೀತು. ಲೇಖನದಿಂದ – ಮಹಾಲಿಂಗಮುಂಗಿ, ಗಿರೀಶ ಪ್ರಕಾಶನ – ಶ್ರೀಕ್ಷೇತ್ರ ಇಂಚಗೇರಿ ಮಠ.

ಮಾರ್ಗದರ್ಶನ ಮಾಡುತ್ತಿದ್ದರು. ಜೈಲಿನಲ್ಲಿದ್ದ ಕೈದಿಗಳಿಗೆ ಆಧ್ಯಾತ್ಮದ ಪ್ರವಚನ ಹೇಳುತ್ತಿದ್ದರು. ಇದರಿಂದ ಜೈಲಿನಲ್ಲಿದ್ದು ಶಿಕ್ಷೆ ಅನುಭವಿಸುವವರಿಗೆ ಜೈಲು "ಸೆರೆಮನೆಯಾಗದೆ ಗುರುಮನೆಯಾಯಿತು".

ಚಳುವಳಿಯಲ್ಲಿ ಭಾಗವಹಿಸಿದವರಿಗೆ ಬ್ರಿಟಿಷ ಸರಕಾರ ಕೆಲ ನಿಯಮ ಸಂಹಿತೆಗಳನ್ನು ಪ್ರಕಟಿಸಿತು. ಚಳುವಳಿಯಲ್ಲಿ ತೊಡಗಲಿಕ್ಕೆ ಪ್ರಚೋದಿಸಿದವರಿಗೆ, ಭಾಷಣ ಮಾಡಿದವರಿಗೆ ೮ ತಿಂಗಳ ಜೈಲು ಶಿಕ್ಷೆಯನ್ನುವುದಾಗಿತ್ತು. ಇದಾವುದಕ್ಕೆ ಕಿವಿಗೊಡದೆ ಮಹಾದೇವಪ್ಪನವರು ಪ್ರಚಾರ ಕಾರ್ಯದಲ್ಲಿ ತೊಡಗಿದರು. ಅದಕ್ಕಾಗಿ ಮಹಾದೇವರನ್ನು 'ಯರವಡಾ' ಜೈಲಿಗೆ ಹಾಕಲಾಗಿತ್ತು. ಸತ್ಯಾಗ್ರಹಿಗಳ ಸಂಖ್ಯೆ ದಿನೇ ದಿನೇ ಬೆಳೆಯುತ್ತಾ ಹೊದದ್ದರಿಂದ ಜೈಲಿನಲ್ಲಿ ಜಾಗ ಸಾಲದಾಯಿತು. ಆವರಣದಲ್ಲಿ ಟೆಂಟುಹೊಡೆದು ತಂತಿ ಬೇಲಿ ಹಾಕಿ ಸತ್ಯಾಗ್ರಹಿಗಳನ್ನು ಸ್ಥಳಾಂತರಿಸಲಾಯಿತು. ಗಾಂಧಿಜೀ ಜನರೆಂದು ಕರೆಯಿಸಿಕೊಂಡ ಸತ್ಯಾಗ್ರಹಿಗಳು ನೂಲುವ, ಕಾರ್ಯದಲ್ಲಿ ತೊಡಗಿದರು. ಹಿಂದಿ ಮತ್ತು ಇಂಗ್ಲೀಷ ಅಧ್ಯಯನ ಕಾರ್ಯಕ್ರಮ ಹಾಕಿಕೊಂಡರು. ಅವರಲ್ಲಿ ಮಹಾದೇವಪ್ಪನವರ ಅನುಯಾಯಿಗಳು ಧ್ಯಾನ, ಜಪ, ಹರಿಭಜನೆ ಪ್ರಾರಂಭಿಸಿದರು. ಕೆಲದಿನಗಳ ನಂತರ ವಾತಾವರಣ ಕಲುಷಿತಗೊಂಡಿತು. ಮಲೇರಿಯಾ ಹಬ್ಬಿ ಬಿಡುಗಡೆ ಮಾಡಲ್ಪಟ್ಟರು. ಈ ಚಳುವಳಿಯ ಕಾವು ದಿನೇ ದಿನೇ ಏರತೊಡಗಿತು. ಸರಕಾರಕ್ಕೆ ದಿಕ್ಕೆ ತೋಚದಂತಾಯಿತು. ಮುಂಬೈಯಲ್ಲಿ ೦೮-೦೮-೧೯೪೨ ಅಖಿಲ ಭಾರತೀಯ ಕಾಂಗ್ರೇಸ್ ಅಧಿವೇಶನ ಸೇರಿತು. 'ಸಭೆಯ ವರ್ಕಿಂಗ್ ಕಮಿಟಿ 'ಚಲೆಜಾವ್' ಆಂದೋಳನದ ರೂಪರೇಷೆ ಗೊತ್ತುವಳಿ ಪಾಸಾಯಿತು. "ಮಾಡು ಇಲ್ಲವೇ ಮಡಿ" ನಿರ್ಧಾರದಿಂದ ಸ್ವಾತಂತ್ರ್ಯದ ದೃಢಸಂಕಲ್ಪ ಕೈಕೊಳ್ಳಲಾಯಿತು.

ವಿಜಾಪುರದ ಪರಪ್ಪ ಗುಂದಗಿ (ಶಿಬಾರಖಾನೆ) ಸಹಾಯಕರಾಗಿ ನಿಂತು ಬ್ರಿಟಿಷ ಆಡಳಿತ ಯಂತ್ರ ಮುರಿಯಲು ಮಹಾದೇವಪ್ಪನವರು ಹಾಕಿಕೊಟ್ಟ ಮಾರ್ಗದಲ್ಲಿ ಹೋಗುತ್ತಿದ್ದರು.[೧]

ಮಹಾದೇವಪ್ಪನವರಿಂದ ಪ್ರಭಾವಿತರಾದ ಚಳುವಳಿಕಾರರು ಮಹಾಪುರ ಬಂದಾಂಗ ಬರತೊಡಗಿತು. ಬಂದವರಿಗೆ ಪ್ರಸಾದ, ಭಜನೆ ಊಟಬಡಿಸುತ್ತಿದ್ದರು. "ಕ್ರಾಂತಿದಳ" ಪಕ್ಷಕಟ್ಟಿದರು ಸ್ವಾತಂತ್ರ್ಯ ಸಿಗಬೇಕಾದರೆ ಕೈಕಟ್ಟಿಕುಳಿತರೆ ಸಿಗಲಾರದು, 'ಬಗತ್‌ಸಿಂಹ'ರಂತೆ ಬಂದೂಕಿನ ಗುಂಡಿನಿಂದ ಮಾತ್ರ ಸಾಧ್ಯವೆಂದು ತಮ್ಮ ಭಾಷಣದ ಮೂಲಕ ಅನುಯಾಯಿಗಳೆಲ್ಲರಿಗೆ ತಿಳಿಹೇಳುತ್ತಿದ್ದರು. ಇವರ ಪ್ರಭಾವಕ್ಕೊಳಗಾಗಿ ಕೆಲವರು ಬಂಧುಬಳಗ ಬಿಟ್ಟರು. ಕೆಲವರು ಹೆಂಡತಿಯ ಕೊರಳ ಮಾಂಗಲ್ಯ ಕಿತ್ತು ಹಾಕಲು ಸಿದ್ಧರಾದರು. ಕೆಲವರು ಆಸ್ತಿ-ಪಾಸ್ತಿ ಕಡೆ ಲಕ್ಷಕೊಡದೆ ತಮ್ಮೆಲ್ಲ ಆಸ್ತಿಯನ್ನು ಚಳುವಳಿಕಾರರ ಯೋಗಕ್ಷೇಮಕ್ಕೆ ಸವಿಸಿದರು. ಅಂತವರಲ್ಲಿ ಬಾಸ್ಕರಪ್ಪ ಕೂಪರ್ಡೆ, ನಾಮದೇವ ಕೂಪರ್ಡೆ, ನಿಂಗಪ್ಪ ಅಂಟಿನ, ಗಂಗಪ್ಪ ದಬಾಡಿ, ರುದ್ರಯ್ಯ ಕರಡಿ, ಶಿವನಿಂಗಪ್ಪ ಒಡವಡಗಿ, ರಾಯಪ್ಪ ಸಾಹುಕಾರ ಸೊನಿಹಾಳ, ರಾಯಪ್ಪ ಬೆಳಗಲಿ ಇತ್ಯಾಧಿಗಳವರು ಪ್ರಮುಖರು. "ಇಲಿಯಹಾಂಗ ನೂರು ವರ್ಷ ಬದುಕುವುದಕ್ಕಿಂತ ಹುಲಿಯಾಗಿ ಮೂರು ದಿನ ಬದುಕಬೇಕು" "ಗೆದ್ದರೆ ರಾಜ್ಯ ಸತ್ತರೆ ಸ್ವರ್ಗ" ಎಂದು

೧. ಕಸ್ತೂರಿ ಮಾಸಪತ್ರಿಕೆ - ಪೆಬ್ರುವರಿ ೧೯೮೭ : ಪುಟಸಂಖ್ಯೆ - ೮೪-೮೫. ತೇ. ಕ್ರಾಂತಿವೀರ.

ವೀರತನದ, ಶೌರ್ಯದ ಮಾತುಗಳನ್ನು ಹೇಳುತ್ತಿದ್ದರು. ಹೊರಾಡದೆ ಕೆಲ ಕಾಗದದ ಹುಲಿಗಳು ಗೂಡು ಸೇರ್‍ಯಾವ, ಚಳುವಳಿಯ ಹೆಸರಿನ ಮ್ಯಾಗ ಸಂಗ್ರಹವಾದ ಕ್ರಾಂತಿ ನಿಧಿ ನುಂಗಿ ನೀರಕುಡದಾವ, ಚಳುವಳಿಯ ಭೇಗೆಗೆ ಬಗ್ಗದೆ, ಬೆಟ್ಟ–ಗುಡ್ಡ ತಿರುಗಿ ಉಪವಾಸ–ವನವಾಸ ಮಾಡಿದವರಿಗೆ ಯಾರು ರೊಕ್ಕ ಬಿಚ್ಚುವದಿಲ್ಲ. ಇಸ್ತ್ರಿ ಮಡಿಕೆ ಮಾಸದ, ಬಿಳಿಅಂಗಿ, ಖಾದಿ ಟೊಪ್ಪಿಗೆ ಹಾಕಿಕೊಂಡು ಓಡಾಡುವವರಿಗೆ ಬೇಕಾದಷ್ಟು ಕೊಡತಾರ. ಸ್ವಾತಂತ್ರ್ಯ ತಮ್ಮಿಂದ ಸಿಕ್ಕಿತೆಂದು ಬರಕೊತಾರ. ಇವರು ಬಹಳ ಮಸಲತ್ತಿನವರು. ಕೂದಲ ಎಳಿಲೆ ಕುತಗಿ ಕೊಯ್ಯುವ ಇವರ ಮಾತು ಕೇಳಿದರೆ ಹೊಟ್ಯಾಗಿನ ಕಳ್ಳಕರಗಬೇಕು. ಮಹಾದೇವಪ್ಪನವರ ಭಾಷಣದಿಂದ ಚಳುವಳಿಯ ತೀವ್ರತೆ ಹೆಚ್ಚಾದ್ದರಿಂದ ಸರಕಾರಕ್ಕೆ ತಲೆಬ್ಯಾನಿಯಾಗಿ, ಅಡತಡೆಯುಂಟು ಮಾಡಲು "ಕಂಟ್ರೋಲ್" ಕಾಯ್ದೆ ಜಾರಿಯಲ್ಲಿ ತಂದು ಆರುಚೀಲಕ್ಕಿಂತ ಯಾರು ಕಾಳು ಸಂಗ್ರಹಿಸಬಾರದೆಂದು ನಿರ್ಭಂದ ಹಾಕಿತು.[೨] ಕಾಯ್ದೆ ನಿರ್ಬಂಧವನ್ನು ಮುರಿದು ಮಹಾದೇವಪ್ಪನವರು ನಿತ್ಯ ಆಹಾರಕ್ಕಾಗಿ ಬೇಕಾಗುವ ಕರಡಿಕೊಪ್ಪದ ಗೌಡ ೩೦ ಚಕ್ಕಡಿಗಳ ಆಹಾರ ಧಾನ್ಯಕೊಂಡುಯ್ಯುವಾಗ "ದೇಶದ್ರೋಹಿ"ಗಳು ಹಿಡಿದುಕೊಡಲು ನಿರ್ಧರಿಸಿದ್ದರು. ಅಂತ ಸಂದರ್ಭದಲ್ಲಿ ಮಹಾದೇವಪ್ಪನವರು ಪೌಜದಾರ ಡ್ರೇಸ್ಸು ಹಾಕಿದ್ದುಂಟು.

"ಕೆಲವು ಸಲ ಯಾರದೋ ತಪ್ಪಿಗೆ ಯಾರಿಗೆ ಶಿಕ್ಷೆ" ದುಶ್‌ಕೃತ್ಯ ಮಾಡದ ಮಹಾದೇವಪ್ಪನವರ ಮೇಲೆ ಸ್ವಾರ್ಥಸಾಧಿಸಿಕೊಳ್ಳುತ್ತಿದ್ದರು. ಸಮಯ ಸಾಧಕರಿಂದ ಮಹಾದೇವಪ್ಪನವರು ದೇಶದ ಸ್ವಾತಂತ್ರ್ಯಕ್ಕಾಗಿ ಅನೇಕ ತಪ್ಪನ್ನು ಹೊರಬೇಕಾಗಿ ಬಂದಂತ ನಿದರ್ಶನಗಳು ಸಾಕಷ್ಟು ಇವೆ. ಮಹಾಮಾನವತಾವಾದಿ ಮಹಾದೇವರು ಇವ್ಯಾವುದಕ್ಕು ಕಿವಿಗೊಡದೆ ತಡೆದುಕೊಂಡುರು. ನಿಮ್ಮ ಮನಸ್ಸನ್ನು ಭಕ್ತಿಯ ಕಡೆ ತಿರುಗಿಸಿರಿ, ದ್ವೇಷ, ಅಸೂಯೇ ದೂರಮಾಡಿರಿ, ಇಂತ ಅಹಿತಕರ ಘಟನೆಯನ್ನು ಮುಗ್ದಮನಸ್ಸಿನ ಜನರ ಮೇಲೆ ಹಾಕಬೇಡಿರೆಂದು ವಿನಂತಿಸಿಕೊಂಡರು.

ಸ್ವಾತಂತ್ರ್ಯ ಕೊನೆಯ ಸಂಗ್ರಾಮ ೧೯೪೨ – ಮುರಗೋಡ ಮಹಾದೇವಪ್ಪನವರು :

ವೈಯಕ್ತಿಕ ಚಳುವಳಿಯ ತೀವ್ರತೆ ಕಂಡ ಬ್ರಿಟಿಷ ಸರಕಾರ 'ಕೃಪ್ಸರ್' ಮುಕಾಂತರ ಸಂಧಾನಕ್ಕೆ ಇಳಿಯಿತು. ಸಂಧಾನ ಪ್ರಯೋಜನವಾಗಲಿಲ್ಲ. ಗಾಂಧಿಜೀಯವರು ಒಂದು ಹೆಜ್ಜೆ ಮುಂದಿಟ್ಟು ೧೯೪೨ 'ಚಲೆಜಾವ್' ಭಾರತ ಬಿಟ್ಟು ತೊಲಗಿರಿ ಎಂಬ ಘೋಷಣೆ ಹೊರಡಿಸಿದರು. ಇದರ ದಳ್ಳುರಿ ಭಾರತದ ಉದ್ದಗಲಕ್ಕೂ ಚಾಚಿತು. ಚಲೆಜಾವ ಚಳುವಳಿಯ ಕರೆಕೊಟ್ಟ ಮಹಾತ್ಮಾ ಗಾಂಧಿಜೀಯವರನ್ನು ಬಂಧಿಸಲಾಯಿತು. ಚಳುವಳಿಕಾರರಿಗೆ ಮಾರ್ಗದರ್ಶನ ಇಲ್ಲದಂತಾಗಿ ದಿಕ್ಕುತೋಚದಂತಾಯಿತು. ಗಾಂಧಿಜೀಯವರ ಪರಮಶಿಷ್ಯ ಕಿಶೋರಲಾಲ ಮತ್ತು ಕಾಕಾಸಾಹೇಬರು, ಕಾಲೆಲಕರರ ಪತ್ರಿಕೆಯಲ್ಲಿ ಬರೆದ ಲೇಖನಗಳು ಮಾರ್ಗದರ್ಶನಗಳಾದವು. ಕರ್ನಾಟಕದವರೆಲ್ಲರೂ ಚಳುವಳಿಯಲ್ಲಿ ಪಾಲ್ಗೊಳ್ಳಬೇಕು. ಭೂಗತರಾಗಿ ಕಾರ್ಯಮಾಡಿದರೆಂದು ಗಾಂಧಿಜೀಯವರು ಸಂದೇಶ ಕೊಟ್ಟರು. ಅವರ ಹೇಳಿಕೆಯಂತೆ ಚಳುವಳಿಕಾರರ ಮುಖಂಡತ್ವ ವಹಿಸಿದ ಮುರಗೋಡ ಮಹಾದೇವಪ್ಪನವರು ದೇಶಾಭಿಮಾನ ಕೆರಳಿಸುವ

೨. ಕಸ್ತೂರಿ ಮಾಸಪತ್ರಿಕೆ – ಪೆಬ್ರುವರಿ ೧೯೮೭ : ಪುಟಸಂಖ್ಯೆ – ೮೪–೮೫. ವೆಂಕಣ್ಣ ಮಾಸ್ತರ

ಭಾಷಣಮಾಡಿದರು. ಖಾಸಗಿ ಆಸ್ತಿಗೆ ಕೈಹಚ್ಚದೆ ಸರಕಾರದ ಆಡಳಿತ ಯಂತ್ರ ಧ್ವಂಸಗೊಳಸಬೇಕೆಂದು ತಮ್ಮೆಲ್ಲ ಅನುಯಾಯಿಗಳಿಗೆ ಕರೆ ನೀಡಿದರು. ಧ್ವಜವಂದನೆ, ಹರತಾಳ, ಮೆರವಣಿಗೆಗಳನ್ನು ಮಾಡತೊಡಗಿದರು. ಆಗ ಮುಂಬೈ ಚಳುವಳಿಕಾರರು ಚಳುವಳಿಗೆ ಕೇಂದ್ರಸ್ಥಾನವನ್ನಾಗಿ ಮಾಡಿಕೊಂಡಿದ್ದರು. ಚಳುವಳಿ ವಿವಿಧ ಕಡೆ ಏಕಕಾಲಕ್ಕೆ ಪ್ರಾರಂಭವಾಯಿತು. ಅದಕ್ಕೆ ಮುರಗೋಡ ಮಹಾದೇವಪ್ಪನವರು ಮುಂದಾಳತ್ವ ವಹಿಸಿದ್ದರು. ೧೯೪೨ರಿಂದ ೧೯೪೩ರವರೆಗೆ ಚಳುವಳಿ ಉಕ್ಕೇರಿದ ಸಮುದ್ರದಂತಿತ್ತು. ಚಳುವಳಿಕಾರರ ಉದ್ದೇಶ, ಸರಕಾರಿ ಕಟ್ಟಡವಾದ ಪೋಸ್ಟ್ ಆಫೀಸು, ರೈಲ್ವೆ ಹಳಿಯನ್ನು ಕಿತ್ತುವುದು, ಗೌಡ, ಕುಲಕರ್ಣಿ, ಪೋಲಿಸರ ದಪ್ತರ ನಾಶಗೊಳಿಸುವುದು, ತೆರಿಗೆ ಹಣಲೂಟಿ ಮಾಡುವುದು, ರಹದಾರಿ ಪೂಲಕೆಡುವುದು, ಧ್ವಜವಂದನೆ, ಪ್ರಭಾತಪೇರಿ ಮಾಡುವುದಾಗಿತ್ತು.

ದೇಶದಾದ್ಯಂತ ಹಬ್ಬಿದ ಚಳುವಳಿಯ ಕಾವು, ದೇಶಾಭಿಮಾನ ಕೆರಳಿಸಿತು. ಮಹಾದೇವಪ್ಪನವರು ತಮ್ಮೆಲ್ಲ ಅನುಯಾಯಿಗಳಿಗೆ ರಾಷ್ಟ್ರೀಯ ಭಾವನೆ ತುಂಬಿ ಚಳುವಳಿಯಲ್ಲಿ ಭಾಗವಹಿಸುವಂತೆ ವಿಜಾಪುರ, ಜತ್ತ, ಧಾರವಾಡ, ಬೆಳಗಾವಿ ಜಿಲ್ಲೆಗಳಲ್ಲಿ ಸಂಚರಿಸಿ ಜನಜಾಗೃತಿಗೊಳಿಸಿದರು. ಮತ್ತು ಚಳುವಳಿಗೆ ಬೇಕಾಗುವ ಮದ್ದು-ಗುಂಡುಗಳನ್ನು ತಾವೇ ತಯಾರಿಸಿಕೊಳ್ಳುತ್ತಿದ್ದರು. ಅಥಣಿ ತಾಲೂಕಿನ 'ಕೊಟ್ಟಲಗಿ' ಜತ್ತ ತಾಲೂಕಿನ 'ಸೊನಿಹಾಳ' ಗದಗ ಜಿಲ್ಲೆಯ 'ಅಸೂಟಿ' ಸೈನಿಕರ ತರಬೇತಿ ಕೇಂದ್ರವನ್ನಾಗಿ ಮಾಡಿಕೊಂಡಿದ್ದರು. ಸ್ವತಹ ಮಹಾದೇವಪ್ಪನವರು ಚಳುವಳಿಕಾರರಿಗೆ ಬಂದೂಕು ಹಿಡಿಯುವ, ಹೊಡೆಯುವ ಮತ್ತು ದೇಶಿ ಮದ್ದು-ಗುಂಡು ತಯಾರಿಸುವ ಟ್ರೇನಿಂಗ್ ಕೊಡುತ್ತಿದ್ದರು. ಶಸಸ್ತ್ರಕ್ಕಾಗಿ ಯಾರಿಗೂ ಕೈವಡ್ಡಿ ಬೇಡದೆ ಅದನ್ನು ತಯಾರಿಸುವಲ್ಲಿ ಸ್ವಾವಲಂಭಿಗಳಾಗಿದ್ದರು.[೧]

ಚಳುವಳಿಕಾರರನ್ನು ಸಂಘಟಿಸಿ ಅವರ ಯೋಗಕ್ಷೇಮವನ್ನು ಮುರಗೋಡ ಮಹಾದೇವಪ್ಪನವರು ವಹಿಸಿಕೊಂಡಿದ್ದರು. ಇವರ ನೆರವಿಗಾಗಿ ಬಾಸ್ಕರಪ್ಪ ಕೂಪರ್ಡೆ, ರಾಮಪ್ಪ ಸಾಹುಕಾರ, ಸೊನಿಹಾಳ, ರಾಮಪ್ಪ ಬೆಳಗಲಿ, ಬಾಲಸಿಂಗ ಮಾಸ್ತರು, ಬಾಗಲಕೋಟೆ ಜಂಗಿನ ಮಾಸ್ತರ, ಚೋಳಚಗುಡ್ಡದ ಸಿದ್ದಪ್ಪ ಮಾಳವಾಡ, ಹೇಳಿದ ನಿದರ್ಶನಗಳುಂಟು.

ಮುರಗೋಡ ಮಹಾದೇವಪ್ಪನವರ ತಂಡದಿಂದ ವಿಧ್ವಂಸಕ ಕಾರ್ಯ :

ಕೇಂದ್ರ ಸಮಿತಿಯ ಚಳುವಳಿ ಉಗ್ರ ರೂಪತಾಳಿತು. ದೇಶದಾದ್ಯಂತ ಕಂದಾಯಲೂಟಿ, ರೈಲ್ವೆಹಳಿ ಕಿತ್ತುವುದು, ಪೋಸ್ಟ್ ಆಫೀಸು ಸುಡುವುದು, ತಾರು-ತಂತಿ ಕಿತ್ತುವುದು, ಸರಕಾರಿ ಆಸ್ತಿ-ಪಾಸ್ತಿಗಳಿಗೆ ಬೆಂಕಿ ಹಚ್ಚುವುದು ನಿರ್ಧರಿಸಲಾಯಿತು. ಕೆಲವು ಕಡೆ ಕೂಳಿನ ಆಸೆಗಾಗಿ ದುರಾಡಳಿತ ನಡೆಸುವ ಪೋಲಿಸ್ ಸ್ಟೇಶನ್ ಕೂಡಾ ಸುಡುವುದನ್ನ ಚಳುವಳಿಕಾರರು ಮಾಡತೊಡಗಿದರು. ಸರಕಾರಕ್ಕೆ ದಿಕ್ಕು ತೋಚದಂತಾಯಿತು. ಮಿಲಟರಿ ಸಹಾಯ ಪಡೆದರು. ಹತೋಟಿಗೆ ಭರದಾಯಿತು. ಬ್ರಿಟೀಷ ಸರಕಾರಕ್ಕೆ ತಲೆಬ್ಯಾನಿಯಾಗಿ ಬಿಟ್ಟಿತು. ಚಳುವಳಿಕಾರರನ್ನು ಹಿಡಿದುಕೊಟ್ಟವರಿಗೆ ಬಹುಮಾನ ಕೊಡುವದಾಗಿ ಆಸೆ ಹಚ್ಚಿದರು. "ಕರ್ನಾಟಕದ ಚಳುವಳಿಕಾರರ ಆಕ್ರೋಶಕ್ಕೆ ೨೫ ರೈಲ್ವೆ ನಿಲ್ದಾಣಗಳು ಧ್ವಂಸಗೊಳಲ್ಪಟ್ಟವು".[೨]

೧. ಮಾಡು ಇಲ್ಲವೇ ಮಡಿ - ಆಕಾಶವಾಣಿ ರೇಡಿಯೋ ರೂಪಕ : ಡಾ. ಎಸ್. ಪಿ. ಚವಲಾರ

೨. ಭಾರತದ ಗ್ಯಾಸಿಟೆಯರ್ - ಕರ್ನಾಟಕ ರಾಜ್ಯ : ಪುಟಸಂಖ್ಯೆ : ೨೧೦

ಇಂತ ಚಳುವಳಿಯ ಗಾಳಿ ಕರ್ನಾಟಕಕ್ಕೆ ತಾಗದೇ ಇರಲಿಲ್ಲ. ಚಳುವಳಿಯ ಕಾವಿನ ಬಿಸಿ ಏರತೊಡಗಿತು. ಇಂಚಗೇರಿ ಸಂಪ್ರದಾಯದ ಮುರಗೋಡ ಮಹಾದೇವಪ್ಪನವರು ಮತ್ತು ಅವರ ತಂಡದವರು ಚಳುವಳಿಯಲ್ಲಿ ಪಾಲ್ಗೊಂಡು ವಿಧ್ವಂಸಕ ಕಾರ್ಯದಲ್ಲಿ ತೊಡಗಿದರು. ಹಗಲಿನ ವೇಳೆಯಲ್ಲಿ ನಿಜಾಮನ ಹದ್ದನ್ನು ಸೇರಿ ರಾತ್ರಿ ಸಮಯದಲ್ಲಿ ಬಂದು ಪ್ರತಿ ಹಳ್ಳಿ-ಹಳ್ಳಿಗೆ ಹೋಗಿ ಜನಜಾಗೃತರನ್ನಾಗಿ ಮಾಡುತ್ತಿದ್ದರು. ಹಗಲಿನ ವೇಳೆಯಲ್ಲಿ ತಮ್ಮ ತಮ್ಮ ಹೊಲದಲ್ಲಿ ಕೆಲಸಮಾಡುತ್ತಾ ರಾತ್ರಿ ವೇಳೆಯಲ್ಲಿ ಮಹಾದೇವಪ್ಪನವರು ಜೊತೆ ಚಳುವಳಿಯಲ್ಲಿ ಪಾಲ್ಗೊಳ್ಳುತ್ತಿದ್ದರು. ಇದರಿಂದ ಸರಕಾರಕ್ಕೆ ಸಂಶಯ ಬರುತ್ತಿರಲಿಲ್ಲ. ಮಹಾದೇವಪ್ಪನವರು ಬ್ರಿಟಿಷ ಆಡಳಿತ ಯಂತ್ರ ಮುರಿಯಲು ಧಾರವಾಡ, ಬೆಳಗಾವಿ, ವಿಜಾಪುರ ಜಿಲ್ಲೆಯ ಹಲವು ಕಡೆ ಸರಕಾರಿ ಆಸ್ತಿ-ಪಾಸ್ತಿಗಳನ್ನು ಧ್ವಂಸಗೊಳಿಸ ತೊಡಗಿದರು. ಹೊಳೆ ಆಲೂರ, ತೇಗೂರ, ನಂದಗಾಂವ, ಚಿಮ್ಮಡ, ಮೆಟಗುಡ್ಡಗಳಲ್ಲಿಯ ಸರಕಾರಿ ಕಟ್ಟಡಗಳನ್ನು ಧ್ವಂಸಗೊಳಿಸದರು. ಅಲ್ಲದೇ ಹುಲಿಕೊಟೆ ಸ್ಟೇಶನ್, ವಿಜಾಪುರದ ಪೋಲಿಸ ಸ್ಟೇಶನ್, ಬಾಗಲಕೋಟೆಯ ತಾಲೂಕಿನ ಕಚೇರಿ, ಮಿಂಚನಾಳ-ಜಮನಾಳ ರೈಲ್ವೆ ಸ್ಟೇಶನ್, ನಿಂಬಾಳ ರೈಲ್ವೆ ಸ್ಟೇಶನ್, ಮುಳವಾಡ ಸ್ಟೇಶನ್ ಧ್ವಂಸಗೊಳಿಸಿದರು. ಮತ್ತು ಕೆರಕಲಮಟ್ಟಿ ಚಂದರಗಿ, ಮಹಾಲಿಂಗಪೂರ, ಬೆಳಗಲಿ, ನಾಗನೂರದ ಚಾವಡಿಗಳು ಮಹಾದೇವಪ್ಪನವರು ಮುಂದಾಳತ್ವದಲ್ಲಿ ಧ್ವಂಸಗೊಂಡವು. ಇವುಗಳಲ್ಲದೆ ಇನ್ನು ಶೇಡಬಾಳ, ಬದಾಮಿ ಸ್ಟೇಶನಗಳನ್ನು ಸುಡುವ ಯೋಜನೆ ಸಿದ್ಧಪಡಿಸಲಾಗಿತ್ತು. ಅಷ್ಟರಲ್ಲಿ ಮಹಾದೇವಪ್ಪನವರ ಬಂದನದಿಂದಾಗಿ ಕಾರ್ಯ ಸಫಲವಾಗಲಿಲ್ಲ. ಇವರ ಹಿಂಬಾಲಕರನ್ನು ಮತ್ತು ಮಹಾದೇವಪ್ಪನವರನ್ನು ವಿಜಾಪುರದ ಜೈಲಿಗೆ ಹಾಕಲಾಯಿತು. ಕೋರ್ಟಿನಲ್ಲಿ ನ್ಯಾಯ ನಿರ್ಣಯದಂತೆ ಮಹಾದೇವಪ್ಪನವರ ಹಿಂಬಾಲಕರಿಗೆ ಆರು ತಿಂಗಳು ಸಜಾ ಆಯಿತು. "ಮಹಾದೇವಪ್ಪನವರನ್ನು ವಿಜಾಪುರದಿಂದ ಹಿಂಡಲಗಾ" ಜೈಲಿಗೆ ವರ್ಗಾಯಿಸಲಾಯಿತು.

ಮಹಾದೇವಪ್ಪನವರ ಮುಂದಾಳತ್ವದಲ್ಲಿ ಭಾರತ ದೇಶದ ಸ್ವತಂತ್ರ್ಯಕ್ಕಾಗಿ ಚಳುವಳಿಕಾರರ ಆಕ್ರೋಶಕ್ಕೆ ತುತ್ತಾದ ಕೇವಲ ಕೆಲ ನಿದರ್ಶನಗಳನ್ನು ಇಲ್ಲಿ ಪ್ರಸ್ತಾಪಿಸುತ್ತೇನೆ.

೧) ಇಂಚಗೇರಿ ಪೋಲಿಸ್ ಸ್ಟೇಶನ್ ಸುಟ್ಟಿದ್ದು :

ಧಾರವಾಡ, ವಿಜಾಪುರ, ಬೆಳಗಾವಿ, ಸಾಂಗಲಿ, ಸೋಲಾಪುರ ಜಿಲ್ಲೆಗಳಲ್ಲಿ ನಡೆಯುವ ಎಲ್ಲ ಚಳುವಳಿಯ ಚಳುವಳಿಕಾರರ ಗುಪ್ತ ಹೋರಾಟಗಾರರು ಆಶ್ರಯ ಪಡೆಯುವ ಪ್ರಸಿದ್ಧ ಸ್ಥಾನ "ಇಂಚಗೇರಿ". ಈ ಎಲ್ಲಾ ಚಳುವಳಿಕಾರರಿಗೆ ಮಹಾದೇವಪ್ಪನವರ ಬೆಂಬಲವಿತ್ತು ಎಂದು ಅರಿತು ಬ್ರಿಟಿಷ ಸರಕಾರದ ಕಣ್ಣು ಅವರ ಮೇಲಿಯೇ ಕೇಂದ್ರಿಕೃತವಾಗಿತ್ತು. ಭೂಗತ ಚಳುವಳಿಕಾರರ ಚಟುವಟಿಕೆಗಳು ಇಲ್ಲಿಂದಲೇ ನಡೆಯುತ್ತಿದ್ದವು. ಇದರಿಂದ ಸರಕಾರಕ್ಕೆ ತಲೆ ಬಿಸಿಯಾಯಿತು. ಹೇಗಾದರೂ ಮಾಡಿ ಹಿಡಯುವ ಹವನಿಕೆ ಮಾಡುತ್ತಿದ್ದರು ಸಂಶಯಗೊಂಡ ಸರಕಾರ ಇಂಚಗೇರಿಯಲ್ಲಿ ಪೋಲಿಸ್ ಸ್ಟೇಶನ್ ತೆರೆದರು. ಅಲ್ಲಿ ೩೦ ಜನ ಪೋಲಿಸರನ್ನು ಅವರ ಮೇಲೊಬ್ಬ ಮೇಲಾಧಿಕಾರಿಗಳನ್ನು ನೇಮಿಸಲಾಗಿತ್ತು. ಇಲ್ಲಿಂದಲೇ ಚಳುವಳಿಕಾರರಿಗೆ ಬೇಕಾಗುವ ಶಸಸ್ತ್ರಗಳನ್ನು ಒದಗಿಸಲಾಗುತ್ತಿತ್ತು. ಪೋಲಿಸರಿಗೆ ದಿಕ್ಕುತೋಚದಂತಾಯಿತು. ಜೊತೆಗೆ ದೇಶಿಯ ದ್ರೇಶದ್ರೋಹಿಗಳು ಮಹಾದೇವಪ್ಪನವರನ್ನು ಬಂಧಿಸುವ

ಅಥವಾ ಕೊಲ್ಲಿಸುವ ಪಿತೂರಿ ನಡೆದಿತ್ತು. ಭಾರತ ದೇಶದಲ್ಲಿ ಹುಟ್ಟಿದ್ದರು ಅರಿವು ಇಲ್ಲದೆ ಬ್ರಿಟಿಷರ ಬಾಯಿ ಎಂಜಲಕ್ಕೆ ಕೈ ಒಡ್ಡಿ ಮಹಾದೇವಪ್ಪನವರನ್ನು ಹಿಡಿದುಕೊಡಲು ಇಂಚಗೇರಿಯಲ್ಲಿಯೇ ಬಿಡುಬಿಟ್ಟಿದ್ದರು.

ಇಂಚಗೇರಿಯಲ್ಲಿ ಶ್ರಾವಣ ಮಾಸದ ಸಪ್ತಾಹ ಪ್ರಾರಂಭವಾಗಿತ್ತು. ಸುತ್ತು ಹತ್ತು ದಿಕ್ಕಿನಿಂದ ಬಂದು ಜನ ನೆರೆಯತೊಡಗಿತು. ರಾಮಪ್ಪ ಬೆಳಗಲಿ, ಜಂಗಲಿ ಮಾಸ್ತರು, ಧರ್ಮಣ್ಣ ಬೆಳಗಲಿ, ರಡ್ಡೆರ ಹಟ್ಟಿ ಬೇಡರ ಟೋಳಿ ಆ ಸಪ್ತಾಹಕ್ಕೆ ಬಂದು ೩೫ ಜನರಿದ್ದ ಟೋಳಿಯು ಇಂಚಗೇರಿ ಪೋಲಿಸ್ ಸ್ಟೇಶನಕ್ಕೆ ಮುತ್ತಿಗೆಹಾಕಿ, ಬೆಂಕಿಹಚ್ಚಿ ಅಲ್ಲಿದ್ದ ಪೋಲಿಸರನ್ನು ಹೊಡೆದು ಓಡಿಸಿದರು. ಈ ಸುದ್ಧಿ ಸರಕಾರಕ್ಕೆ ತಲುಪಿತು. ಇವರೆಲ್ಲರನ್ನು ಬಂಧನದಲ್ಲಿರಿಸಿತು. ಇದರ ಖಟ್ಲೆ ವಿಜಾಪುರದ "ಶಸೆನ್ ಜಜ್ಜ" ಕೋರ್ಟಿನಲ್ಲಿ ನಡೆಯಿತು. ಆಗ ಹೊನ್ನಾವರ ಅಂತ ಜಜ್ಜ ಇದ್ದರು. ೧೩ ಜನರಿಗೆ ಆರೋಪಿಗಳೆಂದು ತೀರ್ಪು ನೀಡಲಾಯಿತು. ಬಿಡುಗಡೆ ಹೊಂದಿದ್ದವರಲ್ಲಿ ಧರ್ಮಣ್ಣ ಬೆಳಗಲಿ, ರಾಮಣ್ಣ ಚಿಮ್ಮಡ, ಅಮುಗೊಂಡ ಬಿರಾದಾರ, ಮಲ್ಲಪ್ಪ ಇಂಚಗೇರಿ ಬಿಡುಗಡೆ ಹೊಂದಿ ಬಂದಿದ್ದರು ಸಹ ಜಮಖಂಡಿ ಸರಕಾರದ ವಾರೆಂಟಿನ ಮೇರೆಗೆ ಅವರನ್ನು ಪುನಃ ಬಂದಿಸಿದರು.

೨) ಕೊಟ್ಟಲಗಿಯ ಟಪಾಲ ಚೀಲ ಅಪಹರಣ :

ದಿನಾಂಕ ೦೭-೦೪-೧೯೪೩ ರಲ್ಲಿ ಮಹಾದೇವಪ್ಪನವರ ಮುಖಂಡತ್ವದಲ್ಲಿ ಜತ್ತದಿಂದ – ಕೊಟ್ಟಲಗಿಗೆ ಒಬ್ಬ ಅಂಚೆಯವರು ಕುದರಿಯ ಮೇಲೆ ಟಪಾಲು ಚೀಲವನ್ನು ತೆಗೆದುಕೊಂಡು ಹೋಗುತ್ತಿದ್ದ. ಆಗ ಕೊಟ್ಟಲಿಗೆಯ ಊರ ಹೊರಗಡೆ ರಸ್ತೆಯ ಪಕ್ಕದಲ್ಲಿ ಮೂರು-ನಾಲ್ಕು ಜನ ಚಳುವಳಿಕಾರರು ಆ ಟಪಾಲು ಚೀಲವನ್ನು ಕಸಿದುಕೊಂಡು ಅದರಲ್ಲಿರುವ ಸರಕಾರಿ ಕಾಗದ ಪತ್ರಗಳನ್ನು ಸುಟ್ಟು ಹಾಕಲು ನಿಂತಿದ್ದರು. ಅವರ ಕೈಯಲ್ಲಿ "ಬಂದೂಕು, ಹಗ್ಗ, ಬಡಿಗೆ, ಕತ್ತಿಗಳಿದ್ದವು". ಇವುಗಳನ್ನು ನೋಡಿದ ಪೋಸ್ಟ ಮಾಸ್ತರರು ಕುದರೆಯನ್ನು ನಿಲ್ಲಿಸಿ ಅವರನ್ನು ಪ್ರತಿಭಟಿಸುವ ಗೋಜಿಗೆ ಹೋಗದೆ, ಕುದುರೆಯನ್ನು ಬಿಟ್ಟು ಓಡಿ ಹೋಗಿಬಿಟ್ಟನು. ಆಗ ಟಪಾಲು ಚೀಲದಿಂದ ತಮಗೆ ಬೇಕಾದ ಸರಕಾರಿ ಕಚೇರಿ ಕಾಗದಗಳನ್ನು ಆರಿಸಿಕೊಂಡು ಬೆಂಕಿಹಚ್ಚಿಬಿಟ್ಟರು.

೩) ಹಳ್ಳೂರ ಪೋಲಿಸ ಸ್ಟೇಶನಕ್ಕೆ ಬೆಂಕಿ ಹಚ್ಚಿದ್ದು :

ಅದೇ ರೀತಿಯಾಗಿ ೦೫-೦೬-೧೯೪೪ (ಕರ್ಮವೀರ ಸುದ್ಧಿ) ಗೋಕಾಕ ತಾಲೂಕಿನ ಹಳ್ಳೂರ ಪೋಲಿಸ್ ಸ್ಟೇಶನಕ್ಕೆ ಬೆಂಕಿ ಹಚ್ಚಿದ್ದು ೩೦-೧೦-೧೯೪೨ ರಲ್ಲಿ (ಸಂಯುಕ್ತ ಕರ್ನಾಟಕದ) ಸುದ್ಧಿ. ಕೊಟ್ಟಲಗಿಯ ಶಸಸ್ತ್ರ ಪ್ರಕರಣ, ಕೊನ್ನೂರ ದೇಸಾಯಿಯವರ ವಾಡೆಯಿಂದ ಬಂದೂಕು ಅಪಹರಣ ಮತ್ತು ಮಹಾದೇವಪ್ಪನವರ ಹಿಂಬಾಲಕರಲ್ಲಿ ಅನೇಕ ಚಳುವಳಿಕಾರರ ಗುಂಪುಗಳಿದ್ದವು. ಅವರು

---

೧. ಕರ್ಮವೀರ ಮಾಸಪತ್ರಿಕೆ : ೧೮-೧೨-೧೯೪೪

೨. ಮಾಧವನಂದ ಪ್ರಭುಜಿಯವರ ಜೀವನ ಚರಿತ್ರೆ : ಮುತ್ತಪ್ಪ ಮಹಾರಾಜ ಖೊಬನಟ್ಟಿ : ಪುಟಸಂಖ್ಯೆ : ೩೭ ಪ್ರಕಾಶಕರು : ವೀರಭದ್ರೇಶ್ವರ ಪೌ. ಪ್ರ. ರಾಮು ಮಂದಿರ ರೋಡ, ವಿಜಾಪುರ.

ಹೇಳಿದ ಹಾಗೆ ಚಾಚೂ ತಪ್ಪದೇ ಎಲ್ಲಾ ಗುಂಪಿನವರು ಕಾರ್ಯನಿರ್ವಹಿಸುತ್ತಿದ್ದರು. ಅವರು ಇರದಿದ್ದರೂ ಸಹ ಅವರ ಮೇಲಿನ ನಂಬಿಕೆ, ವಿಶ್ವಾಸ, ಭಕ್ತಿಯಿಂದ, ಶ್ರದ್ಧೆಯಿಂದ ತಮ್ಮ ಕಾರ್ಯದಲ್ಲಿ ತೊಡಗುತ್ತಿದ್ದರು. ಅವರು ಎಸಗಿರುವ ವಿಧ್ವಂಸಕ ಕೃತ್ಯಗಳನ್ನು ಇಲ್ಲಿ (ವಿಸ್ತರಿಸಿದ್ದೇನೆ) ಹೇಳಿದ್ದೇನೆ.

ಕೊಟ್ಟಲಗಿಯ ಶಸ್ತ್ರಾಸ್ತ್ರ ಪ್ರಕರಣ (೩೦-೧೦-೧೯೪೨ ಸಂಯುಕ್ತ ಕರ್ನಾಟಕ) :

ಉಗ್ರಗಾಮಿ ಸುಭಾಸಚಂದ್ರ ಭೋಸರಿಂದ ಪ್ರಭಾವಿತರಾದ ಶ್ರೀಯುತರು ಸ್ವಾತಂತ್ರ್ಯಕ್ಕಾಗಿ ನಾವು ಹೋರಾಟ ಮಾಡಬೇಕು. ರಕ್ತಕ್ರಾಂತಿ ಮಾಡಬೇಕು. ಅದಕ್ಕಾಗಿ ಮದ್ದು ಗುಂಡು, ಪಿಸ್ತೂಲು, ಬಂಧೂಕಗಳ ಅವಶ್ಯಕತೆ ನಮಗಿದೆಯೆಂದು ತಮ್ಮೆಲ್ಲ ಹಿಂಬಾಲಕರಿಗೆ ಹೇಳಿದರು. ಸರಕಾರಿ ಒಡೆತನದಲ್ಲಿರುವ ಮದು-ಗುಂಡುಗಳ ಅಪಹರಣದಿಂದ ಪ್ರಯೋಜವಗಲಾರದು. ನಾವೇ ಅವುಗಳನ್ನು ತಯಾರಿಸಿಕೊಳ್ಳಬೇಕು. ಅದರಲ್ಲಿ ಸ್ವಾವಲಂಬಿಗಳಾಗಬೇಕೆಂದು, ಅದರ ಸಿದ್ಧತೆಗೆ ತೊಡಗಿದರು. ಅಥಣಿ ತಾಲೂಕಿನ ಕೊಟ್ಟಲಗಿ, ಜತ್ತ್ ತಾಲೂಕಿನ ಸೊನಿಹಾಳ ಈಗಿನ ಗದಗ ಜಿಲ್ಲೆಯ 'ಅಸೂಟಿ', ಮದ್ದುಗುಂಡು ತಯಾರಿಸುವ ಕೇಂದ್ರವನ್ನಾಗಿ ಮಾಡಿಕೊಂಡರು. ಮದ್ದು ಗುಂಡುಗಳ ತಯಾರಿಸುವ ಮತ್ತು ಅವುಗಳನ್ನು ಹಿಡಿಯುವ, ಗುರಿ ಇಟ್ಟು ಹೊಡೆಯುವ ತರಬೇತಿಯನ್ನು ಕೊಡುತ್ತಿದ್ದರು. ದೇಶದ್ರೋಹಿಗಳಿಂದ ಈ ಸುದ್ದಿ ಬ್ರಿಟಿಷ ಸರಕಾರಕ್ಕೆ ಮುಟ್ಟಿತು. ಆ ಊರಿನಲ್ಲಿ ಮದ್ದು-ಗುಂಡುಗಳನ್ನು ತಯಾರಿಸುವವರನ್ನು ಹಿಡಿಯಲಿಕ್ಕೆ ಸಿ.ಆಯ್.ಡಿ. ನೇಮಿಸಿತು. ಸಂಶಯ ಬಂದವರನ್ನು ಬಂಧಿಸಿ ಜೈಲಿಗೆ ಹಾಕಿತು. ಅಂಥದೊಂದು ನಿದರ್ಶನ.

ಅಥಣಿ ತಾಲೂಕಿನ ಕೊಟ್ಟಲಗಿಯಲ್ಲಿ ನಡೆಯಿತು. ಅಲ್ಲಿ ಗುರಪ್ಪ ಮಲ್ಲಪ್ಪ ಝುಳಕಿ ತಕ್ಕಮಟ್ಟಿಗೆ ಶ್ರೀಮಂತರು, ಹಿಟ್ಟಿನ ಗಿರಣಿಯೊಂದಿತ್ತು. ಅಲ್ಲಿಗೆ ಹೋಗಿ ಗುರುಪ್ಪನನ್ನು ಸ್ವಾತಂತ್ರ್ಯ ಹೋರಾಟಕ್ಕೆ ನಿಮ್ಮ ಸಹಾಯ ಬಹಳ ಇದೆ. ಸದ್ಗುರು ಸಮರ್ಥರ ಮೇಲೆ ಭಕ್ತಿ ನಿಮ್ಮಿಂದ ಒಂದು ಸಣ್ಣ ಕೆಲಸ ಆಗಬೇಕಾಗಿದೆ. ನೀವು ಮದ್ದು ಗುಂಡು ತಯಾರಿಸಬೇಕು ಎಂದು ಕೇಳಿಕೊಂಡರು. ಆ ಮಾತಿಗೆ ಚಕಾರವೆತ್ತದೆ ಒಪ್ಪಿಕೊಂಡರು. ಹಾಗಾದರೆ ನಾಳೆ ರಾತ್ರಿ ನಿಮ್ಮ ಗಿರಣಿ ಮನೆಯಲ್ಲಿ ಸಭೆ ಸೇರೋಣ. ಅದರಲ್ಲಿ ರಾಮಣ್ಣ ಚಿಮ್ಮಡ, ವಿರೂಪಾಕ್ಷಿ ಇಟಗಿ ಮೇಸ್ತ್ರಿ, ಗುರುಪಾದಪ್ಪ ಮಲ್ಲಪ್ಪ ತೇರದಾಳ, ಮಲ್ಲಪ್ಪ ಝುಳಕಿ, ಗುರಪ್ಪ ಝುಳಕಿ, ಶಾಂತವ್ವ ಮೇತ್ರಿ, ಮಲ್ಲೇಶ ಮೇತ್ರಿ ಎಲ್ಲರೂ ಬರುತ್ತಾರೆ. ನಾಳೆ ರಾತ್ರಿ ಮದ್ದು-ಗುಂಡು ತಯಾರಿಕೆಗೆ ಬೇಕಾಗುವ ಸಾಮಾನುಗಳು ಕೂಡಾ ಬರುತ್ತವೆ ಎಂದು ಮಹಾದೇವಪ್ಪನವರು ಗುರಪಾದಪ್ಪನಿಗೆ ಹೇಳಿದರು. ಈ ಸುದ್ದಿ ಹೊರಗೆ ಹೋಗದೆ ಗುಪ್ತವಾಗಿರಬೇಕು. ಹಾಗೂ ಯೋಗ್ಯವಾದ ಸ್ಥಳವೆಂದು ಎಲ್ಲರು ಸಭೆ ಸೇರಿ ಚರ್ಚಿಸಿ, ಸತತವಾಗಿ ಮೂರು ವರ್ಷಗಳವರೆಗೆ 'ಟ್ರಕ್'ಗಟ್ಟಲೆ, ಕಾಡತೋಸು, ಪಿಸ್ತೂಲು ತಯಾರಿಸಿದರು. ಈ ಸುದ್ದಿ ಸರಕಾರಿ ಬಾತಮಿದಾರರಿಗೆ ದೇಶದ್ರೋಹಿಗಳಿಂದ ಮುಟ್ಟಿತು. ೬೦ ಮಿಲ್ಟ್ರಿ ಸೈನಿಕರನ್ನು ತಂದು ಮುತ್ತಿಗೆ ಹಾಕಿದರು. ಸಿದ್ದಪ್ಪನ ಮನೆಯನ್ನೆಲ್ಲ "ಝಡತಿ" ಮಾಡಿದರು. ಅಲ್ಲಿ ಏನೂ ಸಿಗಲಿಲ್ಲ, ತಯಾರಾದ ಪಿಸ್ತೂಲಗಳೆಲ್ಲವುಗಳನ್ನು ಮರುದಿನವೇ ರವಾಣೆಯಾಗುತ್ತಿದ್ದವು. ಸಿದ್ದಪ್ಪನನ್ನು ಸಂಶಯದ ಮೇಲೆ ಬಂಧಿಸಿ ಜೈಲಿನಲ್ಲಿಟ್ಟರು. ೫ ಜನ ಪೋಲಿಸರನ್ನು ಸಿದ್ದಪ್ಪನ ಮನೆಯ ಪಾರಾಮಾಡಲು ನೇಮಿಸಿದ್ದರು.

ಸಿದ್ದಪ್ಪನ ಹೆಂಡತಿ ಶಿವಗಂಗವ್ವ ತನ್ನ ಮೂರು ಮಕ್ಕಳೊಂದಿಗೆ ಒಬ್ಬಳೆ ಇರುತ್ತಿದ್ದಳು. ಆದರೆ ಅವಳು ತುಂಬಿದ ಬಸುರಿ. ಗಂಡನು ಜೈಲಿಗೆ ಹೋದ ೪ ದಿನ ಮನೆಯಲ್ಲಿದ್ದದನ್ನು ಮಕ್ಕಳಿಗೆ ಹಾಕಿದಳು. ಒಂದೊಂದೆ ಸಾಮಾನು ತೀರಿದವು. ಮಕ್ಕಳು ಹಸುವಿನಿಂದ ಬಳಲತೊಡಗಿದರು. ಊರವರ್‍ಯಾರು ಸಹಾಯ ಹಸ್ತ ನೀಡಲಿಲ್ಲ. ಮಕ್ಕಳಿಗೆ 'ಬಸಲಿಂಗವ್ವ' ಚಿಗವ್ವನ ಮನೆಗೆ ಹೋಗಿ ಏನಾರ ಇಸಿದುಕೊಂಡು ಬರಹೇಳಿದಾಗ ಹುಡುಗರು ಪೋಲಿಸರ ಕಿರುಕುಳದಿಂದ ನೋವನ್ನುಂಡಿದ್ದರು. ಅಂಜಿ ಹೋಗುತ್ತಿರಲಿಲ್ಲ. ಹೆತ್ತ ಕರಳು ಮಿಡಿಯುತ್ತಿತ್ತು. ಮಕ್ಕಳಿಗೆ ಸಮಾಧಾನ ಹೇಳುತ್ತಿದ್ದಳು. ತಡಕೋ ಅಪ್ಪಾ! ಸದ್ಗುರು ಸಮರ್ಥನನ್ನು ನೆನೆಸು; ಮಹಾದೇವರನ್ನು ನೆನೆಸುತ್ತಾ ಕಣ್ಣೀರು ಸುರಿಸಿದಳು. ಇವರಿಗೊದಗಿದ ಕಷ್ಟ ಕಂಡ ಜನ ವ್ಯಂಗ್ಯವಾಗಿ ಮಾತನಾಡುತ್ತಿದ್ದರು. ಇವರಪ್ಪ ದೇಶ ಸೇವೆ ಮಾಡತಾನಂತ! ಹೊಟ್ಟೆ ತುಂಬಬೇಕಲ್ಲ ಮಹಾದೇವರು ತಂದು ಕುಂತಲ್ಲೆ ಎಲ್ಲವನ್ನು ಕೊಡಬೇಕಲ್ಲ.

ಸಂಜೆ ಸಮಯದಲ್ಲಿ ಹೊಟ್ಟೆ ನೋವು ಶುರುವಾಯಿತು. ಅವಳು ತುಂಬಾ ನರಳತೊಡಗಿದಳು. ಬೇನೆ ಎದ್ದವು, ಯಾರು ಕರೆದರು ಬರಲಾರರು. ದೇವರು ಮಾಡಿದಂಗ ಆಗಲಿ, ಧ್ಯಾನ ಮಾಡಿದಳು. ಹೆರಿಗೆಯಾಯಿತು. ಅಷ್ಟರಲ್ಲಿ ಒಳಗೆ ಮಹಾದೇವರು ಹೇಗೊ ಬಂದಿದ್ದರು. ಸ್ವಲ್ಪ ಸಮಯ ಕಣ್ಣು ತಗೆದಳು. ದೇವರು ತಮ್ಮ ಜೊತೆ ಪೇಡೆ ತಗೆದು ಹೊಟ್ಟೆ ತುಂಬ ತಿನಿಸಿದರು. ನೀರು ಇಟ್ಟು ಗಂಜಿ ಕಾಯಿಸಿ ಕೊಟ್ಟರು. ಅಭಯಹಸ್ತವನ್ನು ನೀಡಿ ಹೋದರು.

ಎಂಟು ದಿನದ ನಂತರ ಒಬ್ಬ ಸಿ.ಆಯ್.ಡಿ. ಬಂದು ಶಿವಗಂಗವ್ವಕ್ಕ ದೇವರು ನನ್ನ ಇಲ್ಲೆ ಇರುವಂತೆ ನಿನ್ನ ಯೋಗಕ್ಷೇಮ ನೋಡಿಕೋ ಅಂತಾ ಹೇಳಿ ಕಳಿಸಾರ. ಅವನ ಮಾತು ನಂಬಿ ಸಮ್ಮತಿಸಿದಳು. ಒಂದು ತಿಂಗಳ ನಂತರ ಮಹಾದೇವರು ಶಿವಗಂಗವ್ವಳ ಕಣಸಿನಲ್ಲಿ ಬಂದು ಅವ ಸಿ.ಐ.ಡಿ. ಅದಾನು. ಬಾತಮಿ ತಗೊಂಡು ಪೋಲಿಸಿನವರಿಗೆ ಹೇಳ್ತಾನ. ಅವನನ್ನು ಹೊರಗೆ ಹಾಕು ನಾನು ನಿನಗೆ ಬೆಟ್ಟಿಕೊಡುತ್ತೇನೆ. ಎಂದು ಹೇಳಿದಾಗ ಅವನನ್ನು ಹೊರಹಾಕಿದಳು.

ಅಂದೇ ರಾತ್ರಿ ಮಹಾದೇವರು ಬಂದು ಯಾರನ್ನು ಒಳಗೆ ಕರೆದುಕೊಳ್ಳಬೇಡಾ ಹಾಗೂ ಯಾರಿಗೂ ಹೆದರಬೇಡಾ. ಇಷ್ಟು ದಿನ ಆಗಿದೆ ಇನ್ನು ಮೂರು ವರ್ಷದಾಗ ಬರತಾನ ನಿನ್ನ ಗಂಡ ಎಂದು ಹೇಳಿ ಅಭಯ ಹಸ್ತ ನೀಡಿ ಅವಳ ಉಪಜೀವನಕ್ಕೆ ವ್ಯವಸ್ಥೆ ಮಾಡಿಹೋದರು.

ದೇಶದ ಸ್ವಾತಂತ್ರ್ಯಕ್ಕಾಗಿ ಮಹಾದೇವಪ್ಪನವರ ಅನುಯಾಯಿಗಳು ಕೆಲವರು ಸರ್ವಸ್ವವನ್ನೇ ತ್ಯಾಗಮಾಡಿದರು. ಕೆಲವರು ಹೆಂಡತಿಯರ ಕೊರಲ್ಲಿದ್ದ ತಾಳಿ ಹರಿದುಕೊಂಡು ಬಂದರು, ಕೆಲವರು ಹೆಂಡರು ಮಕ್ಕಳನ್ನು ತೊರೆದು ಮಹಾದೇವಪ್ಪನವರ ಬೆನ್ನ ಹತ್ತಿ ಬಂದು ಎಷ್ಟೋ ಕಷ್ಟಗಳನ್ನು ಅನುಭವಿಸಿದ್ದು ಉಂಟು. ಜೈಲಿಗೆ ಹೋದದ್ದು ಉಂಟು, ಆದರೆ ಮಹಾದೇವರು ಅಂತವರನ್ನು ಎಂದೂ ಕೈಬಿಡಲಿಲ್ಲ. ಅವರಿಗೆ ಬಂದ ಕಷ್ಟದಲ್ಲಿ ಪಾಲುದಾರರಾಗುತ್ತಿದ್ದರು. ಅವರ ತಪ್ಪುಗಳನ್ನು ತಮ್ಮ ಮೇಲೆ ಹಾಕಿಕೊಂಡು ಅವರಿಗೆ ಬಂದಂತ ಕಷ್ಟಗಳಿಂದ ದೂರ ಮಾಡುವ ಮಹಾಮಾನವತಾವಾದಿಗಳಾಗಿದ್ದರು.

ಹುಲಕೋಟಿ ಸ್ಟೇಶನಿಗೆ ಬೆಂಕಿ ಹಚ್ಚಿ ಬಂದೂಕು ಅಪಹರಿಸಿದ್ದು :

ಮಹಾದೇವಪ್ಪನವರ ಮುಖಂಡತ್ವದಲ್ಲಿ ಚಳುವಳಿಕಾರರು ಹುಲಕೋಟಿ ಸ್ಟೇಶನ್ನಿಗೆ ಲಗ್ಗೆ ಇಡುವುದು ಮೊದಲೇ ನಿಶ್ಚಯವಾಗಿತ್ತು. ಇದರಲ್ಲಿ ಪಕೀರಯ್ಯ ಶಿರಹಟ್ಟಿಮಠ ಭೀಮಸಿ ತಲ್ಲೂರ, ಬಸಪ್ಪ ತಲ್ಲೂರ, ನಿಂಗಪ್ಪ ಜೊದಟ್ಟಿ, ಬಸಪ್ಪ ಮುನವಳ್ಳಿ, ಬಸವಂತಪ್ಪ ದಾಣಿ (ಯರಗಟ್ಟಿ), ಯಲ್ಲಪ್ಪ ದಾಣಿ, ನಿಂಗಬಸಯ್ಯ ಕೆರಕಲ್ಲಮಠ, ಶಿವಲಿಂಗಪ್ಪ ಮಾಸ್ತರ ಹೊಂಬಳ ಪಾಲ್ಗೊಂಡು, ಪೋಲಿಸರನ್ನು ಗಿಡಕ್ಕೆ ಕಟ್ಟಿ, ಕಟ್ಟಡವನ್ನು ಚಕಂಗೊಳಿಸಿದರು.

ಇದಾದ ಎಂಟು ದಿನಗಳ ನಂತರ ಚಳುವಳಿಕಾರರ ಮುಂದಿನ ಕಾರ್ಯಚಟುವಟಿಕೆಗಾಗಿ 'ಹುಲ್ಲೂರ'ರಲ್ಲಿ ಸಭೆ ಸೇರಿದರು. ಸಭೆ ಮುಗಿಯುವ ಹೊತ್ತಿಗೆ 'ಮಹಾದೇವಪ್ಪ ಮುರಗೋಡ' ಬಂದು "ಒಂದು ರೊಟ್ಟಿ ತಿಂದರ ಸಿಗತಿರಿ. ಅರ್ಧತಿಂದರ ಪಾರಾಗತಿರಿ" ತಲ್ಲೂರ ಬಸಪ್ಪ ರಾಮದುರ್ಗದಾಗ ಅಟಕು ಮಾಡಿ ಜೈಲಿಗೆ ಹಾಕ್ಯಾರ, ಜಾಗ ಕಾಲಿ ಮಾಡಿರಿ. ಬಂದೂಕನ್ನ ಎಲ್ಲ ಕಾರ್ಯಕರ್ತರಗೆ ಕೊಡಲು 'ಹುಲ್ಲೂರ' ನಿಂಗನಗೌಡರಿಗೆ ಹೇಳಿ, ಬಾಸ್ಕರ ಕೂಪರ್ಡೆಗೆ 'ಪಟ್ಟದಕಲ್ಲಿಗೆ' ಬರಲಿಕ್ಕೆ ಹೇಳಿಹೋದರು.

ದೇವರ ಅನುಮತಿಯಂತೆ ಬಾಸ್ಕರ ಕೂಪರ್ಡೆ ಸದಾಶಿವ ಕೊರನ್ನವರನ್ನು ಕರೆದುಕೊಂಡು ಪಟ್ಟದಕಲ್ಲಿಗೆ ಹೋದರು. ಅಷ್ಟರಲ್ಲಿ ಬಸಲಿಂಗಪ್ಪ ತಲ್ಲೂರ ಪಟ್ಟದಕಲ್ಲಿಗೆ ಬಂದಿದ್ದರು. ಒಂದು ಮಠದಲ್ಲಿ ಪ್ರವಾಸಿಕನಾಗಿ ವಸ್ತಿ ಇದ್ದ ಮಹಾದೇವರ ಬೆಟ್ಟಿಯಾಗಿ ಅವರ ಜೊತೆ ಚರ್ಚಿಸಿದರು. ಮಹಾದೇವರು ಮುಂದಿನ ಕಾರ್ಯಚಟುವಟಿಕೆಯನ್ನು ತಮ್ಮ ಅನುಯಾಯಿಗಳಿಗೆ ಹೇಳುತ್ತಿದ್ದರು. ಅವರ ಚಾಚು ತಪ್ಪದೆ ಆ ಕಾರ್ಯದಲ್ಲಿ ತೊಡಗುತ್ತಿದ್ದರು. ನಾನು ಇಂಚಗೇರಿ ಬಂದೂಕ ಪ್ರಕರಣದ ಸಲುವಾಗಿ ವಿಜಾಪುರಕ್ಕೆ ಹೋಗಬೇಕಾಗಿದೆ. ಕಾರಜಣಿಗಿ ಧರ್ಮಣ್ಣ, ಬೆಳಗಲಿ ರಾಯಣ್ಣ, ರಾಮಣ್ಣ ಚಿಮ್ಮಡ ಇವರಿಗೆ ಸರಕಾರದವರು 'ಫಾಸಿ' ಶಿಕ್ಷೆ ಕೊಡುವ ಹವನಿಕೆಯಲ್ಲಿದ್ದಾರೆ. ನಾನು ಸುಮ್ಮನಿದ್ದರ ಹೆಂಗ, ಅವರಿಗೆ ಹೇಳಿಮಾಡಿಸಿದವ ನಾನು, ಅವರ ತಪ್ಪನ್ನು ನನ್ನ ಮೇಲೆ ಹಾಕಿಕೊಂಡು ಅವರನ್ನ ಬಿಡಿಸಬೇಕಾಗಿದೆ. ವಿಜಾಪುರದ ಕಲೆಕ್ಟರನಿಗೆ ಎರಡು ಪತ್ರ ಬರೆದದ್ದು ಆಗೇದ. ಚಳುವಳಿ ಉಗ್ರವಾಗಿದೆ, ಚಳುವಳಿಕಾರರನನ್ನು ಕಂಡಲ್ಲಿ ಗುಂಡು ಹಾಕುವ ಠರಾವು ಆಗಿದೆ. ಹಿಡಿದುಕೊಟ್ಟವರಿಗೆ ಐದು ಸಾವಿರ ರೂಪಾಯಿ ಬಹುಮಾನ ಕೊಡುವದಾಗಿ ಜಾಹಿರಾತು ಕೊಟ್ಟಿದ್ದಾರೆ. ಇಂಥಹದ್ದರಲ್ಲಿ ನಮ್ಮನ ಬಿಟ್ಟು ಹೋದರೆ ಹೆಂಗ 'ಬಾಸ್ಕರಪ್ಪ' ಕೇಳಿದರು. ಧೈರ್ಯ ಬಿಡಬೇಡಿರಿ, ಯಾವಾಗ ಯಾವ ಯಾವ ಕೆಲಸ ಬರತಾವು ಅವೆಲ್ಲ ಪರಮಾತ್ಮನ ಇಚ್ಛೆ, ನಿವೆಲ್ಲರೂ ವ್ಯಕ್ತಿಗೆ ಮಹತ್ವ ಕೊಟ್ಟ ಗಾಬರಿ ಆಗಬೇಡಿರಿ. ನಿಮ್ಮ ತ್ಯಾಗ, ಧೈರ್ಯ ವಿಶ್ವಾಸ, ನಿಮ್ಮನ್ನು ಕಾಯುವದು ಎಂದು ದೈರ್ಯ ಹೇಳಿ ಮಹಾದೇವಪ್ಪನವರು ವಿಜಾಪುರಕ್ಕೆ ಹೋದರು. ಬಾಸ್ಕರಪ್ಪ ಮತ್ತು ಸದಾಶಿವ ಕೊರನ್ನವರ ಹೊಳೆಆಲೂರಿಗೆ ಬಂದರು. ಅಲ್ಲಿ ಒಬ್ಬ ಕಿರಾಣಿ ವ್ಯಾಪಾರಸ್ತನ ಮನೆಗೆ ಹೋದರು. ಪೋಲಿಸರು ಹುಲ್ಲೂರ ನಿಂಗನಗೌಡರನ್ನ ಬಂಧಿಸಿದ ಸುದ್ಧಿ ತಿಳಿಯಿತು. ಬಾಸ್ಕರ ಪರಾರಿಯಾಗಿ 'ಯಾದವಾಡ'ಕ್ಕೆ ಬಂದರು. ಅಲ್ಲಿಯೇ ಮಠದಲ್ಲಿ ವಸ್ತಿ ಮಾಡಿ ಮರುದಿನ ಮಹಾಲಿಂಗಪೂರಕ್ಕೆ ಹೋದನು. ಸದಾಶಿವ ಕೊರನ್ನವರ ಚೊಳಚಗುಡ್ಡಕ್ಕೆ

ತಿರುಗಿ ಬಂದನು. ಅಷ್ಟರಲ್ಲಿ ಪೋಲಿಸರು ಅವನ ಮನೆಗೆ ಬಂದು ಅಟಕು ಮಾಡಿ ಬಂಧಿಸಿ ಧಾರವಾಡ ಜೈಲಿನಲ್ಲಿರಿಸಿದರು. ಆರು ತಿಂಗಳ ಶಿಕ್ಷೆ ಅನುಭವಿಸಿದನು. ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ 'ಪಟ್ಟದಕಲ್ಲಿನಲ್ಲಿ ಮಹಾದೇವರನ್ನ' 'ಬಳ್ಳಾರಿ ಪೌಜದಾರನು' ಬಂಧಿಸಿ ವಿಜಾಪುರದ ಜೈಲಿಗೆ ಒಯ್ದ ಸುದ್ದಿ ಪ್ರಕಟವಾಗಿತ್ತು. ಈ ಸುದ್ದಿ ತಿಳಿದ ಇಂಚಗೇರಿ (ಮಹಾದೇವಪ್ಪನವರ) ಅನುಯಾಯಿಗಳು ಆಪ್ತರು ಗುರುಬಂಧದವರು ಸಭೆ ಮಾಡಿ ಚರ್ಚಿಸಿ, ಯಾವ ತಪ್ಪಿಲ್ಲದ ಅಟಕು ಮಾಡಿದ ನಮ್ಮ ಮುಖಂಡರನ್ನು ಬಿಡಬೇಕು, ಇಲ್ಲದಿದ್ದರೆ ಹೋರಾಟ ಮಾಡುವದಾಗಿ ಬೆದರಿಕೆ ಹಾಕಿದರು. ೩ ದಿನದಲ್ಲಿ ಜೈಲ ಒಡೆದು ಅವರನ್ನು ಒಯ್ಯುತ್ತೇವೆಂದು ಪತ್ರ ಬರೆದಿದ್ದರು. ಇವರ ಬೆದರಿಕೆಗೆ ಬೆದರದ ಸರಕಾರ ಕಿವಿ ಮುಚ್ಚಿಕೊಂಡಿತ್ತು. ಮತ್ತು ಶಿವಪ್ರಭುಗಳ ಕಡೆ ಹೋಗಿ ಮಹಾದೇವರಿಗೆ ಗುಂಡು, ಫಾಸಿ ಹಾಕುವ ಸುದ್ದಿ ಹೇಳಿ, ರಾಜಕಾರಣ ಯಾಕಬೇಕಿತ್ತು ಎಂದು ಚರ್ಚಿಸಿದರು. 'ಗುರುಬಲ ಅವ ಬಲ' ಎಂದು ಧೈರ್ಯ ಹೇಳಿದರು. ಜೈಲಿನಲ್ಲಿದ್ದ ಮಹಾದೇವರು ಅಕ್ಕ ನಾಗಮ್ಮನವರಿಗೆ ಪತ್ರ ಬರೆದು ಯೋಗಕ್ಷೇಮ ಕೇಳುತ್ತಿದ್ದರು. ಮತ್ತು ಧೈರ್ಯ ಹೇಳುತ್ತಿದ್ದರು. ಚಳುವಳಿಕಾರರು ಗುಂಪು ಮುಂದೆ ಜೈಲನ್ನು ಜಕಂಗೊಳಿಸಿ ಮಹಾದೇವರನ್ನು ಬಿಡಿಸಿಕೊಂಡು ಹೋದರು.

ವಿಜಾಪುರ ಜೈಲಿನಿಂದ ಬಿಡುಗಡೆಯಾದ ಮೇಲೆ 'ಹುಲಕೋಟಿ' ಬಂದೂಕ ಅಪಹರಣದ ಕೇಸಿನ ಮೆಲೆ ಹಿಡಿದು ಧಾರವಾಡ ಜೈಲಿಗೆ ತಂದರು. ಜೈಲಿನಲ್ಲಿದ್ದಾಗ ಬಾಸ್ಕರನಿಗೆ ಬೆಟ್ಟಿಗೆ ಕರೆದು, ಮಾರ್ಗದರ್ಶನ ಮಾಡಿದರು. ನಿಮ್ಮ ಮೇಲೆ ಸರಕಾರದ ಕಣ್ಣಿದೆ. ಕೃಷ್ಣಾ ಮತ್ತು ಘಟಪ್ರಭಾ ಹೊಳಿ ದಾಟಿರಿ, ಗಂಡಾಂತರ ಕಾದಿದೆ. ನಿಮ್ಮ ಗುಂಪಿನ ೧೭ ಜನರನ್ನು ಬೇರೆ ಬೇರೆ ಕಡೆ ಕಳುಹಿಸಿರಿ, 'ನೀನು ಉಳಿದರೆ ಉಳಿ ಸತ್ತರೆ ಸಾಯಿ' ಚಳುವಳಿ ಪ್ರಾರಂಭವಾಯಿತು. ಸ್ವಾರ್ಥ ಮುಖಂಡರು ಕಾರ್ಯಕರ್ತರಿಗೆ ಕಾರ್ಯ ಹಂಚಿಕೊಟ್ಟರು. ಕ್ರಾಂತಿ ಉಗ್ರ ರೂಪ ತಾಳಿತು. ಮುಖಂಡರು ತಮ್ಮ ಮೇಲೆ ಅಪವಾದ ಬರಬಾರದೆಂದು ಜೈಲಿಗೆ ಹಾಜರಾಗಿ ಬ್ರೆಡ್, ಬೆಣ್ಣೆ ತಿನ್ನುತ್ತಾ 'ಬ' ವರ್ಗದಲ್ಲಿದ್ದರು. ಕಾರ್ಯಕರ್ತರು ಪೋಲಿಸರ ಮನೆ ಜಪ್ತ – ಹಿಂಸೆ – ಅತ್ಯಾಚಾರ ನಡೆಸಿದರು. ಬಂಧಿತರಾದವರಿಗೆ ಬಟ್ಟೆ ಇರಲಿಲ್ಲ. ಬಾಸ್ಕರ ೧೫೦೦೦ ರೂ. ಕೂಡಿಸಿ ಕಾರ್ಯಕರ್ತರಿಗೆ ಹಂಚಿದರು. ೯ ಜನ ನಾವು ಎಲ್ಲಿಯೂ ಬಿಟ್ಟು ಹೋಗುವುದಿಲ್ಲ. ಸತ್ತರೆ ನಿಮ್ಮ ಜೊತೆ ಸಾಯುತ್ತೆವೆಂದು ಅಲ್ಲಿಯೇ ಉಳಿದರು. ರಾಮಪ್ಪ ಬೆಳಗಲಿ ಸೆರೆಸಿಕ್ಕರು. ೯ ಗುಂಪಿನ ಜನರ ೬೬ ಸ್ಥಳದ ಮೇಲೆ ಧಾರವಾಡ, ವಿಜಾಪುರ, ಬೆಳಗಾವಿ, ಕೊಲ್ಹಾಪುರ ಮೇಲೆ ಪೋಲಿಸರು ಮುತ್ತಿಗೆ ಹಾಕಿದರು. ಗೋಕಾಕ ತಾಲೂಕಿನ 'ದಂಡಾಪುರ' ತೋಟದಲ್ಲಿ ೧೭ ಮಂದಿಯನ್ನು ಚಳುವಳಿಕಾರರನ್ನು ಇಟ್ಟಿದ್ದರು. ಪೋಲಿಸ ಪಾರ್ಟಿ ಬಂದು ಕೂಡಲೆ ಹೊರಬಿದ್ದು ಗುಂಡಿನ ಚಕಮಕಿ ನಡೆಯಿತು. ೧೭ ಮಂದಿಗೂ ಏನು ಆಗಲಿಲ್ಲ. ಅಲ್ಲಿಂದ 'ರಾಯಭಾಗಕ್ಕೆ' ಬಂದರು. ಅಲ್ಲಿ ಪೋಲಿಸರು ನಿಂತಿದ್ದರು. ಚಳುವಳಿಕಾರರ ಗುಡ್ಡದ ಕಡೆ ನಡೆದರು. ಪೋಲಿಸರ ಕಣ್ಣು ಇವರ ಮೇಲೆ ಬಿದ್ದು ಗೋಳಿಬಾರ ಶುರುವಾಗಿತ್ತು. ಇದರಲ್ಲಿ ೧೫ ಜನ ಪೋಲಿಸರಲ್ಲಿ ೪ ಜನ ಸತ್ತುರು ಉಳಿದವರು ಮರಳಿ ಹೋದರು. ರೈಲ್ವೆ ಗಾಡಿ ಬಂದಿತು. ಅದರಲ್ಲಿ ಮಿಲ್ಟ್ರಿ ಸೈನ್ಯ ಇತ್ತು. ಸತ್ತವರಾರು ಎಂದು ಬಾಸ್ಕರ ವೇಷಬದಲಿಸಿಕೋಂಡು ನೋಡಿ ಬಂದ, ಅವರು ನಮ್ಮವರಲ್ಲ ಎಂದು 'ಪೆರೊಲ' ಮೇಲೆ ಬಿಡುಗಡೆಯಾಗಿ ಬಂದ ಮಹಾದೇವರಿಗೆ ಹೇಳಿದನು.

ಹೆಂಗಸರು – ಮಾಡಿದ ವಿಧ್ವಂಸಕ ಕಾರ್ಯ :

ಇಂಚಗೇರಿ ಮಠದ ಆಧ್ಯಾತ್ಮ ಸಂಪ್ರದಾಯ ಪ್ರಮುಖರಾದ ಮಹಾದೇವಪ್ಪನವರ ಅನುಯಾಯಿಗಳಲ್ಲಿ ಕೇವಲ ಗಂಡಸರಷ್ಟೇ ಇರಲಿಲ್ಲ. ಹೆಣ್ಣುಮಕ್ಕಳು ಇವರ ಅನುಯಾಯಿಗಳಿದ್ದರು. ಮಹಾದೇವರು ಹಾಕಿಕೊಟ್ಟ ಮಾರ್ಗದರ್ಶನದಲಿ ಚಾಚು ತಪ್ಪದೇ ನಡೆಯುತ್ತಿದ್ರು. ೧೯೪೨ ಚಳುವಳಿ ಪ್ರಾರಂಭವಾದಾಗ ತಮ್ಮೆಲ್ಲ ಗಂಡಸರು ಮನೆ ಬಿಟ್ಟು ಹೋದಾಗ ಮನೆತನದ ಜವಾಬ್ದಾರಿಯನ್ನು ಹೊತ್ತು ನಡೆಸಿಕೊಂಡು ಹೋಗುತ್ತಿದ್ದರು. ಮತ್ತು ಗಂಡಸರಿಗೆ ಸರಿಸಮನಾಗಿ ನಿಂತು ಭಾರತದೇಶದ ಬಂಧ ಮುಕ್ತಕ್ಕಾಗಿ ಜೀವನದ ಹಂಗು ತೊರೆದು ಮಹಾದೇವರ ಮಾರ್ಗದರ್ಶನದಲ್ಲಿ ಚಳುವಳಿಯಲ್ಲಿ ಪಾಲ್ಗೊಂಡು ಸರಕಾರಿ ಸಂಪತ್ತನ್ನು ಧ್ವಂಸಗೊಳಿಸಿದ ಒಂದು ನಿದರ್ಶನವನ್ನಿಲ್ಲಿ ಕೊಟ್ಟದ್ದೇನೆ.

೧೯೪೨–೪೩ ರಲ್ಲಿ 'ಗಿರಿಜವ್ವ ಅಂಗಡಿ, ಮಹಾದೇವಿ ಮಸಳಿ, ವೀರಮ್ಮ ಶಿಹಟ್ಟಿಮಠ'[೧] ಇವರಿಗೆ ದೇವರು ಪ್ಲಾನ ಹಾಕಿಕೊಡುತ್ತಿದ್ದರು. ಅವರು ಹೇಳಿದಂತೆ ಮಾಡುವುದೇ ನಮ್ಮ ಕೆಲಸ, ತಾರ ತಂತಿ ಕತ್ತರಿಸುವುದು, ಕಂಬ ಕಿತ್ತುವುದು ಮತ್ತು ರೈಲು ಕೆಡುವುದು.

ಗಂಡಸರು ಮಾಡುವ ಕೆಲಸವನ್ನು ಹೆಣ್ಣು ಮಕ್ಕಳು ಮಾಡಿ ತೋರಿಸಿದ್ದನ್ನು ಹೆಣ್ಣು ಅಬಲೆ ಅಲ್ಲ ಸಬಲೆ, ಅವಳು ಮನಸ್ಸು ಮಾಡಿದರೆ ಯುದ್ಧ ಮಾಡಬಲ್ಲಳು ಎನ್ನುವದಕ್ಕೆ ಇದೊಂದು ನಿದರ್ಶನ. ಪಂಡರಪುರ ದಾರಿಯಲ್ಲಿ ಮಗಳವೇಡಿ, ಏಕಲಾಪುರ, ಸಿದ್ದವಾಡಿ ಮಲ್ಲವಾಡಿಯಲ್ಲಿಯ ಕಂಬಗಳನ್ನು ಏರಿ ಟೆಲಿಪೋನ ತಂತಿ ಕತ್ತರಿಸಿದರು. ಸೋಲ್ಲಾಪುರದ ಮಾರ್ಗದಲ್ಲಿ ನಿಂಬಾಳ ರೈಲುನಿಲ್ದಾನದಲ್ಲಿ ಬೋಲ್ಟ ತೆಗೆದು, ಹಳಿ ಬಿಡಿಸಿ ಮರೆಯಲ್ಲಿ ನಿಂತು ಗಿಡವೇರಿ ಕುಳಿತು ಗೂಡ್ಸ ಗಾಡಿಯನ್ನು ಕೆಡವಿದರು. ಆದರೆ ಪ್ಯಾಸಂಜರ ಗಾಡಿಯನ್ನು ಕೆಡವಿದರೆ ನಮ್ಮ ಮಂದಿಯದ ಪ್ರಾಣ ಹಾನಿ ಎಂದು ಮಾನವೀಯತೆಯನ್ನು ಮೆರೆದರು.

ಹಳ್ಳೂರ ಪೋಲೀಸ ಸ್ಟೇಶನಕ್ಕೆ ಲಗ್ಗೆ ಇಟ್ಟಿದ್ದು :

ಸ್ವಾತಂತ್ರ್ಯ ಹೋರಾಟದಲ್ಲಿ ಪೋಲಿಸರ ಕೈವಶವಾಗಿ ಜೈಲಿನಲ್ಲಿದ್ದವರನ್ನು ಹೇಗಾದರೂ ಮಾಡಿ ಬಿಡಿಸಿಕೊಂಡು ಬರುತ್ತಿದ್ದರು. ಗೋಕಾಕ ತಾಲೂಕ ಹಳ್ಳೂರಿನಲ್ಲಿ ನಡೆದ ಒಂದು ಘಟನೆ. ಚಳುವಳಿಯಲ್ಲಿ ಪಾಲ್ಗೊಂಡ ಚಳುವಳಿಕಾರನಾದ ಸತ್ಯಪ್ಪ ಚನಾಳ, ಕಪ್ಪಲಗುದ್ದಿಯ ಸಿದ್ದೇಶ್ವರ ಬಡಿಗೇರ ಅವರನ್ನು ಹಳ್ಳೂಳ ಪೋಲಿಸ ಸ್ಟೇಶನದಲ್ಲಿ ಬಂದಿಸಿ ಜೈಲಿಗೆ ಹಾಕಲಾಗಿತ್ತು. ಈ ಸುದ್ಧಿಯನ್ನು ಕೇಳಿದ ಮಹಾದೇವಪ್ಪನವರು ಮತ್ತು ರಾಯಪ್ಪ ಬೆಳಗಲಿ ಸೇರಿ ಪೋಲಿಸರ ಮೇಲೆ ದಾಳಿ ಮಾಡಿದರು. ಅಲ್ಲಿ ಅಪ್ಪಾಸಾಹೇಬ ಕಾಕತಿ (ಹೆಡ್ಡಕಾನ್‌ಸ್ಟೇಬಲ್) 'ಅಕಬರ', (ಕಾನ್ಸಟೇಬಲ್) ಎಂಬುವರು ಕಾವಲಿದ್ದರು. ಚಳುವಳಿಕಾರರನ್ನು ಚದುರಿಸಲು ಪೋಲಿಸರು ಗುಂಡು ಹಾರಿಸತೊಡಗಿದರು. ಇವರ ಗುಂಡಿಗೆ

೧. ಮಾಧವ ಜೀವನ ದರ್ಶನ – ಭಾಗ ೧ : ಸಂಪ ಮಹಲಿಂಗಮರಣಿ – ಗಿರೀಶ ಪ್ರಕಾಶನ, ಇಂಚಗೇರಿಮಠ.
ನಮ್ಮ ಕಣ್ಮುಂದೆ ಎಷ್ಟೆಲ್ಲಾ ಮಾಡಿ ಬಿಟ್ಟು ಹೋದರು – ದೇವರೆಂದು ನಂಬಲಿರಲಾದೀತೆ.

ಬೆಚ್ಚದ ಚಳುವಳಿಕಾರರ ಗುಂಪು ಜೈಲಿನ ಕಿಡಕಿ ಮುರಿದು ಒಳನುಗ್ಗಿದ್ದರು. ಕಾವಲಿದ್ದ ಪೋಲಿಸ ಕಾನ್ಸಟೇಬಲ್ಲಿನ ಮೂಗು ಕೊಯ್ದು[೧] ಬಂದನದಲ್ಲಿದ್ದವರನ್ನು ಬಿಡಿಸಿಕೊಂಡು ಬಂದರು. ಅನಂತರ ಚಳುವಳಿಕಾರರ ನೆನಪಿಗಾಗಿ ಮುಗುಕೊಯ್ಯುವ ಶಿಕ್ಷೆಯನ್ನು ವಿಧಿಸತೊಡಗಿದರು.

ಕೊಣ್ಣೂರ ದೇಸಾಯಿರ (ವಾಡೆದ) ಬಂದೂಕ ಅಪಹರಣ :

೧೯೪೨ರ ಚಳುವಳಿ ತಾರಕಕ್ಕೇರಿತು. ಮಹಾದೇವರ ಒಂದು ತಂಡ ಕೊಣ್ಣೂರ ದೇಸಾಯಿರ ಮನೆಯಲ್ಲಿರುವ ಬಂದೂಕ ಅಪಹರಣದ ಕಾರ್ಯಾಚರಣೆಯಲ್ಲಿ ತೊಡಗಿತು. ಇದರ ಮುಖಂಡತ್ವವನ್ನು ಮಹಾದೇವಪ್ಪನವರು ವಹಿಸಿದ್ದರು. ಜೊತೆಗೆ ರಾಮಪ್ಪ ಬೆಳಗಲಿಯವರು ಇದ್ದರು.

ದೇಸಾಯರ ವಾಡೆಯೆಂದರೆ ಭವ್ಯವಾದ, ಸುಂದರವಾದ ಕಟ್ಟಡ. ಅದರ ನಾಲ್ಕು ದಿಕ್ಕಿಗೆ ಒಂದೊಂದು ದ್ವಾರಭಾಗಿಲು ಮಧ್ಯರಾತ್ರಿ ಸಮಯ. ಮಹಾದೇವಪ್ಪನವರು ಟೋಳಿಯವರು ಊರ ಅಗಸಿ ಹತ್ತಿರ ಒಬ್ಬ ಅಗಸಿಯಿಂದ ಒಂದು ಪರ್ಲಾಂಗ ಮುಂದಕ್ಕೆ ಹೋದರೆ ಇನ್ನೊಂದು ಅಗಸಿಬಾಕಲು ಅದನ್ನು ದಾಟಿ ಅರ್ಧಪರ್ಲಾಂಗದಷ್ಟು ಹೋದರೆ ವಾಡೆಯ ಬಾಗಿಲು ಅಲ್ಲಿ ಇನ್ನೊಬ್ಬ ಬಂದೂಕದಾರಿ ನಿಂತನು. ಬಾಗಿಲು ದಾಟಿ ಒಳಗೆ ಮತ್ತೊಬ್ಬ ಬಂದೂಕ ದಾರಿ ಹುಸಿಯನ್ನು ದಾಟಿ ಪಟಾಂಗನದಾಚೆ ಸದರ ಕಟ್ಟೆಯ ಹತ್ತಿರ ಇನ್ನೊಬ್ಬ ಬಂದೂಕ ದಾರಿ ನಿಂತುಕೊಂಡನು. ಹುಸಿಯನ್ನು ದಾಟಿ ಪಟಾಂಗನದಾಚೆಯ ಸದರ ಕಟ್ಟೆಯನ್ನು ಹತ್ತಿ ಬಾಗಿಲು ನೂಕಿದರು. ದೇಶಪ್ರೇಮ ಹಾಗೂ ದೇಸಾರ ದುರಾಡಳಿತ ಬಗ್ಗೆ ತಿಳಿ ಹೇಳಿ ಅವನ ಮನವೊಲಿಸಿಕೊಂಡು ಬಾಗಿಲವನ್ನು ಹಾಕದಿರಲು ಹೇಳಿದ್ದರು. ಅವನು ಕೊಂಡಿ ಹಾಕಿರಲಿಲ್ಲ. ಒಳಗಡೆ ನಾಲ್ವರು ಹೋದರು. ಒಳಗಿದ್ದ ಜಿನ್ನಮೆಟ್ಟಲು ಇಬ್ಬರು ಹತ್ತಿದರು. ಇಬ್ಬರು ಕೆಳಗೆ ನಿಂತರು. ಅಟ್ಟದ ಮೇಲೆ ದೇಸಾಯಿಯವರು ಮಲಗುವ ಕೋಣೆ ಅಲ್ಲಿ ಅವರು ಮಲಗಿದ್ದರು. ಮಂಚದ ಎದುರಿಗಿನ ಗೋಡೆಯ ಎರಡು ಗೂಟಕ್ಕೆ ಎರಡು ಬಂದೂಕುಗಳನ್ನು ಜೋತು ಹಾಕಿದ್ದರು. ಇನ್ನೊಂದು ಗೂಟಕ್ಕೆ ಕಾಡತೂಸುಗಳ ಪಟ್ಟಿಗಳು ಜೋತು ಬಿದ್ದಿದ್ದವು. ಇವುಗಳೆಲ್ಲವುಗಳನ್ನು ಒಬ್ಬ ಹೆಗಲಿಗೆ ಹಾಕಿಕೊಂಡನು. ಇನ್ನೊಬ್ಬ ಮಂಚದ ಕಡೆ ಗುರಿ ಇಟ್ಟು ಬಂದೂಕು ಹಿಡಿದು ನಿಂತಿದ್ದ. ಹೆಗಲಿಗೆ ಹಾಕಿಕೊಂಡವ ಕೆಳಗೆ ಇಳಿದ ನಂತರ ಇನ್ನೊಬ್ಬ ಮಂಚದ ಕಡೆಗೆ ಗುರಿ ಹಿಡಿದು ಕೆಳಗೆ ಇಳಿದನು. ದೇಸಾಯವರು ಎಚ್ಚರಿದ್ದರು. ಆದರೆ ಪ್ರತಿಭಟಿಸುವ ಹಾಗಿರಲಿಲ್ಲ. ಜೀವಕ್ಕೆ ಹೆದರಿ ಸುಮ್ಮನೆ ಬಿದ್ದುಕೊಂಡಿದ್ದರು.

ಕೆಳಗೆ ಇಳಿದು ನಾಲ್ವರು ಕೂಡಿ ಸದರ ಕಟ್ಟೆಯನ್ನು ಇಳಿದು ಪಟಾಂಗಣ ದಾಟಿದರು. ಹಿಂದೆ ಬಂದೂಕು ಗುರಿ ಹಿಡಿದು ಬರುವವ ಎಲ್ಲರನ್ನು ದಾಟಿಸಿದ ಮೇಲೆ ಅವನು ಹೊರಡುವುದು ಎಂದು ನಿರ್ಧರಿಸಲಾಗಿತ್ತು. ಎಲ್ಲರೂ ದಾಟಿ ಮುಂದೆ ಹೋದದ್ದು ಖಚಿತವಾದ ಮೇಲೆ ಬಂದೂಕ ಹಿಡಿದ ಕೈತಿರುಗಿಸಿದನು. ಅದೇ ವೇಳೆಗೆ ಅಲ್ಲಿ ಅಡಗಿ ಕುಳಿತವನೊಬ್ಬ ಓಡಿ ಬಂದು ಅವನನ್ನು ತೆಕ್ಕೆಯಲ್ಲಿ

೧. ಕರ್ಮವೀರ : ೦೫-೦೬-೧೯೪೪

ಗಟ್ಟಿಯಾಗಿ ಅಮುಕಿ ಹಿಡಿದನು. ಜೋರಾಗಿ ಕೂಗತೊಡಗಿದನು. ಜೊತೆಗಾರರು ಮುಂದೆ ಹೋಗಿದ್ದರು. ನಂತರ ಇವನ ಚೀರಾಟಕ್ಕೆ ಊರಲ್ಲಿದ್ದ ಜನರೆಲ್ಲರೂ ಎದ್ದೆದ್ದು ಬರತೊಡಗಿದರು. ತೊಳತೆಕ್ಕೆಯಲ್ಲಿ ಸಿಕ್ಕವನು ಬಿಡು ಬಿಡು ಎಲ್ಲರೂ ಬಂದರೆ ನನ್ನನ್ನು ಉಳಿಸುವುದಿಲ್ಲ. 'ನಾವೇನೋ ಸಾಯಾಕ ತಯಾರಾಗಿ ಬಂದೇವೂ. ಸತ್ರ ಪೋಲಿಸರ ಕೈಯಾಗ ಸಾಯಬೇಕು, ದೇಶದ ಬಿಡುಗಡೆಬೇಕೆಂದವ ನಾನು ನೀನು ದೇಸಾರ ಮನ್ಯಾಗಿನ ಗಂಟನ್ನ ಕಾಯುವ ನಾಯಿ. ಸುಮ್ಮನೆ ನನ್ನನ್ನು ಬಿಟ್ಟುಬಿಡು. ಇಲ್ಲವಾದರೆ ನಿನ್ನನ್ನು ಕೊಂದು ಮುಂದೆ ಹೋಗುತ್ತೇನೆ ನೋಡು. ನಿನ್ನನ್ನು ಬಿಡುವದಿಲ್ಲ, ನಮ್ಮವರು ಬಂದುಬಿಡ್ತಾರೆ. ನಾವು ನಿಮ್ಮಂಥವರನ್ನು ಕಂಡು ಹಿಡಿಯಲಿಕ್ಕೆ ಬಂದ ಪೋಲಿಸರು, ನೀನ್ನೊಬ್ಬನ ಇದ್ದಿ ಬಿಟ್ಟುಬಿಡು ಇಲ್ಲವಾದರೆ ನಿನ್ನನ್ನು ಹೊಡೆತೀನಿ ನೋಡು ಎಂದನು. ಗುಪ್ತಚರದ ಪೋಲಿಸ ಬಿಡಲಿಲ್ಲ. ಸಿಕ್ಕಿ ಹಾಕಿಕೊಂಡು ಬಿದ್ದಿದ್ದ ಚಳುವಳಿಕಾರ ಪಿಸ್ತೂಲನ್ನು ತೆಗೆದು ಡಂ. ಡಂ. ಎಂದು ಗುಂಡು ಹಾರಿಸಿದನು. ಸೆರೆಯಿಂದ ಬಿಡಿಸಿಕೊಂಡು ಪೋಲಿಸರ ಬರುವದರೊಳಗಾಗಿ ಅಗಸಿಬಾಗಿಲ ದಾಟಿ ಓಡಿ ಹೋಗಿದ್ದನು. ಈ ರೀತಿಯಾಗಿ ಕೆಲವು ಸಲ ಅನಿವಾರ್ಯವಾಗಿ ಹಿಂಸೆ ನಡೆದಿದ್ದವುಂಟು.

ಸ್ವಾತಂತ್ರ್ಯ ನಂತರ ಕಾಂಗ್ರೇಸ್ಸಿಗರ ಕಾಟ :

ಸ್ವಾತಂತ್ರ್ಯಪೂರ್ವ ಕಾಂಗ್ರೇಸ್ಸಿಗರು ಮುರುಗೋಡ ಮಹಾದೇವಪ್ಪನವರ ಜೊತೆ ನಿಕಟವಾದ ಸಂಬಂಧವನ್ನು ಹೊಂದಿದ್ದರು. ಅನಂತರ ಅವರ ಏಳ್ಗೆಯನ್ನು ಸಹಿಸಲಿಲ್ಲ. ಇವನನ್ನು ಮುಂದೆ ಬಿಟ್ಟರೆ ನಮಗೆ ಉಳಿಗಾಲವಿಲ್ಲ ಎಂದು ಭಾವಿಸಿದರು. ಯಾರದೋ ತಪನ್ನು ಮಹಾದೇವಪ್ಪನವರ ಮೇಲೆ ಹಾಕಿ ಬಿಡುತ್ತಿದ್ದರು. ದೇಶಾಭಿಮಾನದ ಹೆಸರಿನಲ್ಲಿ ಸ್ವಾರ್ಥ ಸಾಧಿಸಿಕೊಳ್ಳುವ ಸಮಯ ಸಾಧಕರಿಂದ ನಡೆದ ಅನೇಕ ತಪ್ಪನ್ನು ಇವರು ಹೊರಬೇಕಾಯಿತು. ಅಂತದೊಂದು ಪ್ರಸಂಗ.

ಬ್ರಿಟಿಷರ ಬಾಯಿ ಎಂಜಲಕ್ಕೆ ಕೈ ಒಡ್ಡುವ ದೇಶದ್ರೋಹಿ 'ಚನಾಲ ಶಾಸಪ್ಪ' ಶ್ರೀಮಂತ ಕುಟುಂಬದವರು, ದೇಶಾಭಿಮಾನದ ಹೆಸರಿನಲ್ಲಿ ಸ್ವಾರ್ಥಸಾಧಿಸಿಕೊಳ್ಳುವವರಲ್ಲಿ 'ವೆಂಕಣ್ಣ ಮಾಸ್ತರ ಖಾಸನೀಸ' ಪ್ರಾಥಮಿಕ ಶಾಲೆಯ ಶಿಕ್ಷಕ, ಶಾಸಪ್ಪ ಸಾಹುಕಾರರ ಮಗಳು ಸುಂದರಿ, ಅವಳ ಮೇಲೆ ಕಣ್ಣಿಟ್ಟು ಪಾತಿವ್ರತ್ಯ ಭಂಗಗೊಳಿಸಿದ ವೆಂಕಣ್ಣ ಮಾಸ್ತರ ಮೇಲೆ ಚನಾಳ ಶಾಸಪ್ಪನವರು ಕಣ್ಣಿಟ್ಟರು. ಅದನ್ನು ತಿಳಿದ ವೆಂಕಣ್ಣ ಮಾಸ್ತರರು ಚಳುವಳಿಯ ಮುಖಂಡರಾದ ಮಹಾದೇವಪ್ಪನವರ ಆಶ್ರಯ ಪಡೆದು 'ಶಾಸಪ್ಪ ಸಾಹುಕಾರರ' ಸೊಕ್ಕಡಗಬೇಕಾದರೆ ಅವರ ಮನೆ ಸುಟ್ಟು ಹಾಕೋಣವೆಂದು ಪಿತೂರಿಗಾರರ ಸಹಾಯದಿಂದ ಸಿದ್ದನಾದ. ಮಹಾದೇವಪ್ಪನವರು ಬೇಡಾ! ದೇಶದಿಂದ ಬ್ರಿಟಿಷರನ್ನು ಹೊರ ಹಾಕುವಾಗ ನಮ್ಮ ಜನರಿಗೆ ಅನ್ಯಾಯ, ಹಿಂಸೆ ತಕ್ಕುದ್ದಲ್ಲ. ವೈಯಕ್ತಿಕ ದ್ವೇಷವನ್ನು ರಾಜಕೀಯಕ್ಕೆ ತರಬೇಡಿ, ನಮ್ಮ ವೈಯಕ್ತಿಕತೆಯ ದ್ವೇಷ ಮರೆತು ದೇಶಕ್ಕಾಗಿ ಹೋರಾಡುವುದು ನಮ್ಮ ಧ್ಯೇಯ ಎಂದರು. ಆ ಸಮಯ ಸುಮ್ಮನಿದ್ದಂತೆ ಮಾಡಿ, ಮಹಾದೇವಪ್ಪನವರು ಇನ್ನೊಂದು ಕಡೆ ಹೋದ ಸಮಯ ನೋಡಿ ಅವರ ತಂಡದ ಕೆಲವರ ತಲೆ ತುಂಬಿ ಸಾರೋಡೆಯವರ ಮನೆಗೆ ಬೆಂಕಿ ಹಚ್ಚಿ ೨ ಲಕ್ಷ ರೂಪಾಯಿ ಆಸ್ತಿ ನಷ್ಟಮಾಡಿದನು. ಅದಕ್ಕೆ ಮಹಾದೇವಪ್ಪನವರು ತಂಡ ಮಾಡಿದ ದುಷ್ಕೃತ್ಯವೆಂದೇ

ಹೆಸರು ಬಂದಿತೇ ಹೊರತು ವೆಂಕಣ್ಣ ಮಾಸ್ತರರ ಹೆಸರು ಬರಲಿಲ್ಲ. ಇಂಥ ಅನೇಕ ಅಪರಾಧಗಳನ್ನು 'ದೇಶದ ಸ್ವಾತಂತ್ರ್ಯಕ್ಕಾಗಿ ಮಹಾದೇವಪ್ಪನವರು ಹೊರಬೇಕಾಯಿತು'[೧].

ಸ್ವಾತಂತ್ರ್ಯ ಸಿಗುವವರೆಗೆ ಮಹಾದೇವಪ್ಪನವರು ಕಾಂಗ್ರೆಸ್ಸಿನವರಿಗೆ ಚೊಚ್ಚಲ ಮಗನಾಗಿದ್ದನು. ತಮ್ಮ ಎಲ್ಲ ಕೆಲಸ ಕಾರ್ಯಮುಗಿದ ಮೇಲೆ ಮಲತಾಯಿ ಮಗನಾಗಿ ಬಿಟ್ಟನು. ಅವರಿಗೆ ಯಾವ ಅವಕಾಶ ಕೊಡದೆ ತಿರಸ್ಕಾರದಿಂದ ನೋಡತೊಡಗಿದರು. ಇವರಿಗೆ ವೃತ್ತ ಪತ್ರಿಕೆಗಳ ಮೂಲಕ ಅಪಪ್ರಚಾರ ಮಾಡಸತೊಡಗಿದರು. ಪತ್ರಿಕೆಗಳ ಸಂಪಾದಕರು ನಿಜಸಂಗತಿಯನ್ನು ಹೊರಹಾಕದೆ ಸುಳ್ಳು ಸುದ್ಧಿ ಮಾಡಿ ಬರೆಯುತ್ತಿದ್ದರು. ಕೆಲ ಸಂದರ್ಭದಲ್ಲಿ 'ಸಂಯುಕ್ತ ಕರ್ನಾಟಕ' ಪತ್ರಿಕೆಯ 'ಲೋಕ ಶಿಕ್ಷಣ' ಟ್ರಸ್ಟ ಆರ್ಥಿಕ ತೊಂದರೆಯಿಂದ ಮುಚ್ಚುವ ಸ್ಥಿತಿಯಲ್ಲಿತ್ತು.[೨] ಇದನ್ನು ತಿಳಿದ ಮುರಗೋಡ ಮಹಾದೇವಪ್ಪನವರು ಸಹಸ್ರಾರು (೧೦೦೦) ರೂಪಾಯಿ ಧನಸಹಾಯ ಮಾಡಿದ್ದರಿಂದ ಮತ್ತೆ ಕಣ್ಣು ಬಿಡುವಂತಾಯಿತು. ಉಪಕಾರ ಮರೆತ ಕೃತಘ್ನರಿಗೆ ಇದೊಂದು ನಿದರ್ಶನ.

ಮಹಾದೇವಪ್ಪನವರು ನಾಡ ಪಿಸ್ತೂಲನ್ನು ಹೊಂದಿದ್ದಾನೆಂದು ಕೇಸು ದಾಖಲಿಸಿ, ಅದರ ತಪಾಸನೆಗಾಗಿ 'ಕಲ್ಲೂರ' ಪೌಜದಾರರನ್ನು ನೇಮಿಸಿದರು. ಇಂಚಗೇರಿಗೆ ಬಂದು ಮಹಾದೇವರನ್ನು ಬಡೆದು, ಹೊಡೆದು, ಬಂದೂಕನ್ನು ಕೊಡಲು ಕಾಟಕೊಡತಿದ್ದನು. ಅದರಿಂದೇನು ಪ್ರಯೋಜನವಾಗದಾಗ ತಿರುಗಿ ಬರುವೆನೆಂದು ಪೋಲಿಸರಿಗೆ ಹೇಳಿ ಹೋದವ, ಕಾಲು ಮುರಿದುಕೊಂಡು, 'ಲಕವಾ' ಹೊಡೆಯಿತು. ಆಗ ತಪ್ಪಿನ ಅರಿವಾಗಿ ಪ್ರಾಯಶ್ಚಿತಗೊಂಡನು. ದೇವರ ಮೇಲೆ ಅನ್ಯಾಯದಿಂದ ಅಸಭ್ಯವಾಗಿ ವರ್ತಿಸಿದ್ದರಿಂದ ರವರವ ನರಕ ಯಾತನೆ ತಪ್ಪಿದ್ದಲ್ಲ ಎಂಬುದು ಸಾಬಿತಾಯಿತು.

ಅನಂತರ ಬಂದೂಕ ತಪಾಸನೆಗಾಗಿ ಮತ್ತೊಬ್ಬ ಕಟುಕ ಪೌಜುದಾರನಾದ 'ಹಸಬಿ'ಯನ್ನು ನೇಮಿಸಿದರು. ಈತನು ಮಹಾದೇವರ ಜೊತೆ ಅಸಬ್ಯವಾಗಿ ವರ್ತಿಸಿದ್ದರ ಪ್ರತಿಫಲವಾಗಿ ಎಲ್ಲಾ ರೀತಿಯ ರೋಗಗಳಿಗೆ ಬಲಿಯಾಗಿ ಸತ್ತುಹೋದನು. ಹೀಗೆ ಕಾಂಗ್ರೇಸ್ಸ ಮಂತ್ರಿಗಳು, ಎಂ.ಎಲ್.ಎ ಮತ್ತು ಎಂ.ಪಿ.ಗಳು ಅಲ್ಲಸಲ್ಲದ ಖಟ್ಲೆಗಳನ್ನು ಹಾಕಿಸಿದರು. ಮರಾಠಿ ಮತ್ತು ಬ್ರಾಹ್ಮನ ಸಂಸ್ಥಾನಿಕರಿಗೆ ಮಹಾದೇವಪ್ಪನವರ ಮೇಲೆ ದ್ವೇಷ ಹೊಗೆಯಾಡುತ್ತಿತ್ತು. ಬ್ರಿಟಿಷ ಸರಕಾರಕ್ಕೆ ಅಂಜದ ಮಹಾದೇವಪ್ಪ ಇಂತ ಹೀನ ಜನರಿಗೆ ಎಂದಾದರೂ ಅಂಜುವರೇ ಮಹಾರಾಷ್ಟ್ರ ಸರಕಾರ ಮತ್ತು ಕಾಂಗ್ರೇಸಿಗರು ಸುಳ್ಳ ಕೇಸಗಳನ್ನು ಹಾಕುವುದರ ಉದ್ದೇಶ, ಮುಂಬರುವ ಚುನಾವಣೆಯಲ್ಲಿ ಎಲೆಕ್ಷನಕ್ಕೆ ನಿಲ್ಲಬಾರದೆಂದು ಹಾಗೂ ಗೆಲ್ಲಬಾರದೆಂದು ಮರೆಮಾಚಿ ಜೈಲಿಗೆ ಕಳಿಸಿ ಶಿಕ್ಷೆಗೆ ಗುರಿ ಮಾಡಿದರು. ಚುನಾವಣೆಗೆ ನಿಲ್ಲಲು ಅನರ್ಹನಾಗುವನೆಂದು ಒಳಸಂಚು ನಡೆಸಿದರು. ಇದರಲ್ಲಿ ಬಿ.ಡಿ. ಜತ್ತಿಯವರ ಕೈವಾಡವೂ ಇತ್ತು[೩]. ಏಕೆಂದರೆ ಮುಂಬರುವ ಎಲೆಕ್ಷನದಲ್ಲಿ ಜಮಖಂಡಿ ಭಾಗಕ್ಕೆ ನನ್ನ ಎದುರಾಳಿಯಾಗಿ ಸ್ಪರ್ಧಿಸಿದರೆ

---

೧. ದೇವಮಾನವ ಪುಟಸಂಚಿಕೆ : (ಹಸ್ತಪ್ರತಿ) : ಡಾ॥ ಎಸ್. ಪಿ. ಚವಲಾರ

೨. ಮಹಾದೇವರು ಮಾಡಿದ ಉಪಕಾರ ಮರೆತ ಪುರೋಹಿತ ಶಾಹಿವರ್ಗ ಲೇಖನ : ಪ್ರಕಾಶನ : ಗಿರೀಶ ಪ್ರಕಾಶನ, ಶ್ರೀಕ್ಷೇತ್ರ ಇಂಚಗೇರಿಮಠ. ಸಂಪಾದಕರು : ಮಹಲಿಂಗ ಮಂಗಿ – ೧೯೮೩.

೩. ಮಹಾದೇವರು ಮಾಡಿದ ಉಪಕಾರ ಮರೆತ ಪುರೋಹಿತಶಾಹಿ ವರ್ಗ ಲೇಖನ : ಪ್ರಕಾಶಕರು – ಗಿರೀಶ ಪ್ರಕಾಶನ, ಶ್ರೀಕ್ಷೇತ್ರ ಇಂಚಗೇರಿಮಠ, ಸಂಪಾದಕರು : ಮಹಾಲಿಂಗ ಮಂಗಿ.

ನಮಗೆ ಉಳಿಗಾಲವಿಲ್ಲವೆಂದು ಹೊಟ್ಟೆಕಿಚ್ಚು ಪಟ್ಟು ಇಲ್ಲದ ತೊಂದರೆಗಳನ್ನು ಕೊಡುತ್ತಾ ಬಂದರು. ಸಂಯಮದಿಂದ ಸಹಿಸಿಕೊಂಡು ಈ ಪ್ರಸಂಗವು 'ತಾಳಿದವರು ಬಾಳಿಯಾನು' ಎನ್ನುವ ಗಾದೆಯನ್ನು ನೆನೆಪಿಗೆ ತಾರದೆ ಇರಲಿಲ್ಲ. ಇಂಥ ನಿದರ್ಶನಗಳು ಅನೇಕ ಇವೆ. ನಾನಿಲ್ಲ ಒಂದೆರಡನ್ನು ಪ್ರಸ್ಥಾಪಿಸಿದ್ದೇನೆ.

೧) ಮಹಾದೇವಪ್ಪನವರ ಮೇಲೆ ಕಕಮರಿಯ ಕೇಸು ಹಾಕಿದ್ದು :

ಕಕಮರಿಯಲ್ಲಿ ಗಂಗಪ್ಪ ಬೀಳೂರ ಎಂಬವನಿಗೆ ಮಕ್ಕಳಿರಲಿಲ್ಲ. ಹೆಂಡತಿ ತೀರಿಕೊಂಡಿದ್ದಳು. ವಯಸ್ಸಾಗಿತ್ತು ಹಾಗೂ ಆಸ್ತಿ ಬಹಳಿತ್ತು. ಗಂಗಪ್ಪನಿಗೆ ಒಬ್ಬ ತಮ್ಮನಿದ್ದ ಅವನಿಗೆ ನಾಲ್ಕು (೪) ಜನ ಮಕ್ಕಳು, ಹಿರಿಯವ ನಿಂಗಪ್ಪ, ಎರಡನೆಯವನು ಸಿದರಾಮಪ್ಪ, ಮೂರನೆಯ ಗುರಬಸಪ್ಪ, ನಾಲ್ಕನೆಯವ ಶಿವರುದ್ರಪ್ಪ, ನಿಂಗಪ್ಪನಿಗೆ ದುರಾಸೆ ಹುಟ್ಟಿ ನಾಲ್ಕು ಪಾಲು ಸಮನಾಗಿ ಹಂಚಿಹೋಗಬೇಕಿದ್ದ, ದೊಡ್ಡಪ್ಪನ ಆಸ್ತಿಯನ್ನು ಮೊಸತನದಿಂದ ತನ್ನ ಹೆಸರಲೆ ಬರೆಯಿಸಿಕೊಂಡಿದ್ದನು. ಈ ಸುದ್ದಿ ಇನ್ನುಳಿದ ಸಹೋದರರಿಗೆ ತಿಳಿಯಿತು. ದೊಡ್ಡಪ್ಪನನ್ನು ವಿಚಾರಿಸಿದರು. ದವಾಖಾನೆಗೆ ಅಂಥ ಕರಕೊಂಡು ಹೋಗಿ ಅಂಜಿಕೆ ಹಾಕಿ ಬರೆಸಿಕೊಂಡಿದ್ದನ್ನು ಹೇಳಿದನು. ಊರಿನ ಹಿರಿಯರ ಸಮ್ಮುಖದಲ್ಲಿ ನ್ಯಾಯ ಬಗೆಹರಿಸಿದರು. ನಿಂಗಪ್ಪ ಒಪ್ಪಲಿಲ್ಲ, ಈ ನ್ಯಾಯ ಮುರಗೋಡ ಮಹಾದೇವಪ್ಪನವರ ಕಡೆ ಹೋದಾಗ ನಿಂಗಪ್ಪನನ್ನು ಕರೆದು ಬುದ್ದಿ ಮಾತು ಹೇಳಿ ಇನ್ನುಳಿದವರಿಗೆ ಪಾಲಹಂಚಿಕೊಟ್ಟರು. ತಮ್ಮ ತಮ್ಮ ಹೊಲ ಉತ್ತಿ-ಬಿತ್ತಿದ್ದರು. ಈ ಸುದ್ದಿ ನಿಂಗಪ್ಪನ ಮಾವ ಭೀಮಪ್ಪನಿಗೆ ತಲುಪಿತು. ಭೀಮಪ್ಪನ ಪಿತೂರಿಯಿಂದ ಬಿತ್ತಿದ ಹೋಲದ ಬೆಳೆಯನ್ನು ರಾಸಿ ಮಾಡಿಕೊಂಡು ತಂದು ಹಚಕೊಂಡನು. ಉಮರಾಣಿಯ ರಾವಜಪ್ಪ ನಿಂಗಪ್ಪನಿಗೆ ಕುಮ್ಮಕ್ಕು ಕೊಡುತ್ತಿದ್ದನು. ಮಹಾದೇವಪ್ಪನವರ ಮಾತಿಗೆ ಮೀರಿ ವರ್ತಿಸಿದ್ದರಿಂದ ಮಹಾದೇವಪ್ಪನವರ ತಂಡದವರು ಬಂದು ಎಲ್ಲ ಜ್ವಾಳ ಕಾಳುಗಳನ್ನು ಹೇರಿಕೊಂಡು ಹೋದರು. ನಿಂಗಪ್ಪ ಐಗಳಿ ಪೋಲಿಸ ಠಾಣೆಗೆ ಹೋಗಿ ದೂರು ನೀಡಿದನು. ಪೋಲಿಸರು ಬಂದು ಪಂಚನಾಮ ಮಾಡಿದರು. ಜ್ವಾಳ-ಕಾಳುಗಳು ಸಿಗದಿದ್ದಾಗ ಅವನ್ನು ಇಂಚಗೇರಿಗೆ ಸಾಗಿಸಿದ್ದಾರೆಂದು ಹೇಳಿದನು. ಇಂಚಗೇರಿಗೆ ಬಂದು ಮಠಕ್ಕೆ ಬರಲಂಜುತ್ತಿದ್ದ ಪೋಲಿಸರು ಮಹಾದೇವರ ಅನುಮತಿ ಪಡೆದು ಒಳಗೆ ಬಂದು ಪರೀಕ್ಷಿಸಿದರು. ಅಲ್ಲಿಯೂ ಆ ಚೀಲಗಳು ಸಿಗದಿದ್ದಾಗ, ಪೋಲಿಸರು ನಿಂಗಪ್ಪನಿಗೆ ಛೀ, ಥೂ ಹಾಕಿದರು. ಅಲ್ಲಿಯೇ ೩ ಗುಬ್ಬಿಗಳನ್ನು ಕೊಂದು ಗಿಡಕ್ಕೆ ಜೋತು ಹಾಕಿದ್ದನ್ನು ನೋಡಿದರು. ಇವುಗಳನ್ನು ಕೊಂದುಹಾಕಲು ಕಾರಣ ಕೇಳಿದರು. ಇವು ಅನ್ಯರ ಕಾಳು ತಿಂದು ದೊಡ್ಡವು ಆಗಿವೆ. ಅದಕ್ಕಾಗಿ ಇವನ್ನು ಕೊಂದಿದ್ದೆವೆಂದು ಹೇಳಿದನು. ಈ ಕೇಸು ಹೀಗೆ ಮೂವರ ಪಾಲನ್ನು ಕಸಿದುಕೊಂಡು ಮೂವರನ್ನು ಕೊಂದಿದ್ದಾನೆ. ಇಂಥ ಪ್ರಸಂಗ ಜರುಗಿದಾಗ ಎಂ.ಎಲ್.ಎ.ಗಳ ಕಾಂಗ್ರೇಸ ಮುಖಂಡರು ಮಹಾದೇವಪ್ಪ ದರೋಡೆಕೋರನೆಂದು ಅವರ ಅನುಯಾಯಿಗಳ ೧೬ ಜನರನ್ನು ಮತ್ತು ಶಿವಪ್ರಭುಗಳನ್ನು ಬಂಧಿಸಿ ಅಥಣಿ ಜೈಲಿನಲ್ಲಿಡಲಾಯಿತು. ಅಲ್ಲಿಂದ ಬೆಳಗಾವಿ ಕೋರ್ಟಿಗೆ ಕಳಿಸಲಾಯಿತು. ಅಲ್ಲಿ ೧೬ ದಿನಗಳವರೆಗೆ ವಿಚಾರಣೆ ನಡೆದು ಜಡ್ಜನ ಪಾದದ ಮೇಲೆ ನೂರರ ನೋಟಿನ ಪುಡಕೆ ಇಟ್ಟಾಗ, ತುಡುಗು, ದರೋಡೆ

ಮಾಡುವವರು. ಇಲ್ಲದವರು. ನಡೆಯುಲಿಕ್ಕೆ ಬಾರದ ಮುದಕರಿಂದ ಇಂಥ ಕೆಲಸ ಸಾಧ್ಯವಿಲ್ಲವೆಂದು ನಿರ್ದೋಶಿಗಳೆಂದು ಬಿಡುಗಡೆ ಮಾಡಿದರು. ಹೊಟ್ಟೆ ಉರಿಹತ್ತಿತು. ವಿನಾಕಾರಣ ದ್ವೇಷ ಸಾಧಿಸಿದ ನಿಂಗಪ್ಪ, ಭೀಮಪ್ಪ, ಸಿನುಕುಲಕರ್ಣಿ ಸತ್ತುಹೋದರು. ಈ ಕಕಮರಿ ಕೇಸಿನಲ್ಲಿ ಬಿಡುಗಡೆ ಸುದ್ದಿ ಹಬ್ಬಿತು. ಕಾಂಗ್ರೇಸ್ಸಿನಗರಿಗೆ ಎದೆ ಒಡೆಯಿತು.

ಇಷ್ಟಕ್ಕೂ ಸುಮ್ಮನಿರದೆ ಮಹಾರಾಷ್ಟ್ರ ಸರಕಾರದ ತಲೆ ತುಂಬಿ ಅವನನ್ನು ಬಂಧಿಸಲಿಕ್ಕೆ ಕುಮ್ಮಕ್ಕು ಕೊಡುತ್ತಿದ್ದರು. ಮಹಾದೇವಪ್ಪ ನಮ್ಮ ಕೈಗೆ ಸಿಕ್ಕರೆ ಶಿಕ್ಷಿಸದೆ ಬಿಡಲಾರೆವು ಎಂದು ಒನ ಜಂಬ ಕೊಚ್ಚಿಕೊಳ್ಳುತ್ತಿದ್ದರು.

ಜತ್ತ ಸರಕಾರದ ಮಂತ್ರಿ ಜಯಸಿಂಹ'ನಿಗೆ ಈ ಸುದ್ದಿ ಮುಟ್ಟಿತು. ಮೊದಲೆ ಮಹಾದೇವರ ಮೇಲೆ ಸಿಟ್ಟಿದ್ದ ಸರಕಾರ ಅಂಕಲಗಿಯ 'ಭೂಮಿಯನ್ನು ಪಾರ್ಮ'ಹೌಸ ಮಾಡುವುದಕ್ಕಾಗಿ ಮಹಾರಾಷ್ಟ್ರ ಸರಕಾರಕ್ಕೆ ಅರ್ಜಿ ಹಾಕಿದನು. ಜಮೀನ ಹೋಗುವುದೆಂದು ತಿಳಿದ ಸರಕಾರ ಸೋನಿಹಾಳ ಸಂಗಪ್ಪನಿಗೆ ಮಾರಿ ಖರೀದಿ ಪತ್ರ ಮಾಡಿಸಿದ್ದರು. ಜಮೀನು ಹಿಡಿದವರು ತಮ್ಮ ಪಾಲಿಗೆ ಬಂದದ್ದರಲ್ಲಿ ಗುಡಿಸಲು ಹಾಕಿ, ದನ-ಕರು, ಎತ್ತುಗಳನ್ನು ಕಟ್ಟಿದರು.

ಈ ಸುದ್ದಿ ತಿಳಿದ ಚಿಕ್ಕೂ ಲಮಾನಿ, ತಮ್ಮಣ್ಣ ನಂದಿವಾಲಿ, ಹರಿಜನ ಮತ್ತು ಗಿರಿಜನರು ಮಾರ್ತೆಪ್ಪ ಹೂಗಾರ ಸೇರಿ ಜತ್ತ ಸರಕಾರವನ್ನು ಕೇಳಿದರು. ಒಪ್ಪದ ಸರಕಾರವು ಮಹಾದೇವರ ಮೇಲೆ ಹರಿಜನ-ಗಿರಿಜನರ ದರೋಡೆ ಕೇಸು ಹಾಕಿ, ದರೋಡೆಕೋರ ೩೦ ಜನರನ್ನು ಬಂಧಿಸಿ ಚಿತ್ರಹಿಂಸೆ ಕೊಡುತ್ತಿದ್ದರು. ಇದನ್ನು ತಿಳಿದ ಮಹಾದೇವಪ್ಪನವರು ಹೊರ್ತಿಗೆ ಹೋಗಿ ಪೋಲಿಸರಿಗೆ ಬೆದರಿಸಿದನು. ಬೇಕಿದ್ದರೆ ಜೈಲಿಗೆ ಹಾಕಿರಿ, ಬಡಿದರೆ ನಿಮ್ಮ ಕುಂಡಿಯ ತೊಗಲನ್ನೆ' ಸುಲಿವೆನೆಂದು ಬೆದರಿಕೆ ಹಾಕಿ ಬಂದರು. ಈ ಸುದ್ದಿ ಎಲ್ಲಾ ಕಡೆ ಹಬ್ಬಿ ಜನ ಬರತೊಡಗಿತು. ಪೋಲಿಸರಿಗೆ ಹತೋಟಿಯಲ್ಲಿ ತರಲಾಗಲಿಲ್ಲ, ಗಾಭರಿಗೊಂಡರು ಚಳುವಳಿಕಾರರನ್ನು 'ಜತ್ತಕೋರ್ಟಿಗೆ' ಹಾಕಲಾಯಿತು. ಕೋರ್ಟಿನಲ್ಲಿ ನಡೆದ ವಾದ-ವಿವಾದ ನಡೆದು ಅವರೆನ್ನೆಲ್ಲ 'ಸಾಂಗಲಿ' ಶೆಸೆನ್‌ಕೋರ್ಟಿಗೆ ಹಾಜರುಪಡಿಸಿದರು. ಸುಳ್ಳು ಕೇಸು, ಸುಳ್ಳು ಸಾಕ್ಷಿ ಹೇಳಿ 'ಸಿಂಪಿಜಜ್ಜನ' ಸಮ್ಮುಖದಲ್ಲಿ ನ್ಯಾಯ ನಡೆಯುವದಿತ್ತು. ಮುಂಬೈ 'ಕನ್ನುಂವಾರು' ಮಂತ್ರಿ ರಾತ್ರಿ ಬಂದು ಮಹಾದೇವನಿಗೆ ಶಿಕ್ಷೆಯಾಗಬೇಕೆಂದು ಹೇಳಿಹೋದನು. ಮುಂದೆ ಒಂದೆರಡು ದಿನದಲ್ಲಿ ಮಂತ್ರಿ ಹೃದಯಘಾತದಿಂದ ಮರಣಹೊಂದಿದ. ಸರಿಯಾಗಿ ಸಾಕ್ಷಿ ಪುರಾವೆಗಳು ದೊರಕದಾದವು. ಮಹಾದೇವಪ್ಪನವರು ಅವರ ಅನುಯಾಯಿಗಳ ನಿರ್ದೋಶಿಗಳೆಂದು ಬಿಡುಗಡೆಯಾದರು. ಆಗ ಕಾಂಗ್ರೇಸಿನವರಿಗೆ, ಮಹಾರಾಷ್ಟ್ರ ಪೋಲಿಸ ಸರಕಾರಕ್ಕೆ ಮುಖಭಂಗವಾಯಿತು.

೨) ಮೂಡಲಗಿ ಭೂವಿವಾದ ಕೇಸಿನಲ್ಲಿ ಮಹಾದೇವಪ್ಪನವರನ್ನು ಬಂಧಿಸಿದ್ದು :

ಮೂಡಲಗಿಯಲ್ಲಿ ಹೊಲದ ಆಸೆಗಾಗಿ ಬಡದಾಡಿ ಕೊಲೆಯಾಗಿತ್ತು. ಈ ಸುದ್ದಿ ಹೆತ್ತ ತಾಯಿಗೆ ಮುಟ್ಟಿದಾಗ ದುಃಖದಿಂದ ಜೋರಾಗಿ ಅಳತೊಡಗಿದಳು. ಅಲ್ಲಿ ಸೇರಿದ ಅಸಂಖ್ಯಾತ ಜನರಲ್ಲಿ ನಿನ್ನ ಮಗನನ್ನು ಕೊಂದವರ್ಯಾರು ತಾಯಿ ಎಂದು ಒಬ್ಬ ಕೇಳಿದನು. ದುಃಖದ ಆವೇಶದಲ್ಲಿ ಯಾರಂತ ಹೇಳಲೆಪ್ಪ 'ಆ ದೇವರೆ ಕೊಂದನೆಂದು' ಹಾಡಾಡಿಕೊಂಡು ಅಳಹತ್ತಿದ್ದಳು. ದೇವರೆಂದ ಮೇಲೆ ಈ ಕೇಸು ಇಂಚಗೇರಿ ಮಹಾದೇವಪ್ಪನವರೆ ಕೊಂದವನೆಂದು ಎಲ್ಲ ಕಡೆ ಸುದ್ದಿ ಹರಡಿ, ಗೋಕಾಕ ಪೋಲಿಸ ಸ್ಟೇಶನಕ್ಕೆ ಹೋಯಿತು. ಪೋಲಿಸಿನವರು ಮಹಾದೇವಪ್ಪನವರನ್ನು ಬಂಧಿಸಲಿಕ್ಕೆ ಬಂದು ಅಟಕು ಮಾಡಿ ೩೦೨ ನೇ ಕಲಂ ಪ್ರಕಾರ ಕೇಸು ಹಾಕಿ ಗೋಕಾಕ ಕೋರ್ಟಿನಲ್ಲಿ ಕೇಸು ನಡೆಯಿತು.

ಬ್ಯಾಕೋಡ ಗೌಡನಿಗೆ ಮಹಾದೇವಪ್ಪನರಿಂದ ಎಲೆಕ್ಷನದಲ್ಲಿ ಆರಿಸಿ ಬಂದಿದ್ದನ್ನು ಮರೆತು ಒಳಗಿಂದೊಳಗೆ ದ್ವೇಷ ಸಾಧಿಸುತ್ತಿದ್ದನು. ದುಡ್ಡು ಕೊಟ್ಟು ದುರುಳರನ್ನು ಕೂಡಿಸಿ ಟ್ರಕ್‌ಗಟ್ಟಲೆ ಕಲ್ಲನ್ನು ತರಿಸಿ ಕೋರ್ಟಿನ ಸುತ್ತ ಡಿಗ್ಗಿ ಒಟ್ಟಿಸಿದ್ದನು. ಬಾಡಿಗೆಯಿಂದ ತಂದಿದ್ದ ಎಲ್ಲ ದುರುಳರನ್ನು ಕಲ್ಲ ಡಿಗ್ಗಿ (ಗುಂಪು) ಮುಂದೆ ನಿಲ್ಲಿಸಿದ್ದನು. ಬಿಗುಭದ್ರತೆಯಲ್ಲಿ ಕೋರ್ಟಿಗೆ ಮಹಾದೇವಪ್ಪನವರನ್ನು ಕರೆತರಲಾಯಿತು. ಗೌಡನ ಕಡೆಯ ೧೦-೧೫ ಸಾವಿರ ಜನ ಒಂದೆ ಸವನೆ ಕಲ್ಲು ಎಸೆಯತೊಡಗಿದರು. ಕೋರ್ಟಿನ ಹಂಚುಗಳು ಒಡೆದವು. ಒಳಗಿದ್ದವರ ತಲೆಗೆ ಪೆಟ್ಟು ಬಿದ್ದು ತಲೆಒಡೆದವು. ಆದರೆ ಮಹಾದೇವಪ್ಪನವರಿಗೆ ಒಂದು ಕಲ್ಲು ಕೂಡಾ ಬಡೆಯಲಿಲ್ಲ. ಅವರ ಅನುಯಾಯಿಗಳಿಗೆ ಬಡೆದ ಕಲ್ಲು ಚಂಡಿನಂತೆ ಪುಟಿದು ಹೋಗುತ್ತಿದ್ದವು. ಪೋಲಿಸರ ತಲೆಯು ಕೂಡಾ ಒಡೆಯಿತು. ಯೋಗ ಸಾಧನೆ ಮಾಡಿದ್ದರಿಂದ ಕಲ್ಲು ಬಡೆದರು ಪೆಟ್ಟಾಗಲಿಲ್ಲ. ಕಾಂಗ್ರೇಸ ಪುಡಾರಿಗಳ ಪುಡಿಗಾಸಿಗೆ ಮನಸೋತ ಪೌಜದಾರಸಾಹೆಬರು ಮಹಾದೇವಪ್ಪನವರನ್ನು ಗುಂಡು ಹಾಕಲು ದಿಟ್ಟಿಸಿ ಗುರಿ ಇಟ್ಟರು. ಅದರ ಕಡೆ ಮಹಾದೇವಪ್ಪನವರ ದೃಷ್ಟಿ ಬಿದ್ದಾಗ ಕೈಯಲ್ಲಿದ್ದ ಬಂದೂಕು ಒಗೆದು ಓಡತೊಡಗಿದನು.

ಮಹಾದೇವಪ್ಪನವರ ಅನುಯಾಯಿಗಳಾದ ರಾಮಗೊಂಡಪ್ಪ ಮುತ್ತಪ್ಪ, ಕಲ್ಲನಗೌಡ, ಕಾಡಪ್ಪ, ಪವಾಡೆಪ್ಪ ಇವರ ಮೇಲೆ ಕಕಮರಿ ಕೇಸಿನ ವಾರೆಂಟು ಇದ್ದಿತು. ಸಿಕ್ಕಲ್ಲಿ ಗುಂಡು ಹಾಕಬೆಕು. ಪರಾರಿಯಾದವರು ಇವರು ಇನ್ನು ಸಿಕ್ಕಿರಲಿಲ್ಲ. ಇದನ್ನು ತಿಳಿದ ಮಹಾದೇವಪ್ಪನವರು ಅವರಿಗೆ ಲಾತೂರ ತಾಲೂಕದ ನಂದಗಾಂವದಲ್ಲಿ ವೇಷ ಬದಲಿಸಿಕೊಂಡು ಹೆಸರು ಬದಲಿಸಿಕೊಂಡು ಇರಲು ಹೇಳಿದರು. ಅಲ್ಲಿ ಜಯಮಹಾರಾಜರ ಗುಡಿಯಿದೆ. ವಾಸಮಾಡಿರಿ. ನಿತ್ಯ ಊರಲ್ಲಿ ಕಂತಿ ಬಿಕ್ಷೆ ಮಾಡಿ ಊಟ ಮಾಡಿರಿ, ಅಲ್ಲಿ ಭಾವಿತೋಡಿರಿ, ಗಿಡಗಂಟಿಗಳನ್ನು ಬೆಳೆಸಿರಿ ಎಂದು ನಿರುದ್ಯೋಗಿಯಾಗಿಕ ಬಾರದು ಮನಸ್ಸನ್ನು ಕೆಲಸದಲ್ಲಿ ತೊಡಗಿಸಿಬೇಕು ಎನ್ನುವ ಉದ್ದೇಶ ಅವರದಾಗಿತ್ತು.

'ಮಳೆ ಹನಿ ನಿಂತರೂ ಮರದ ಹನಿ ನಿಲ್ಲಲಿಲ್ಲ'. ಕಾಂಗ್ರೇಸಿನ ಎಂ.ಎಲ್.ಎ. ಮತ್ತು ಎಂ.ಪಿ.ಗಳಿಗೆ ಮುಖಭಂಗವಾದರು ಸುಮ್ಮನೆ ಕೂಡಲಿಲ್ಲ. 'ವಾಂಡಕರ' ಪೌಜದಾರನಿಗೆ ಮಹಾದೇವಪ್ಪನವರಲ್ಲಿ ಲೈಸನ್ಸ ಇಲ್ಲದ ನಾಡ ಪಿಸ್ತೂಲ ಇದೆ. ಅವನನ್ನು ಅರೆಸ್ಟು ಮಾಡಿ ಬಂದೂಕ ಕೇಸನ್ನು ಹಾಕಲು ಹೇಳಿದರು.

ಪೌಜದಾರ ಸಾಹೇಬರು ತಮ್ಮ ಎಲ್ಲ ಪೋಲಿಸರನ್ನು ಕರೆದುಕೊಂಡು ಇಂಚಗೇರಿಗೆ ಹೋಗಿ ಮಠದಲ್ಲಿದ್ದ ಹೆಣ್ಣುಮಕ್ಕಳನ್ನು ಬೆದರಿಸಿ ಕೇಳಹತ್ತಿದನು. ಯಾರಿಂದಲೂ ಯಾವ ಉತ್ತರ ಬರಲಿಲ್ಲ. ಇಂಚಗೇರಿ ಊರಲ್ಲಿ ಹೋಗಿ ಮಹಾದೇವಪ್ಪನವರ ವಿರುದ್ಧ ಇರುವ ಹರಿಜನ ಸಿದ್ದಪ್ಪ ಮತ್ತಿತರನ್ನು ಕೇಳತೊಡಗಿದನು. ಊರಲ್ಲಿ ಅಹಂಕಾರದಿಂದ ಮರೆಯುತ್ತಿದ್ದ, ಯಾರಿಗೂ ಕಿಮ್ಮತ್ತು ಕೊಡದ ಸಿವಪ್ಪನ್ನು ಕರೆದುಕೊಂಡು ಸಂಧಿಗೊಂದಿ ಹುಡುಕಿದರು ಸುಳಿವು ಸಿಗಲಿಲ್ಲ. ನಿರಾಶೆಗೊಂಡ ಪೌಜದಾರ ಮಹಾದೇವಪ್ಪನವರನ್ನು ಮತ್ತು ಅವರ ಅನುಯಾಯಿಗಳನ್ನು ಬಾಯಿಗೆ ಬಂದ ಹಾಗೆ ಬಯ್ಯತೊಡಗಿದನು. ಅಲ್ಲಿದ್ದವರೆಲ್ಲರೂ ಅವನಿಗೆ ತಾಕಿತು ಮಾಡಿ ಎಚ್ಚರಿಕೆ ನೀಡಿ ಗುಂಡು ಹಾರಿತು ಎಂದು ಹೆದರಿಸಿದರು. ನಂತರ ಕಾಂಗ್ರೇಸ್ಸಿಗರ ಕಾಟತಪ್ಪಿತು. ಇವರಿಂದ ಮಹಾದೇವಪ್ಪ ರಾಜಕೀಯದಿಂದ ದೂರವಾಗಿ ಇದರಿಂದ ಏನು ಸಾಧಿಸಲಿಕ್ಕೆ ಸಾಧ್ಯವಿಲ್ಲವೆಂದು ವಿನೋಭಾವೆಯವರ ಸರ್ವೋದಯ ಕಾರ್ಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡರು.

'ಸ್ಥಾನಬದ್ಧ' ಕಾಯ್ದೆಯಲ್ಲಿ ಕಾರಾಗ್ರಹದಲ್ಲಿರಿಸಿದ್ದು :

ಸ್ವತಂತ್ರ ಭಾರತದ ಮಂತ್ರಿಮಂಡಲದಲ್ಲಿ ಶ್ರೀಮಂತರ, ಜಮಿನ್ದಾರರ, ಸಂಸ್ಥಾನಿಕರ ಕೈಯಲ್ಲಿ ಅಧಿಕಾರವಿತ್ತು. ಬಡವರ ಬಗ್ಗೆ, ದೀನದಲಿತರ ಬಗ್ಗೆ ಮನಬಂದಂತೆ ವರ್ತಿಸುತ್ತಿದ್ದರು. ಅವರ ಅಳಲನ್ನ ಪರಿಹರಿಸುವವರಾರು ಇರಲಿಲ್ಲ. ಕರುಣಾಮಯಿ, ದೀನಬಂದು ಅವರ ಪರವಾಗಿ ಎಲ್ಲ ಆಡಳಿತ ಅಧಿಕಾಶಾಹಿ ಪುರೋಹಿತಶಾಹಿಗಳ ವಿರುದ್ಧ ನ್ಯಾಯಯುತವಾದ ಹೋರಾಟ, ಆಡಳಿತ ಶಾಹಿಗಳಿಗೆ ಹಿಡಿಸಲಿಲ್ಲ. ಇವನನ್ನು ನಾವು ಹೀಗೆ ಸುಮ್ಮನೆ ಬಿಟ್ಟರೆ 'ಸಮತಾವಾದ' ತರುವನೆಂದು ಅಂಜಿಕೆ ಹುಟ್ಟಿ 'ಸ್ಥಾನಬದ್ಧ ಕಾಯ್ದೆ' ಮೇಲೆ ಬಂಧಿಸಿ ವಾರೆಂಟ ತಗಿಸಿ 'ನಾಸಿಕ ಜೈಲಿನಲ್ಲಿ ಇಟ್ಟರು. 'ಮುಖ್ಯಮಂತ್ರಿ ಮುರಾರ್ಜಿ ದೇಸಾಯಿ'ಯವರಿದ್ದರು[೧]. ಮಹಾದೇವರಿಗೆ ಜೈಲೆಂದರೆ ಕೃಷ್ಣನ ವಾಸಸ್ಥಾನವಾಗಿತ್ತು.

---

೧. ಮಾಧವ ಜೀವನ ದರ್ಶನ : ಭಾಗ – ೧ : ಯುಗಪುರುಷ ಮಹಾದೇವರು ಲೇಖನ : ತುಗೊಕೊಪರ್ದೆ ಪುಟಸಂಖ್ಯೆ – ೨೭.

ಈ ಸುದ್ದಿ ದೇಶವ್ಯಾಪಿ ಹಬ್ಬಿತು. ಇಂಚಗೇರಿ ಆದ್ಯಾತ್ಮ ಸಂಪ್ರದಾಯದ ಭಕ್ತರೆಲ್ಲರು, ಸಭೆ ಸೇರಿ ಮಹಾದೇವಪ್ಪನವರನ್ನು ಯಾವ ಕಾರಣವಿಲ್ಲದೆ ಜೈಲಿನಲ್ಲಿರಿಸಿದ್ದನ್ನು ಸಹಿಸಿಕೊಳ್ಳಲಾರದೆ ಹೋರಾಟ ಮಾಡಲು ನಿರ್ಧರಿಸಿದರು. ನಾಯಕಪ್ಪ, ಮಾಸ್ತರು, ಹುಲ್ಲೂರು ಮಲ್ಲಪ್ಪ, ಬಾಸ್ಕರಪ್ಪ ಕೂಪರ್ಡೆ (ಬನಹಟ್ಟಿ), ಸಿರಹಟ್ಟಿಮಠ ಮಾಸ್ತರರು ತಿರುಗಾಡಿ ಸಹಿ ಸಂಗ್ರಹಮಾಡಿದರು. ಚಳುವಳಿ ಪ್ರಾರಂಭಿಸಿದರು. ಸಿರಹಟ್ಟಿಮಠ ಮಾಸ್ತರರು ಸಭೆ ಸಮಾರಂಭಗಳಿಗೆ ಹೋದಾಗ ಸುಭಾಸಚಂದ್ರ ಬೋಸ್‌ರು ಆಡಿದ ಮಾತನ್ನು ಅವರು ಬರೆದು ಇಟ್ಟಿದ್ದನ್ನು ಹೇಳುತ್ತಿದ್ದರು. "ಹಿಂದೂಸ್ಥಾನ ಕಲ್ಯಾಣವಾಗಬೇಕಾದರೆ ಹಿಂದೂಸ್ಥಾನ ಸಾಧುವಿನಿಂದಲೆ ಮಾತ್ರ ಸಾಧ್ಯ" ಎಂದು ಓದಿನೋಡಿರಿ. ಇದನ್ನು ತಿಳಿದ ಗುಪ್ತಚಾರರು ಬಂದು ಮುಖ್ಯಮಂತ್ರಿಗಳಿಗೆ ಅಂದರೆ ಮುರಾರ್ಜಿ ದೇಸಾಯಿಯವರಿಗೆ ಹೇಳಿದರು. ಇವರ ಬಂಧನದಿಂದ ಅಶಾಂತಿ, ಅನೈತಿಕತೆ, ಅರಾಜಕತೆ ಉಂಟಾಗಬಾರದೆಂದು ಮಂತ್ರಿಮಂಡಲದವರೆಲ್ಲರೂ ಸಭೆ ಸೇರಿ ಮಹಾದೇವಪ್ಪನವರನ್ನು ಬಿಡುಗಡೆ ಮಾಡಿದರು.

ಅಧ್ಯಾಯ - ೪

ಗೋವೆಯ ವಿಮೋಚನೆಗಾಗಿ ಸತ್ಯಾಗ್ರಹ

ಅಧ್ಯಾಯ – ೮

ಗೋವೆಯ ವಿಮೋಚನೆಗಾಗಿ ಸತ್ಯಾಗ್ರಹ

ಗೋವೆಯು ಗುಡ್ಡುಗಾಡು ಪ್ರದೇಶ ಒಳಗೆ ನುಗ್ಗಲು ನೂರಾರು ದಾರಿಗಳ ಇದ್ದರು ಗುಡ್ಡಗಳಲ್ಲಿ ಗೋವೆಗೆ ಯಾರು ಹೋಗಿ ಬರುವಂತಿಲ್ಲ. ಗುಡ್ಡಗಾಡು, ದಾರಿಗಳಿಂದಲೇ ಭೂಗತ ಕಾರ್ಯಕರ್ತರು ಕಳ್ಳರು ಸರಕು ಸಾಗಾಟ ಮಾಡುತ್ತಿದ್ದರಿಂದ ಗೋವೆಯ ಪರಿಸ್ಥಿತಿಯನ್ನು ಅವರೇ ತಿಳಿಸಲು ಯೋಗ್ಯರಾಗಿದ್ದರು.

ಭೂಗತ ಕಾರ್ಯಕರ್ತರಲ್ಲಿ ರಾಷ್ಟ್ರೀಯ ಗೋವಾ ಕಾಂಗ್ರೇಸ್ಸಿನವರು ಮತ್ತು "ಆಜಾದ ಗೋಮಾಂತಕ" ದಳದವರು ಎಂದು ಎರಡು ಪಕ್ಷಗಳಿದ್ದವು. ಆಜಾದ ದಳದವರು ಹೆಚ್ಚು ಚಟುವಟಿಕೆಯುಳ್ಳವರು ಮತ್ತು ಉಗ್ರವಾದಿಗಳು. ಕಾಂಗ್ರೆಸ್ಸಿನ ಕಾರ್ಯಕರ್ತರು ಕೇವಲ ಪ್ರಚಾರ ಕಾರ್ಯದಲ್ಲಿ ತೊಡಗಿದ್ದರು. ಗಡಿಗಳಲ್ಲಿ ಮಾತ್ರ ಅವರ ಕೆಲಸ. ಆಜಾದ ಗೋಮಾಂತಕದವರು ಪ್ರಚಾರದ ಜೊತೆ ವಿಧ್ವಂಸರ ಕಾರ್ಯದಲ್ಲಿ ತೊಡಗಿದ್ದರು. ಇವರು ಗೋವೆಯ ಒಳಗೆ ಪ್ರವೇಶಿಸಿ ಮೂಲೆ, ಮೂಲೆಗಳಿಗೆ ಹೋಗಿ 'ಪಣಜಿ', 'ಮಾವಸಾ' ನಗರವನ್ನು ಮುಟ್ಟಿ ಬರುತ್ತಿದ್ದರು.

ಗೋಮಾಂತಕ ಕಾರ್ಯಕರ್ತರು ಗೋವೆಯ ತುಂಬ ಹರಡಿಕೊಂಡಿದ್ದರು. ಅವರು ವೇಷ ಬದಲಿಸುವ ಕಲೆಯಲ್ಲಿ ಪರಿಣಿತರು ಸದಾ ಶಸ್ತ್ರಧಾರಿಗಳಾಗಿದ್ದು, ಬೇಕಾದಷ್ಟು ದೂರ ನಿರ್ಭಯವಾಗಿ ಹೋಗುತ್ತಿದ್ದರು. ಅವರಿಗೆ ಹೊರಗಿನ ಹಣದ ಸಹಾಯವಿರಲಿಲ್ಲ. ನಿತ್ಯ 'ಆರಾಣೆಯ' ಕೂಲಿ ಕೆಲಸ ನಿರ್ವಹಿಸುತ್ತಿದ್ದರು. ಆದರೂ ಅವರು ಗೋವಾ ವಿಮೋಚನೆಗೆ ಹುಮ್ಮಸ್ಸಿನಿಂದ ಕೆಲಸ ಮಾಡುವವರಾಗಿದ್ದರು. ಅಲ್ಲಿ ನಡೆಯುವ ವಿಧ್ವಂಸಕ ಚಟುವಟಿಕೆಗಳು ಇವರಿಂದಲೇ ಮಾತ್ರ ಸಾಧ್ಯ.

ಪೋರ್ಚುಗೀಜರ ಆಡಳಿತಕ್ಕೆ ಜನರು ಹತಾಶರಾಗಿದ್ದಾರೆ. ಆಲ್ ಇಂಡಿಯಾ ಕಾಂಗ್ರೇಸ್ ಕಮಿಟಿಯ ೪೦೦ ಸತ್ಯಾಗ್ರಹಿಗಳು ಸತ್ಯಾಗ್ರಹದಲ್ಲಿ ತೊಡಗಿ ಪೋರ್ಚುಗೀಜರ ಗುಂಡಿಗೆ ಬಲಿಯಾಗಿದ್ದರು. ಹೀಗಾಗಿ ಅವರ ಸತ್ಯಾಗ್ರಹ ಕೇವಲ ಗಡಿಯಲ್ಲಿಯೇ ನಡೆಯುತ್ತಿತ್ತು. ಒಳ ಪ್ರದೇಶಕ್ಕೆ ಅವರಿಂದ ಯಾವ ಪರಿಣಾಮ ಆಗುವದಿಲ್ಲವೆಂದು ಗೋಮಾಂತಕ ದಳದ ಕಾರ್ಯಕರ್ತರಿಗೂ ತಿಳಿದಿತ್ತು. ಸತ್ಯಾಗ್ರಹ ಉಗ್ರವಾಗಿ ನಡೆದು ಒಳಪ್ರದೇಶಕ್ಕೆ ಬರಬೇಕು. ಸ್ಥಾನಿಕ ಜನರು ಅದರಲ್ಲಿ ಸೇರಬೇಕು. ಎನ್ನುವ ಇಚ್ಛೆಯಿದ್ದರೂ ಬಹಿರಂಗವಾಗಿ ಹಾಗೆ ಮಾಡುವಂತಿರಲಿಲ್ಲ. ದೊಡ್ಡ ಜನಸಮೂಹ ಭಾರತದಿಂದ ಬಂದರೆ ಅದರಲ್ಲಿ ತಾವೂಕೂಡಿಕೊಳ್ಳಬಹುದು. ಸರಕಾರ ಕೊಡುವ ಅನ್ಯಾಯ, ಅತ್ಯಾಚಾರ ಸಹಿಸಬಹುದು. ಸಧ್ಯದಲ್ಲಿ ಏನು ಮಾಡುವಂತಿಲ್ಲ. ಚಳುವಳಿ ಒಳನಾಡಿಗೆ ಹಬ್ಬುವದಿಲ್ಲವೆಂದು ಹತಾಶರಾಗಿದ್ದರು.

ಗೋವೆಯಲ್ಲಿ ಸುಮಾರು ೧೭೦೦೦ ಸೈನ್ಯವಿತ್ತು. ಎಲ್ಲರಿಗೂ ಅಮೇರಿಕನ್‌ರು ಯುದ್ಧೋಪಕರಣಗಳನ್ನು ಒದಗಿಸಿದ್ದರು. ಗೋವೆಯ ಬಗ್ಗೆ ಅನುಕಂಪ ಪಡುವವರಿಗೆ ಪೋರ್ಚುಗೀಜರು ಚಿತ್ರಹಿಂಸೆ ಕೊಡುತ್ತಿದ್ದರು.

ಎರಡು ನೂರು ವರ್ಷಗಳಿಂದ ಬ್ರಿಟಿಷ ಆಡಳಿತದ ದಬ್ಬಾಳಿಕೆಗೆ ತತ್ತರಿಸಿದ ಭಾರತ ಮಾತೆಯನ್ನು ಸ್ವಾತಂತ್ರ್ಯಗೊಳಿಸಲು ದೇಶದಾದ್ಯಂತ ಜಾತಿ–ಮತ, ಪಂಥ, ವರ್ಣ, ಬೇಧವನ್ನು ತೊರೆದು ಒಕ್ಕಟ್ಟೆ ಬಲ *"Unity in Diversity"* ಎಂದು ತಿಳಿದರು. ದೇಶದಾದ್ಯಂತ ಕ್ರಾಂತಿಯ ಕಹಳೆಯನ್ನು ಊದಿದರು. ಅದರ ಪ್ರತಿಫಲವಾಗಿ ೧೯೪೭ ರಂದು ಸ್ವಾತಂತ್ರ್ಯ ದೊರಕಿತ್ತು.

ಹೊಯ್ಸಳ, ಕದಂಬರು ಆಳಿದ ನಾಡುಗಳಾದ ಗೋವೆ, ದೀವ್, ದಮನ್‌ಗಳು ಭಾರತದ ಅವಿಭಾಜ್ಯ ಅಂಗಗಳಾಗಿದ್ದವು. ಭಾರತದಲ್ಲಿ ವಿಲೀನತೆಗೆ ಅವುಗಳ ಅವಶ್ಯಕತೆ ಇತ್ತು. ವಿಲೀನತೆಗೊಳಗಾಗದೆ ಭಾರತ ಸಂಪೂರ್ಣ ಸ್ವಾತಂತ್ರ್ಯ ರಾಷ್ಟ್ರವಾಗುತ್ತಿದ್ದಿಲ್ಲ. ೪೫೦ ವರ್ಷಗಳಿಂದ ಗೋವೆ, ದಿವ್, ದಮನ್‌ಗಳು ಪೋರ್ಚುಗೀಜರ ಆಳ್ವಿಕೆಯಲ್ಲಿದ್ದವು. ಅವರ ದುರಾಡಳಿತ, ದುರಾಚಾರಕ್ಕೆ ಬೇಸತ್ತು ಜನ – ಮನದಲ್ಲಿ ಸ್ವಾತಂತ್ರ್ಯದ ಹಾದಿಯನ್ನು ಹಿಡಿದರು. ಅಲ್ಲಿಯ ಸರ್ವಸಂಪತ್ತನ್ನು ಕೊಳ್ಳೆಹೊಡೆದು ತಮ್ಮ ಬೊಕ್ಕಸಕ್ಕೆ ತುಂಬಿಕೊಳ್ಳುತ್ತಿದ್ದರು. ಇದಕ್ಕೆ ಬೇಸತ್ತ ಜನ–ಮನದಲ್ಲಿ ಸ್ವಾತಂತ್ರ್ಯ ಬೀಜ ಅಂಕುರಿಸಿತು. ೧೯೫೪ ರಲ್ಲಿ ನಿರ್ಧಾರ ತೆಗೆದುಕೊಳ್ಳಲಾಗಿತ್ತು. ಚಳುವಳಿಯ ಗಾಳಿ ದೇಶದಾದ್ಯಂತ ಹಬ್ಬಿತ್ತು. ೧೯೫೫ರಲ್ಲಿ[೧] ಚಳುವಳಿ ಉಗ್ರ ರೂಪ ತಳೆಯಿತು. ಜನರೆಲ್ಲರು ಆತ್ಮಾಹುತಿಗೆ ಸಿದ್ಧರಾಗಿ ಹೋರಾಡಲು ಕಂಕಣಬದ್ಧರಾಗಿದ್ದರು. ಆಗ ಸ್ವಾತಂತ್ರ್ಯ ಭಾರತದ ಸರಕಾರದ ಆಡಳಿತ ಕಾಂಗ್ರೆಸ್ಸಿಗರ ಕೈಯಲ್ಲಿತ್ತು. ಪಂಡಿತ ಜವಾಹರಲಾಲ ನೆಹರೂ ಅವರು ಪ್ರಧಾನ ಮಂತ್ರಿಗಳಾಗಿದ್ದರು. ಗೋವಾ ವಿಮೋಚನೆಗೆ ಪ್ರಾಮುಖ್ಯತೆ ಕೊಡದೆ ಉದಾಸೀನ ಭಾವನೆ ತಳೆದಿದ್ದರು. ಚಳುವಳಿಯ ಮುಖಂಡತ್ವವನ್ನು ವಹಿಸಲು 'ಪ್ರಜಾಸೋಶಾಲಿಷ್ಟ ಪಾರ್ಟಿ', 'ಸೋಸಾಲಿಷ್ಟ ಪಾರ್ಟಿ', 'ಜನಸಂಘ', 'ಕಮುನಿಷ್ಟ ಪಾರ್ಟಿ' ಮುಂತಾದ ರಾಷ್ಟ್ರೀಯ ಪಕ್ಷದ ನಾಯಕರು ಮುಂದೆ ಬಂದರು ಮತ್ತು ಚಳುವಳಿಯಲ್ಲಿ ಪ್ರಮುಖ ಪಾತ್ರವಹಿಸಿದರು. ದೇಶದ ವಿವಿಧ ಭಾಗಗಳಿಂದ ಬಂದ ಚಳುವಳಿಗಾರರು ಅಹಿಂಸಾತ್ಮಕವಾದ ಯುದ್ಧ ಮಾಡಲು ನಿರ್ಧರಿಸಿದರು. ನಿಸಶಸ್ತ್ರ, ಅಹಿಂಸಾತ್ಮಕವಾದ ಭಾರತದ ಸ್ವಾತಂತ್ರ್ಯ ಪ್ರೇಮಿಗಳನ್ನು ಪೋರ್ಚುಗೀಜರು, ನಿಗ್ರೋ, ಸೈನಿಕರು ಅರಳು ಹುರಿದಂತೆ ಕೊಂದರು. ಆಗ ಕರ್ನಾಟಕದಿಂದ ಗಜೇಂದ್ರಗಡದ 'ಹಣಮಂತಪ್ಪ' ಮತ್ತು ಗದಗದ ಅಂದಾನೆಪ್ಪನವರು ಚಳುವಳಿಯಲ್ಲಿ ಭಾಗವಹಿಸಿ ಹುತಾತ್ಮರಾದರು. ಈ ಸುದ್ದಿ ಜಗತ್ತಿನಾದ್ಯಂತ ಹಬ್ಬಿತು. ನಿಜಾಂಶವನ್ನು ತಿಳಿಯಲು ಪೋರ್ಚುಗೀಜರ ದಬ್ಬಾಳಿಕೆಯನ್ನು ಕಣ್ಣಾರೆ ಕಾಣಲು ಲಂಡನ್ನಿನಿಂದ "ಆಬ್ಜರ್ವರ" ಪತ್ರಿಕೆಯ ಸುದ್ದಿಗಾರರು ರಾಯಟರ ವಾರ್ತಾ ಸಂಸ್ಥೆಯ ಸುದ್ದಿಗಾರರ[೨] ಜೊತೆಗೆ ನಮ್ಮ ಸಂಯುಕ್ತ ಕರ್ನಾಟಕ ದಿನಪತ್ರಿಕೆಯ ವರದಿಗಾರರಾಗಿದ್ದ ಎನ್. ನಾಗರಾಜರು ಇದ್ದರು.

---

೧. ಗೋವಾ ವಿಮೋಚನೆಯಲ್ಲಿ ಕರ್ನಾಟಕದ ಕ್ರಾಂತಿವೀರರು, ಲೇಖಕ : ಎಸ್. ಎಂ. ತಡಸದಮಠ ೧೯೯೪ ಸಮಾಜ ದರ್ಪಣ ಪ್ರಕಾಶನ – ನರಗುಂದ.

೨. ಬೆಳಗಾವಿ ಜಿಲ್ಲೆಯ ಸ್ವಾತಂತ್ರ್ಯ ಯೋಧರು. ಡಾ. ಎಸ್. ಪಿ. ಚವಲಾರ.

ಗೋವಾ ವಿಮೋಚನಾ ಚಳುವಳಿಯ ಗಾಳಿ ಕರ್ನಾಟಕಕ್ಕೆ ತಲುಪದೆ ಇರಲಿಲ್ಲ. ಕರ್ನಾಟಕದ ಜನರು ಚಳುವಳಿಯ ಪ್ರೇಮಿಗಳಾಗಿದ್ದರು. ಕರ್ನಾಟಕದ ಮೂಲೆ ಮೂಲೆಯಿಂದ ಚಳುವಳಿಗಾರರು ಬರತೊಡಗಿದರು. ಆ ಚಳುವಳಿಕಾರರಲ್ಲಿ ಬೆಳಗಾವಿ ಜಿಲ್ಲೆಯವರು ಭಾರತದ ಯಾವುದೇ ಸಂಗ್ರಾಮದಲ್ಲಿ ಇನ್ನುಳಿದ ಪ್ರಾಂತಕ್ಕಿಂತ ಒಂದು ಹೆಜ್ಜೆ ಮುಂದಿದ್ದವರು. ಈ ಗಾಳಿ ನಮ್ಮ ಇಂಚಗೇರಿ ಮಹಾದೇವರಿಗೆ ತಲುಪದೆ ಇರಲಿಲ್ಲ. ಅವರು ತಮ್ಮೆಲ್ಲ ಅನುಯಾಯಿಗಳ ಜೊತೆ ಯಾವ ಪ್ರತಿಫಲವಿಲ್ಲದೆ ತಮ್ಮ ಶೌರ್ಯವನ್ನು ತೋರಿಸುವಂತವರಾಗಿದ್ದರು.

ಮುಂಬೈ – ಕರ್ನಾಟಕದ ಪ್ರಜಾಸೋಸಿಯಾಲಿಷ್ಟ ಪಾರ್ಟಿಯ ಅಧ್ಯಕ್ಷರಗಿದ್ದ ರಾಯಣಗೌಡ ತಲ್ಲೂರ ಅವರ ಬಾಲ್ಯ ಸ್ನೇಹಿತ ಮತ್ತು ಒಡನಾಡಿ, ಸ್ವಾತಂತ್ರ್ಯ ಪ್ರೇಮಿ, ಹುಟ್ಟನಿಂದ ಚಳುವಳಿಗಾರರಾದ "ಮುರಗೋಡ ಮಹಾದೇವಪ್ಪನವರು" ಗೋವಾ ವಿಮೋಚನಾ ಸತ್ಯಾಗ್ರಹದ ಆಂದೋಲನದ ಹೊಣೆ ಹೊತ್ತರು. ಸರ್ವರಾಜಕೀಯ ಪಕ್ಷಗಳ ಮುಖಂಡರ ಸಲಹೆಗಾಗಿ ಚಳುವಳಿಯಲ್ಲಿ ಸಕ್ರೀಯವಾಗಿ ಭಾಗವಹಿಸಲು, ಚರ್ಚಿಸುವುದಕ್ಕಾಗಿ ಸಭೆಯನ್ನು ಜುಲೈ ೩, ೧೯೫೫ ರಂದು ರವಿವಾರ ಮಧ್ಯಾಹ್ನ ೨ ಘಂಟೆಗೆ ಹರಿಜನ ಬಾಲಿಕಾಶ್ರಮ (ಇಂದಿನ ಮಹಿಳಾ ವಿಧ್ಯಾಪೀಠ)ದ ಹತ್ತಿರವಿರುವ "ಗಿರೀಶ ಆಶ್ರಮದಲ್ಲಿ"[೧] ಕರೆಯಲಾಗಿತ್ತು. ಸತ್ಯಾಗ್ರಹಿಗಳ ಖರ್ಚುವೆಚ್ಚಕ್ಕಾಗಿ ಸಭೆ ನಿರ್ಣಯ ತೆಗೆದುಕೊಂಡಿತು. ಈ ಸಭೆಯ ಹೊಣೆಯನ್ನು ಮಹಾದೇವಪ್ಪ ಮುರಗೋಡರು ಹೊತ್ತಿದ್ದರು. ಗಜಾನನ ಥೇಟರಿನಲ್ಲಿ 'ಅಮೆಚ್ಯೂರ ನಾಟಕ ಕಂಪನಿ' ಕಿರೇಸೂರ ಇವರಿಂದ "ಹೇಮರಡ್ಡಿ ಮಲ್ಲಮ್ಮ" ನಾಟಕವನ್ನು ಗೋವಾ ಸತ್ಯಾಗ್ರಹಿಂಗಳ ಸಹಾಯಾರ್ಥವಾಗಿ ಆಡಿಸಲು ಕೇಳಿಕೊಂಡರು. ಥೇಟರ ಮಾಲಿಕರಿಗೂ ವಿನಂತಿಸಿಕೊಂಡರು. ಆಟದಿಂದ ಬಂದ ಹಣದಲ್ಲಿ ಸತ್ಯಾಗ್ರಹಿಂಗಳ ಖರ್ಚು–ವೆಚ್ಚ ಕಳೆದರು. ೨೦೦ ರೂ. ಉಳಿದವು. ಆ ಹಣವನ್ನು ಸರ್ವಪಕ್ಷಿಯ ಗೋವಾ ವಿಮೋಚನಾ ಸಹಾಯಕ ಸಮೀತಿಗೆ ಒಪ್ಪಿಸಲಾಯಿತು. ಈ ಕಾರ್ಯವನ್ನು ಮಹಾದೇವಪ್ಪ ಮುರಗೋಡ, ಚನಬಸಪ್ಪ ಹರ್ತಿಯವರು ವಹಿಸಿಕೊಡಲಾಗಿತ್ತು.

ಈ ಸಭೆಯಲ್ಲಿ ಬೇರೆ ಬೇರೆ ಪಕ್ಷದ ಪ್ರತಿನಿಧಿಗಳು, ಚಳುವಳಿ ಪ್ರೇಮಿಗಳು, ಶಿಕ್ಷಕರು, ವಿದ್ಯಾರ್ಥಿಗಳು ಮತ್ತು ಮಹಿಳಾ ಮಣಿಗಳು ಪಾಲ್ಗೊಂಡಿದ್ದರು. ವಿಜಾಪುರದಿಂದ ಎನ್. ಕೆ. ಉಪಾಧ್ಯ ಮತ್ತು ರೇವಮ್ಮ ಕಾರವಾರದಿಂದ ಪ್ರಜಾಸೋಸಾಲಿಷ್ಟ ಪಾರ್ಟಿಯ ಅಧ್ಯಕ್ಷರಾದ ಎಸ್. ಜಿ. ಭಟ್ಟ ಮತ್ತು ಪ್ರಜಾಸೋಸಾಲಿಷ್ಟ ಪಾರ್ಟಿಯ ಸಕ್ರೀಯ ಕಾರ್ಯಕರ್ತೆಯಾದ ಶ್ರೀಮತಿ ಬೈಜುಬಾಯಿ, ಹುಬ್ಬಳ್ಳಿಯ ಮಹಾದೇವಪ್ಪ ಮುರಗೋಡ, ತಡಸದ ಮಠ, ದಿವಂಗತ ಚಿನ್ಮಯಸ್ವಾಮಿ ಓಂಕಾರಮಠ (ಬೆಂಕಿಸ್ವಾಮಿ), ಗುದ್ಲೆಪ್ಪ ಹಳ್ಳಿಕೇರಿ, ವಾಸು ಗುನಾಜಿ ದಿ ನಾಥಪ್ಪೈ, ಎಂ. ಎ. ಮನಿಯಾರ, ದೇವೆಂದ್ರಪ್ಪ ಬಡಿಗೇರ, ಬೆಳಗಾವಿಯಿಂದ ಚನ್ನಬಸಪ್ಪ ಹರ್ತಿ ಸಂಪಗಾಂವಿಯಿಂದ ಚನ್ನಪ್ಪ ವಾಲಿ ಪಾಲ್ಗೊಂಡಿದ್ದರು.

ಈ ಸಭೆಯಲ್ಲಿ ಅಖಿಲ ಕರ್ನಾಟಕ ಗೋವಾ ವಿಮೋಚನಾ ಸಮೀತಿಯನ್ನು ರಚಿಸಲಾಯಿತು. ಮಹಾದೇವಪ್ಪನವರನ್ನು ಸಮಿತಿಯ ಸದಸ್ಯರನ್ನಾಗಿ ಮತ್ತು ಸರ್ವಪಕ್ಷೀಯ ವಿಮೋಚನಾ ಚಳುವಳಿಯ ಸಹಾಯಕ ಸಮೀತಿಯ ಸದಸ್ಯರನ್ನಾಗಿ ಆಯ್ಕೆಮಾಡಲಾಗಿತ್ತು. ಆ ಸಭೆಗೆ ಬಂದಿದ್ದ ಎಲ್ಲರ ಸಲಹೆ

೧. ಸಂಯುಕ್ತ ಕರ್ನಾಟಕ ದಿನಪತ್ರಿಕೆ : ೨೮-೦೬-೧೯೫೫ (ಗೋವಾ ವಿಮೋಚನೆಗೆ ಸರ್ವಪಕ್ಷಗಳ ಸಭೆ ಲೇಖನದಿಂದ)

ಸೂಚನೆ ಪಡೆದು ಕರ್ನಾಟಕದ ಕೀರ್ತಿಗೆ ಕಳಂಕ ಬಾರದಂತೆ ಗೋವಾ ವಿಮೋಚನಾ ಚಳುವಳಿಯಲ್ಲಿ ಭಾಗಿಗಳಾಗಲು ಮಹಾದೇವಪ್ಪ ಮುರಗೋಡ, ಮತ್ತು ರಾಯನಗೌಡ ತಲ್ಲೂರ ೭೦ ಕ್ಕೂ ಹೆಚ್ಚು ತಮ್ಮ ತಮ್ಮ ಅನುಯಾಯಿಗಳಿಗೆ ಕರೆ ಕೊಟ್ಟರು. ಪೋರ್ಚುಗೀಜರ ಸೊಕ್ಕಡಗಿಸಲು ಮಹಾದೇವರ ಮಾತೆಂದರೆ ವೇದವಾಕ್ಯಯಂದು ನಂಬಿದ ಭಕ್ತರು 'ದೇವರ' ಅನುಮತಿಯಂತೆ ಹುಬ್ಬಳ್ಳಿ "ಗಿರೀಶ ಆಶ್ರಮ"ದಲ್ಲಿ ಸಬೆ ಸೇರುವ ಹೋಗುವ ಸಭೆಗೆ ದಿನ ನಿಗದಿಪಡಿಸಿಕೊಂಡರು.

ಭಾರತ ಸರಕಾರವು ಗೋವೆಯನ್ನು ಪ್ರವೇಶಿಸಲು ಆಗಸ್ಟ್ ೯, ೧೯೫೫ರ ಸಭೆಯಲ್ಲಿ ಚರ್ಚಿಸಿ ನಿರ್ಣಯ ತಗೆದುಕೊಂಡಿತ್ತು. ಅದೇ ದಿನ ಕರ ಪತ್ರ ಹೊರಡಿಸಲಾಗಿತ್ತು. ಅದಕ್ಕೆ ಪೋರ್ಚುಗೀಜ ಸರಕಾರವು ಗೋವೆಯಲ್ಲಿ ಯಾರು ಒಳಪ್ರವೇಶಿಸದಂತೆ ಗಡಿಯಲ್ಲಿ ಭದ್ರವಾದ ಕಾವಲು ಇಟ್ಟಿತ್ತು. ನೋಡಿಕೊಂಡಿತ್ತು. ಕರ್ನಾಟಕದ ಸತ್ಯಾಗ್ರಹದ ಮುಖಂಡತ್ವವನ್ನು ದಿ. "ಮಹಾದೇವಪ್ಪ ಮುರಗೋಡ" ಶ್ರೀ ಚನ್ನಪ್ಪ ವಾಲಿ, ಮತ್ತು ವಿಮೋಚನಾ ಕಾರ್ಯದರ್ಶಿಯಾಗಿ ನೇಮಕ ಹೊಂದಿದ್ದ ಶ್ರೀ ಎಸ್. ಜಿ. ಭಟ್ಟ, ಪೀಟರ್ ಆಳ್ವಾರಿಸ್ ವಹಿಸಿಕೊಂಡಿದ್ದರು.

ದಿನಾಂಕ ೦೭-೦೮-೧೯೫೫ ರಂದು ಗೋವೆ ವಿಮೋಚನೆಗೆ ಹೊರಟ ಸತ್ಯಾಗ್ರಹಿಗಳನ್ನು ಸನ್ಮಾನಿಸಿ ಬೀಳ್ಕೊಡಲು ಹುಬ್ಬಳ್ಳಿಯ ದುರ್ಗದ ಬೈಲಿನಲ್ಲಿ ರಾತ್ರಿ ೯.೩೦ ಕ್ಕೆ ಸಾರ್ವಜನಿಕ ಸಭೆ ಕರೆಯಲಾಗಿತ್ತು. ಈ ಸಮಾರಂಭಕ್ಕೆ ಹುಬ್ಬಳ್ಳಿಯ ತರುಣ ವಕೀಲರಾದ ಶ್ರೀ ಎಸ್. ಆರ್. ಬೊಮ್ಮಾಯಿ ಅಧ್ಯಕ್ಷತೆ ವಹಿಸಿದ್ದರು[೧]. ಸತ್ಯಾಗ್ರಹಿ ಸತ್ಯಾಗ್ರಹಿಗಳ ಕುರಿತು ಮುರಗೋಡ ಮಹಾದೇವಪ್ಪನವರು, ಚನ್ನಪ್ಪ ವಾಲಿ, ದಿ. ಎಂ. ಪಿ. ನಾಥ ಪೈ, ಬೆಂಕಿಸ್ವಾಮಿ ಓಂಕಾರಮಠ ಮತ್ತು ತಡಸದಮಠರು ಭಾಷಣ ಮಾಡಿದರು. ಆ ಸಭೆಯಲ್ಲಿ ಚನ್ನಪ್ಪ ವಾಲಿ ಮಾತನಾಡಿ ಹೇಗೋ ನಾವು ಪೋರ್ಚುಗೀಜರ ಕೈಯಲ್ಲಿ ಸಾಯಲಿಕ್ಕೆ ಹೊರಟಿದ್ದೇವೆ. ಸಾವು ನಿಶ್ಚಿತ ಅಲ್ಲಿ, ಆದರೆ ಇಲ್ಲಿ ಸತ್ತರೇನು ಅಲ್ಲಿ ಸತ್ತರೇನು, ಎಲ್ಲವು ಒಂದೇ ಹೆದರುವುದೇಕೆ ತಮ್ಮ ಭಾಷಣದಲ್ಲಿ ಸತ್ಯಾಗ್ರಹಿಗಳಿಗೆ ಪ್ರಚೋದಿಸಿದರು. ಅದೇ ರೀತಿಯಾಗಿ "ಮುರಗೋಡ ಮಹಾದೇವಪ್ಪನವರು" ಮಾತನಾಡಿ, ಸಾವು ನಿಶ್ಚಿತ ಹೌದು, "ಆದರೆ ನಾನು ಸತ್ತರೆ ಗೋವಾದಲ್ಲಿಯೇ ಸಾಯಬೇಕೆಂದು" ಹೇಳುತ್ತಿದ್ದರು. ಇವರ ಬಾಷಣದಿಂದ ಸತ್ಯಾಗ್ರಹಿಗಳ ಮನಸ್ಸು ಕೆರಳಿ ಗೋವಾ ವಿಮೋಚನೆಯಲ್ಲಿ ಭಾಗಿಯಾದರು.

ದಿನಾಂಕ ೦೮-೦೮-೧೯೫೫ ರ ಬೆಳಿಗ್ಗೆ ೯.೩೦ ಕ್ಕೆ ನೂರಕ್ಕಿಂತ ಹೆಚ್ಚು ಜನ ಚಳುವಳಿಕಾರರ ಜೊತೆ ಜೈಕಾರ ಘೋಷಣೆ ಕೂಗುತ್ತ ಬಂದರು. ಚಳುವಳಿಕಾರೆಲ್ಲರೂ ಬಿಳಿಜುಬ್ಬಾ, ಪೈಜಾಮ, ಚೂಪಾದ ಗಾಂಧಿ ಟೊಪ್ಪಿಗೆ, ಬಗಲಿಗೊಂದು ಚೀಲ ಹಾಕಿಕೊಂಡು ೩೫ ವರ್ಷದವ ೨೦ ವರ್ಷದ ಯುವಕನಂತೆ ಕಂಗೊಳಿಸುತ್ತಿದ್ದರು. ಅವರನ್ನು ನೋಡಿ ಮಹಾದೇವಪ್ಪನವರು ಚನ್ನಪ್ಪ ವಾಲಿಯವರನ್ನು ಕಣ್ ಸನ್ನೆ ಮಾಡಿ ಕರೆದು, ಇವರು ಹಳ್ಳಿಕೇರಿ ಗುದ್ಲೆಪ್ಪನವರ ಪರಮಶಿಷ್ಯರು. ಇವರಿಗೆ ನನ್ನನು ಮುಗಿಸಲಿಕ್ಕೆ ಕಳಿಸಿದಂತೆ ಕಾಣುತ್ತಿದೆ ಎಂದನು. ಇವನು ನಾಡ ಪಿಸ್ತೂಲ ತಯಾರಿಸುವುದಲ್ಲಿ ಬಹುನಿಪುಣ.

---

೧. ಗೋವಾ ವಿಮೋಚನೆಯಲ್ಲಿ ಕರ್ನಾಟಕದ ಕ್ರಾಂತಿವೀರರು. ಲೇಖಕ : ಎಸ್. ಎಂ. ತಡಸದಮಠ

೧೯೭೦–೭೧ ರಲ್ಲಿ ಹಳೆ ಹುಬ್ಬಳ್ಳಿಯ ಪೋಲಿಸಿನವರು ಕಂಟ್ರಿ ಪಿಸ್ತೂಲ ಮಾಡುವವರ ಮೇಲೆ ಕೇಸ್ ದಾಖಲು ಮಾಡಿದ್ದರು. ಆ ಕೇಸು ಹುಬ್ಬಳ್ಳಿಯ JMFC ಪ್ರಥಮ ದರ್ಜೆಯ ಕೋರ್ಟಿನಲ್ಲಿ ನಡೆದಿತ್ತು. ಆ ಕೇಸನ್ನು DC ಆರ್ಮ್ಸ ಆ್ಯಕ್ಟ ಪ್ರಕಾರ ಮಂಜೂರಾತಿ ಪಡೆಯದೆ AC ಇವರಿಂದ ಮಂಜೂರಾತಿ ಪಡೆದು ಕೇಸನ್ನು ಹಾಕಲಾಗಿತ್ತು. ಇದರಿಂದ ಬಿಡುಗಡೆಯಾಗಿ ಬಂದಿದ್ದ ಇವನ ಪರ ನಾನು ವಕಾಲತ್ತು ನಡೆಸಿದ್ದೆ" ಎಂದು ಸಂಶಯವನ್ನು ವ್ಯಕ್ತಪಡಿಸಿದರು. ಈಗಿನ ಜನತಾ ಬಜಾರವಾಗಿದ್ದು, ಆಗಿನ ಬಸ್ ಸ್ಟ್ಯಾಂಡ್ ಆಗಿತ್ತು. ಚಳುವಳಿಕಾರರು ಬಸ್–ಹತ್ತುವವರೆಗೆ, ಸರಕಾರದ ಜನರ ಮತ್ತು ಪತ್ರಕರ್ತರ ಕಣ್ಣು ಅವರ ಮೇಲೆಯೇ ಇತ್ತು. ಸತ್ಯಾಗ್ರಹಿಗಳನ್ನು ಬಸ್ಸು ಹತ್ತಿಸಿ ಬೀಳ್ಕೊಟ್ಟರು.

ಸತ್ಯಾಗ್ರಹಿಗಳು ಕಾರವಾರವನ್ನು ಸಾಯಂಕಾಲ ೪ ಘಂಟೆಗೆ ತಲುಪಿದರು. ಆಗ ಕಾರವಾರ ಗೋವಾ ವಿಮೋಚನಾ ಸರ್ವ ಪಕ್ಷಗಳಿಗೆ ಕೇಂದ್ರ ಸ್ಥಾನವಾಗಿತ್ತು. ಚಳುವಳಿಕಾರರನ್ನು ಗೋವಾ ವಿಮೋಚನಾ ಸಮಿತಿಯ ಕಾರ್ಯದರ್ಶಿ ಎಸ್. ಜಿ. ಭಟ್ಟ ತಮ್ಮ ಶಿಬಿರದವರೊಡಗೂಡಿ ಬಂದು ಬರಮಾಡಿಕೊಂಡರು. ಅಲ್ಲಿ ಉಳಿದುಕೊಳ್ಳಲಿಕ್ಕೆ ವ್ಯವಸ್ಥೆ ಮಾಡಿದ್ದರು. ಊಟ, ಉಪಚಾರ ವ್ಯವಸ್ಥೆಯೂ ಮಾಡಿದ್ದರು. ಊಟ ಮುಗಿದ ಮೇಲೆ ಅವರೆಲ್ಲರು ಸೇರಿ "ಬೈಟಕ ಮಾಡಿದರು". ಅಲ್ಲಿ ಪರದೇಶದ ಮತ್ತು ನಮ್ಮ ದೇಶದ ಪತ್ರಿಕಾವರಧಿಗಾರರು ಇದ್ದರು. ಅವರು ಸಂದರ್ಶನ ಮಾಡಿದರು. ಮಹಾದೇವಪ್ಪ ಮುರಗೋಡರು ಮತ್ತು ಚನ್ನಪ್ಪ ವಾಲಿ ಊಟ ಮುಗಿಸಿ ಕಾರವಾರದ ಸಮುದ್ರದ ಮರಳಿನ ಮೇಲೆ ಸ್ವಲ್ಪ ಹೊತ್ತು ವಿಶ್ರಾಂತಿಗಾಗಿ ಹೊರಟರು. ಅವರ ಹಿಂದೆ ಹಿಂದೆ ದೇವೇಂದ್ರಪ್ಪ ಬಡಿಗೇರ ಬರಹತ್ತಿದ್ದರಿಂದ ಮಹಾದೇವರು ಪುನಃ ತಮ್ಮ ಸಂಶಯವನ್ನು ಪ್ರಕಟಿಸಿದರು. ವರದಿಗಾರರು ತಮ್ಮ ಸೊಟ್ಟಬಾಯಿಂದ ಇಂಗ್ಲೀಷಿನಲ್ಲಿ ಸಂದರ್ಶನ ಮಾಡುತ್ತಿದ್ದರು. ಇಂಗ್ಲೀಷ ಭಾಷೆ ನಮಗೆ ತಿಳಿಯುತ್ತಿದ್ದಿಲ್ಲ, ಅವರು ಕೇಳುವ ಪ್ರಶ್ನೆಗಳಲ್ಲಿ ಸತ್ಯಾಗ್ರಹ ಏಕೆ ಮಾಡುತ್ತೀರಿ? ಇದರಿಂದ ನಿಮಗೇನು ಲಾಭ, ಎಂದು ದ್ವಿಭಾಷೆಗಳಲ್ಲಿ ಕೇಳುತ್ತಿದ್ದರು. ದ್ವಿಭಾಷೆಯಿಂದ ಮಹಾದೇವಪ್ಪ ಮುರಗೋಡ ವರದಿಗಾರರು ಕೇಳುವ ಪ್ರಶ್ನೆಗಳಿಗೆ ಉತ್ತರಿಸುತ್ತಿದ್ದರು. ಗೋವೆ ಭಾರತದ ಒಂದು ಅಂಗ, ಪೋರ್ಚುಗೀಜರ ಆಡಳಿತ ಹೋಗಬೇಕು. ಎಂದು ಮುರಗೋಡ ಮಹಾದೇವಪ್ಪನವರು ಉತ್ತರಿಸಿದರು[೨].

ಮಹಾದೇವಪ್ಪನವರು ಸತ್ಯಾಗ್ರಹಿಗಳಿಗೆ ಯಾವಾಗ ಹೋಗುತ್ತೇವೆ, ಹೇಗೆ ಹೋಗುತ್ತೇವೆ ಎಂದು ಹೇಳಬಾರದೆಂದು ಮೊದಲೇ ಸೂಚನೆ ಕೊಟ್ಟಿದ್ದರು. ಆದರೆ ಜೊತೆಗೆ ಪತ್ರಿಕಾವರಧಿಗಾರರು ಇರುವದರಿಂದ ಸತ್ಯಾಗ್ರಹಿಗಳಿಗ ದಯವಿಲ್ಲದೆ ಪೋರ್ಚುಗೀಜರಿಂದ ದಬ್ಬಾಳಿಕೆಯಾಗಲಿಲ್ಲ. ವೀರ ನಾರಿ ಮಣಿ "ಬೈಜುಬಾಯಿ ಬಾಡದ" ಜೊತೆಗಿದ್ದಳು. ಇವಳು ಪ್ರಜಾಸೋಸಿಯಾಲಿಷ್ಟ ಪಾರ್ಟಿಯ ಸಕ್ರೀಯ ಕಾರ್ಯಕರ್ತೆ. ಇವಳು ಒಬ್ಬಂಟಿಗಳಾಗಿ ಇರುವದನ್ನು ನೋಡಿ ಪತ್ರಿಕಾವರಿಧಿಗಾರರು ನೀನು ಹೆಣ್ಣು ಮಗಳು. ಅದರಲ್ಲಿ ಒಬ್ಬಂಟಿಗಳೇಕೆ? ಪ್ರಶ್ನೆಗಳಿಗೆ ಅವಳ ಸರಿಯಾದ ಉತ್ತರವಿತ್ತಳು. ಅವರನ್ನು ಮೂಕರನ್ನಾಗಿ ಮಾಡಿದಳು.

---

೧. ಗೋವಾ ವಿಮೋಚನೆಯಲ್ಲಿ ಕ್ರಾಂತಿಕಾರರು : ಲೇಖಕ ತಡಸದಮಠ
೨. ಗೋವಾ ವಿಮೋಚನೆಯಲ್ಲಿ ಕ್ರಾಂತಿಕಾರರು : ಲೇಖಕ ತಡಸದಮಠ

ಸತ್ಯಾಗ್ರಹಿಗಳನ್ನು ಪ್ರತಿಸಲದಂತೆ ಈ ಸಲವೂ ರಾತ್ರಿ ವೇಳೆಯಲ್ಲಿಯೇ ಗೋವಾಗಡಿಗೆ ಕಳಿಸಬೇಕೆಂದು ಸ್ಥಳೀಯ ಕಾರ್ಯಕರ್ತರ ವಿಚಾರವಾಗಿತ್ತು. ಚನ್ನಪ್ಪ ವಾಲಿ ಅದಕ್ಕೆ ಒಪ್ಪಿಗೆ ಕೊಡಲಿಲ್ಲ. ಸತ್ಯಾಗ್ರಹ ಹಗಲಿನಲ್ಲಿಯೇ ಬಹಿರಂಗವಾಗಿ ನಡೆಯಬೇಕು. ಕಳ್ಳಮಾರ್ಗ ಬಿಟ್ಟು ರಾಜಮಾರ್ಗದಿಂದ ಗೋವೆಯನ್ನು ಪ್ರವೇಶಿಸಬೇಕೆಂದು ಪಟ್ಟುಹಿಡಿದರು. ಅದಕ್ಕೊಪ್ಪದ ಸಮೀತಿಯವರು ಮತ್ತು ಸತ್ಯಾಗ್ರಹಿಗಳು ರಾಜಮಾರ್ಗ ಬಿಟ್ಟು ಗುಡ್ಡಗಾಡು ಮಾರ್ಗವಾಗಿ ಸಾಗಬೇಕೆಂದು ನಿರ್ಧರಿಸಿದರು. ಕಾರವಾರದಿಂದ ಮಾರ್ಜಾಳ ಮಾರ್ಗವಾಗಿ ಗುಡ್ಡಗಾಡ ಪ್ರದೇಶವಾದ್ದರಿಂದ ರಾತ್ರಿವೇಳೆಯಲ್ಲಿ ಹೋಗುವುದನ್ನು ನಿರ್ಣಯಿಸಲಾಗಿತ್ತು. ರಾತ್ರಿ ೧೨ ಘಂಟೆಯವರೆಗೆ ನಡೆದು ಮಹಾದೇವರು ಒಂದು ಕಡೆ ಕುಳಿತರು. ನೀರಡಿಕೆ ಆಗಿದೆ ಎಂದು ತಮ್ಮ ಜೊತೆಬಂದಿದ್ದ ಅನುಯಾಯಿಗಳಿಗೆ ಹೇಳಲಾಗಿ, ನಾಯಕಪ್ಪ ಮಾಸ್ತರರು ನೀರತರಲಿಕ್ಕೆ ಚರಗಿ ಕೊಡ ಇಲ್ಲ ಎಂದಾಗ ಮಹಾದೇವರು ಅವನಿಗೆ ಅರಭಿಕೊಟ್ಟು ಕಳಿಸಿದರು. ಆ ಅರಭಿಯನ್ನು ತೊಯಿಸಿಕೊಂಡು ಬರಲಿಕ್ಕೆ ಸೂಚನೆ ನೀಡಿದರು. ನಾಯಕಪ್ಪ ಮಾಸ್ತರರು ಅರಭಿ ಹಿಡಿದಿಕೊಂಡು ಕಗ್ಗತ್ತಲ ರಾತ್ರಿಯಲ್ಲಿ ಹೋಗುವುದು ಹೇಗೆ ಎಂದು ಚಿಂತಿಸತೊಡಗಿದರು. ಮಹಾದೇವರು ಅವನಿಗೆ ಮಾರ್ಗದರ್ಶನ ಮಾಡಿದರು. ನೀನು ಧ್ಯಾನ ಮಾಡುತ್ತಾ ಹೋಗು ಎಂದಾಗ ಕಗ್ಗತ್ತಲು ಹೊಡೆದೋಡಿಸುವ ದೊಡ್ಡ ಕೋಲ್ಮಿಂಚಿನ ಹಾಗೆ ಬೆಳಕು ಕಂಡಿತು. ಆ ಬೆಳಕಿನಲ್ಲಿ ದೊಡ್ಡ ಸರ್ಪ ಹೆಡೆ ಬಿಚ್ಚಿದಂತೆ ತೋರುತ್ತಿತ್ತು. ಧ್ಯಾನದಿಂದ ಆ ಹೆಡೆ ಬಿಚ್ಚಿದ ಹಾವು (ಸರ್ಪ) ಹೋಗಿ ನೀರು ಕಂಡಿತು. ಅದರಲ್ಲಿ ಅರಭಿ ಎದ್ದಿ ತಂದು ಮಹಾದೇವಪ್ಪನವರ ನೀರಿನ ದಾಹವನ್ನು ಕಳೆದರು.

ಆಗಸ್ಟ್ ೯ ರಂದು ಮುಂಜಾನೆ ೮.೩೦ ಕ್ಕೆ ಫಲಹಾರ ಮುಗಿಸಿದರು. ಕಾರವಾರದಿಂದ ಮಾರ್ಜಾಳಿ ಗಡಿಗೆ ಹೊರಟ ಸತ್ಯಾಗ್ರಹಿಗಳು ಮಾರ್ಜಾಳಿಯವರೆಗೆ (ಕಾಳಿ ನದಿ ದಾಟುವುದನ್ನು ಬಿಟ್ಟು) ಬಸ್ಸಿನ ಪ್ರಯಾಣ ಮುಂದೆ ಕಾಲ ನಡಗೆಯಿಂದ ಅಂಗಡಿಯ ಮಾರ್ಗವಾಗಿ ಗೋವೆಯನ್ನು ಪ್ರವೇಶಿಸುವುದು ಎಂದು ನಿಶ್ಚಯಿಸಲಾಗಿತ್ತು. ಮಾರ್ಜಾಳಿಯಿಂದ ೩ ಮೈಲು ದೂರವಿರುವ ಅಂಗಡಿ ಗ್ರಾಮಕ್ಕೆ ಚಳುವಳಿಕಾರರು ಬಂದು ಅಲ್ಲಿಯ 'ಶಿವನಾಥ ದೇವಾಲಯದಲ್ಲಿ' ಕೆಲ ಹೊತ್ತು ವಿಶ್ರಮಿಸಿದರು. ಶಿಭಿರದವರಿಂದ ತಂದಿದ್ದ ಊಟ ಉಪಚಾರ ಮಾಡಿದರು. ಅಲ್ಲಿಂದ ಅಂಗಡಿಯ ಹಳ್ಳಿಯಿಂದ ಗೋವಾಗಡಿ ೬ ಮೈಲು ದೂರವಿತ್ತು. ಚಳುವಳಿಕಾರರಿಗೆ ಅಲ್ಲಿಗೆ ಹೋಗಲು ಸರಿಯಾದ ದಾರಿ ಇರಲಿಲ್ಲ. ಗುಡ್ಡಗಾಡದಲ್ಲಿಯೇ ಹೋಗಬೇಕಾಯಿತು.

ಅಂಗಡಿಯಿಂದ ಪ್ರಯಾಣ :

ಸತ್ಯಾಗ್ರಹಿಗಳು ಅಂಗಡಿ ಹಳ್ಳಿಯಿಂದ ೧೧.೧೫ ಘಂಟೆಗೆ ಹೊರಟರು. ಹೆಚ್ಚಿನ ಬಟ್ಟೆ-ಬರೆಗಳನ್ನು ರೊಕ್ಕ-ರೂಪಾಯಿಗಳನ್ನು ಒಯ್ದರೆ ಪೋರ್ಚುಗೀಜ ಸೈನಿಕರು, ಕಸಿದುಕೊಳ್ಳುವರೆಂದು ಮೊದಲೇ ಎಚ್ಚರಿಕೆ ವಹಿಸಿದ್ದರು. ಉಟ್ಟ ಬಟ್ಟೆಯ ಮೇಲೆ ಹೊರಟರು. ಜೊತೆಯಲ್ಲಿ ತಂದಿದ್ದ ರೊಕ್ಕ-ರೂಪಾಯಿಗಳನ್ನು ತಮ್ಮ ಜೊತೆ ಬಿಳ್ಕೊಡಲು, ಬಂದಿದ್ದ ಆಪ್ತೇಸ್ಟರಿಗೆ ಬಂಧುಬಳಗದವರಿಗೆ ಒಪ್ಪಿಸಿಬಿಟ್ಟರು. ಚನ್ನಪ್ಪ ವಾಲಿಯವರು, ಮುರಗೋಡ ಮಹಾದೇವಪ್ಪನವರು ಹೊದೆಯಲಿಕ್ಕೆ ಒಂದು ಕಂಬಳಿ, ಒಂದು ಬ್ಯಾಟರಿ ರಾತ್ರಿಸಮಯ ಪಯಣವಿದ್ದುದರಿಂದ ಬೆಳಕಿಗಾಗಿ ಮತ್ತು ಐದು ರೂಪಾಯಿಗಳನ್ನು ಇಟ್ಟುಕೊಂಡು ಹೊರಟರು.

ಗುಡ್ಡಗಾಡು ದಾರಿ ಅದಾಗಿತ್ತು. ಸತ್ಯಾಗ್ರಹದಲ್ಲಿ ಪಾಲ್ಗೊಳ್ಳಲು ಜೊತೆಯಾಗಿ ಬಂದವರಲ್ಲಿ ಅನೇಕರು ಅಂಗಡಿಯಲ್ಲಿಯೇ ಹಿಂದುರುಗಿದರು. ಸಂಯುಕ್ತ ಕರ್ನಾಟಕದ ಪ್ರತಿನಿಧಿ ಮತ್ತು ವಿಮೋಚನೆಯ ೪-೫ ಜನ ಆಪ್ತಮಿತ್ರರು ಸತ್ಯಾಗ್ರಹಿಗಳನ್ನು ಹಿಂಬಾಲಿಸಿದರು. ೪-೫ ಮೈಲು ನಡೆಯುವದರೊಳಗಾಗಿ ಭಯಪಡುವ ದಟ್ಟ ಅಡವಿಯನ್ನು ಪ್ರವೇಶ ಮಾಡಿದರು. ಗಾಡಾಂಧಕಾರದ ಕರಾಳ ರಾತ್ರಿಯಿತ್ತು. ಕ್ರೂರ ಪ್ರಾಣಿಗಳು ಓಡಾಡುತ್ತಿದ್ದವು, ಮುಳ್ಳುಕಂಟಿಗಳು ಮೈಪರಿಚುತ್ತಿದ್ದವು, ಮೈ ಮೇಲಿನ ಶರ್ಟು-ಧೋತರುಗಳು ಹರಿದವು. ಜಿಟಿ ಜಿಟಿ ಮಳೆ, ಪ್ರಾಣಿಗಳ ಕೂಗಾಟ, ಹುಳ-ಹುಪ್ಪಡಿಗಳ ಚೀರಾಟ, ಕಾಲಿಡಲು ಸಂದು ಇರದ ದಟ್ಟವಾದ ಕಾಡಿನಲ್ಲಿ ಪ್ರವೇಶಿಸಿ ನಡೆಯುವಾಗ ಹಳ್ಳ-ಕೊಳ್ಳ ದಾಟಬೇಕಾಗುತ್ತಿತ್ತು. ಕೆಲವಡೆ ಕಾಲು ಜಾರುತ್ತಿದ್ದವು. ಮಹಾದೇವಪ್ಪನವರು ಒಂದೆರಡು ಕಡೆ ಕಾಲು ಜಾರಿ ಬಿದ್ದರು. ಎಲ್ಲರು ತಮ್ಮ ತಮ್ಮ ಪಾದರಕ್ಷೆಗಳನ್ನು ಕೈಯಲ್ಲಿ ಹಿಡಿದುಕೊಂಡು ತಡವರಿಸುತ್ತಾ ನಡೆದರು. ಅನೇಕ ಕಡೆ ಏರು, ದಿನ್ನೆಗಳನ್ನು ಏರಿ ಇಳಿಯಬೇಕಾಗುತ್ತಿತ್ತು. ಶುಭ್ರವಾದ ಆಕಾಶವಿತ್ತು. ದಟ್ಟವಾದ ಕಾಡಿನಲ್ಲಿ ದಾರಿ ಮಾಡಿಕೊಡಲಿಕ್ಕೆ ಕೊಯ್ತ ಹಿಡಿದು ಗಿಡಗಂಟಿಗಳನ್ನು ಕಡಿಯುತ್ತಾ ಮಾರ್ಗದರ್ಶಕರಾಗಿ ಇಬ್ಬರು ಬಂಟರನ್ನು ವಿಮೋಚನಾ ಸಮೀತಿಯವರು ಕಳಿಸಿದ್ದರು. ಅವರು ನಡುವೆ ಬಿಟ್ಟ ಮರಳಿದರು. ಆದರೆ ಮಾರ್ಗ ಹೊಸದಾಗಿದ್ದರಿಂದ ದಾರಿ ತಪ್ಪಿತು. ೧೫ ಮೈಲು ದಾರಿ ತಪ್ಪಿ ಕಾಡಿನಲ್ಲಿ ಸುತ್ತಾಡಿದರು. ಬಹಳಷ್ಟು ದನಿವಾಯಿತು. ದನಿವು ಆರಿಸಿಕೊಳ್ಳುವುದಕ್ಕಾಗಿ ಅಲ್ಲಿಯೇ ಗಿಡದ ಬುಡದಲ್ಲಿ ಕುಳಿತು ಶಿಬಿರದವರ ಕೊಟ್ಟ-ರೊಟ್ಟಿಯ ಸುರಳಿಯನ್ನು ನುಂಗಿ ನೀರುಕುಡಿದ ಮೇಲೆ ಮುಂದಿನ ಪ್ರಯಾಣಕ್ಕೆ ಅನಿಯಾದರು. ಮಾರ್ಗದರ್ಶಕರಾಗಿ ಎಸ್. ಜಿ. ಭಟ್ಟರು ಪ್ರಾಮಾಣಿಕ ಅನುಯಾಯಿ ಗೋಮಾಂತಕ ದಳದ ಕ್ರಾಂತಿಕಾರಿ ಯುವಕ, ಸ್ಫೂರದ್ರೂಪಿ, ಉತ್ಸಾಹಿ, ಗೋವೆ ಮೂಲೆ ಮೂಲೆಯನ್ನು ಬಲ್ಲವನಾಗಿದ್ದ ಜೊತೆಗೆ ವಾಸು ಗುಣಾಜಿ ಇದ್ದರು.

ಗೋವೆಯ ಅರಣ್ಯದಲ್ಲಿ :

ಚಳುವಳಿಕಾರರು 'ಮೈಂಗಿಣಿ' ಮಾರ್ಗವನ್ನು ಹಿಡಿದರು. ಗೋವೆಯ ಯಾವುದೇ ಹಳ್ಳಿಗೆ ಹೋಗಬೇಕಾದರೆ ದೂರದ ಅಡವಿಯಲ್ಲಿ ನಡೆದುಕೊಂಡೆ ಹೋಗಬೇಕಾಗುತ್ತಿತ್ತು. ಕಾಲು ದಾರಿ ಹಿಡಿದು ಮಧ್ಯಾಹ್ನ ೨ ಘಂಟೆಗೆ ಗೋವೆಯ ಗಡಿ ತಲುಪಿದರು. 'ಮೈಂಗಿಣಿ' ಮಾರ್ಗವಾಗಿ ಹೋಗುವ ಗೋಪನಟ್ಟಿ ಪೈಂಗಿಣಿ[೧] ರಸ್ತೆ ಸಿಕ್ಕಿತು. ರಸ್ತೆಯಲ್ಲಿ ಹೋಗುವಾಗ ಹೊಲಗದ್ದೆಗಳಲ್ಲಿ ಕೆಲಸ ಮಾಡುತ್ತಿದ್ದ ರೈತಸ್ತ್ರೀಯರ ಇವರನ್ನು ನೋಡಿದ ಕೂಡಲೇ ಓಡಿಹೋಗಿತ್ತಿದ್ದರು. ಹಾಗೆ ಮುಂದೆ ದಾರಿ ಕ್ರಯಿಸುತ್ತಿದ್ದಂತೆ ಇಬ್ಬರು ಸೈಕಲ್ ಸವಾರರು ಬಂದರು. "ಮಹಾದೇವಪ್ಪ ಮುರಗೋಡ" ಮತ್ತು "ಎಸ್. ಜಿ. ಭಟ್ಟ" ಕೊಂಕಣಿ ಭಾಷೆಯಲ್ಲಿ ಮಾತನಾಡಿ ಕೇಳಿ ಮಾರ್ಗವನ್ನು ತಿಳಿದುಕೊಂಡರು.

ಚಳುವಳಿಕಾರರ ಮೇಲೆ ಅವರ ಅನುಕಂಪವಿತ್ತು. ಪೋರ್ಚುಗೀಜರ ಎರಡು ಜೀಪುಗಳು ಇದೀಗ ತಾನೆ ಬಂದು ಹೋದದ್ದನ್ನು ತಿಳಿಸಿ ಸಹಾನುಭೂತಿ ತೋರಿಸಿದರು. ಚಳುವಳಿಕಾರರು ರಾತ್ರಿ

---

೧. ಗೋವೆಯಡಿಯಲ್ಲಿ ಸತ್ಯಾಗ್ರಹಿಗಳು : ಸಂಯುಕ್ತ ಕರ್ನಾಟಕ ದಿನಪತ್ರಿಕೆ. ೧೩-೦೮-೧೯೫೫

೮ ಘಂಟೆಯವರೆಗೆ ಕಾಡಿನಲ್ಲಿ ಕಳೆದರು. ಮಳೆಗೆ ಸಿಕ್ಕಿಬಿದ್ದರು. ನಂತರ ಅಲ್ಲಿಯೇ ವಿಶ್ರಮಿಸಿದರು, ಜೊತೆಯಲ್ಲಿ ತಂದಿದ್ದ ಚಪಾತಿ, ಅವಲಕ್ಕಿಯನ್ನು ತಿಂದು ಹಸಿವೆಯನ್ನು ಹಿಂಗಿಸಿಕೊಂಡರು, ರಾತ್ರಿ ಮಲಗಲಿಕ್ಕೆ ತೊಂದರೆಯಾಯಿತು. ಉಟ್ಟ-ಉಡುಪಿನ ಮೇಲೆ ಬಂದಿದ್ದರಿಂದ ಹಾಸಲಿಕ್ಕೆ, ಹೊದೆಯಲಿಕ್ಕೆ ಹತ್ತಿರ ಏನು ಇರಲಿಲ್ಲ. ಹುಲ್ಲು ಕಡ್ಡಿ ಮೈಗೆ ಚುಚ್ಚುತ್ತಿದ್ದವು. ಸುತ್ತ-ಮುತ್ತ ಹಾವುಗಳು ಮತ್ತು ಕಾಡ ಮೃಗಗಳು ಸುಳಿದಾಡುತ್ತಿದ್ದವು. ಇವರಿಗೆ ಬೆಳಕಿಗಾಗಿ ಏನು ಇರಲಿಲ್ಲ. ೪-೫ ಜನರಲ್ಲಿ ಬೆಂಕಿಪೆಟ್ಟಿಗೆಗಳಿದ್ದವು. 'ಮಹಾದೇವಪ್ಪ ಮುರಗೋಡರು' ಹಿಂಬಾಲ ತಂದಿದ್ದ ಬ್ಯಾಟರಿ ಇತ್ತು. ಅದು ನಡುವೇ ಕೈಕೊಟ್ಟಿತ್ತು. ಮೃಗಗಳನ್ನು ಬೆದರಿಸಲು, ಹಾವುಗಳನ್ನು ಹೆದರಿಸಲು ಯಾವ ಸಲಕರಣೆಗಳು ಇರಲಿಲ್ಲ. ಬಾಯಿಯ ಸಪ್ಪಳ ಮಾಡಿ ಬೆದರಿಸುತ್ತಿದ್ದರು.

"ಕಾನಕೋಣಂ"ದ ಅಡವಿಯಲ್ಲಿ :

ಗಾಡಾಂಧಕಾರದ ೨ ಘಂಟೆಯವರೆಗೆ ಹೊತ್ತು ಕಳೆದು ಮತ್ತೆ ಕೆಲ ಮೈಲು ನಡೆದರು. ನಂತರ "ಕೊಲಂ ಪಣಜಿ"ಯ ರಾಜಮಾರ್ಗ ಕಾಣಿಸಿಕೊಂಡಿತು. ನಡೆದುಕೊಂಡು ಹೋಗುವಾಗ ಮಾರ್ಗ ಮಧ್ಯದಲ್ಲಿ ಎರಡು ದೊಡ್ಡ ಸೇತುವೆಗಳಿದ್ದವು. ಅಲ್ಲಿ ಪೋರ್ಚುಗೀಜರು ಸೈನ್ಯದ ಬೀಡಾರ ಇಟ್ಟಿದ್ದರು. ಅಲ್ಲಿಂದ ೬ ಮೈಲು ಗತಿಸಿದ ನಂತರ ಕಾನಕೋಣಂ ಹೊಕ್ಕರು, ಅದೊಂದು ತಾಲೂಕಾ ಸ್ಥಳವಾಗಿತ್ತು. ಅದು ಒಂದು ಮೈಲು ದೂರ ಇರುವಾಗ ಒಬ್ಬ ಮುದುಕ ಸತ್ಯಾಗ್ರಹಿಗಳನ್ನೆಲ್ಲ ಕರೆದು ಕುಡಿಯಲು ನೀರುಕೊಟ್ಟು, ಪೋರ್ಚುಗೀಜರ ದಬ್ಬಾಳಿಕೆಗೆ ಬೆಸತ್ತು ಹೋಗಿದ್ದನ್ನು ದುಃಖದಿಂದ ವಿವರಿಸಿದನು.

'ಕಾನಕೋಣಂ' ತಲುಪಿದಾಗ ಬೆಳಗಿನ ಜಾವ ೬ ಘಂಟೆಯಾಗಿತ್ತು. ಮಿಲಟರಿ, ಪೋಲಿಸ್ ಠಾಣೆಗಳು ಊರ ಮಧ್ಯದಲ್ಲಿದ್ದವು. ನಾಯಿಗಳ ಬೊಗಳಾಟ ಕೇಳಿ ಘಾತವಾಯಿತೆಂದು ನಿದ್ದೆಯಲ್ಲಿದ್ದ ಮಿಲಟರಿ ಮತ್ತು ಪೋರ್ಚುಗೀಜ ಅಧಿಕಾರಿಗಳು ರೈಪಲ್ಲು-ಸ್ಟೆನ್‌ಗನಗಳನ್ನು ಹಿಡಿದು ಬಂದು ಸುತ್ತುಗಟ್ಟಿದರು. ಸ್ಥೂಲಕಾಯದ "ಮಹಾದೇವಪ್ಪ ಮುರಗೋಡ" ಕೆಲ ಜನ ಚಳುವಳಿಕಾರರು ಹಿಂದೆ ಉಳಿದಿದ್ದರು. ಅವರನ್ನು ಜೀಮುಕೊಟ್ಟು ಕರೆತರಲು ಕಳಿಸಿದರು. ಹಿಂದುಳಿದಿದ್ದನ್ನು ನೋಡಿ ಪೋರ್ಚುಗೀಜ ಸೈನಿಕರು, ಗಹಿಗಹಿಸಿ ನಕ್ಕರು, ಎಲಿಫಂಟ್! ಎಲಿಫಂಟ್ ಎಂದು ಜುಬ್ಬಾಹಿಡಿದು ಜಗ್ಗತೊಡಗಿದರು. ಮುಂದೆ ಬಂದಿದ್ದ 'ಉದರ' ನೋಡಿ ಬಾರಿಸಹತ್ತಿದ್ದರು. ತುಂಬಿದ 'ಕುಂಡಿಗೆ', 'ಗನ್ನ' ಹಿಂಬಾಗದಿಂದ ಜಜ್ಜುತ್ತಿದ್ದರು (ಹೊಡೆಯುತ್ತಿದ್ದರು). ಟೊಪ್ಪಿಗೆ ತಗೆದರು, ಬೋಳು ತಲೆಗೆ 'ತಬಲಾ' ಬಡಿದಂತೆ ಬಡಿದರು. ಹೊದ್ದಿದ್ದ ಕಂಬಳಿಯನ್ನು ಕಿತ್ತು ಬೀಸಾಕಿದರು. ಆ ಮಿಲಟರಿ ಸೈನಿಕರಲ್ಲಿ ಒಬ್ಬ ನೂಕಿದ, ಇನ್ನೊಬ್ಬ ಅಡ್ಡಗಾಲ ಬಡೆದ, ಮಹಾದೇವಪ್ಪನವರು ಅಂಗಾತ ಬಿದ್ದರು. ಪೋರ್ಚುಗೀಜ ಸೈನಿಕರು ಅವರನ್ನು ಭೂಟಗಾಲಿನಿಂದ ಹತ್ತಿ ತುಳಿಯತೊಡಗಿದರು. ಯೋಗಾಸನ ಮಾಡಿದ ಶರೀರ, ಗಟ್ಟಿಗೊಂಡಿದ್ದರಿಂದ, ಮಹಾದೇವಪ್ಪನವರು ಚಂಡಿನಂತೆ ಉಬ್ಬುತ್ತಿದ್ದರು. ಅವರ ತುಳಿತ ಇರುವೆಯ ತುಳಿತದಂತೆ ಅನಿಸುತ್ತಿತ್ತು. ಕರೆಯಲು ಬಂದ ಪೋಲಿಸರು ಗದ್ದೆಯಲ್ಲಿ ಉರುಳಿಸಿ

ಚೆನ್ನಾಗಿ ಥಳಿಸಿ ಕರೆತಂದರು. ಮಹಾದೇವಪ್ಪನವರು ಅಲ್ಲಾಡಲಿಲ್ಲ, ಕಣ್ಣೀರು ಸುರಿಸಲಿಲ್ಲ, ಅವರಿಗೆ ದುಃಖವಾದದ್ದು ಶ್ರೀಮತಿ ಬೈಜುಬಾಯಿಯ ಸ್ಥಿತಿಯನ್ನು ನೋಡಿ ಅವಳನ್ನು ಪೋರ್ಚುಗೀಜರು ಎಳೆದುಕೊಂಡು ಹೋಗುವಾಗ ನಾವೆಲ್ಲರು ಶಂಡರಂತೆ ಅಸಹಾಯಕರಾಗಿ ನೋಡುತ್ತಿ(ದ್ದೆವು)ದ್ದರು.

ಕರ್ನಾಟಕದ ಸತ್ಯಾಗ್ರಹಿಗಳು ಅನೇಕ ತಂಡಗಳಲ್ಲಿ ಇದು ಪ್ರಥಮ ತಂಡ, ಗೋವಾಗಡಿ ಪ್ರದೇಶದಲ್ಲಿರುವ ಕಾನಕೋಣಂ ಮೇಲೆ ಮುಂದೆ ಹೋಗಿದ್ದ ತಂಡದ ಕಾರ್ಯಕರ್ತರು ಸಾಹಸದಿಂದ ಧ್ವಜವನ್ನು ಹಾರಿಸಿದರು. ಪೋರ್ಚುಗೀಜರ ಇನ್ಸ್ಪೆಕ್ಟರ ಒಳ್ಳೆಯ ಮನುಷ್ಯ, ಗೋಲಿಬಾರಿಗೆ ಅನುಮತಿ ಕೊಡಲಿಲ್ಲ. ಸತ್ಯಾಗ್ರಹಿಗಳು ೨೦ ಮೈಲು ನಡೆದು ಸರಕಾರಿ ರೋಡ ಮೇಲೆ ಸಾಗಿ ಬಂದವರು. ಇಲ್ಲಿ ಬಂದು ಸಿಕ್ಕವರ ಮೇಲೆ ಗೋಲಿಬಾರ ಮಾಡುವುದು ಯೋಗ್ಯವಲ್ಲ, ಯಾರು ಅವರಿಗೆ ತೊಂದರೆ ಕೊಡಬಾರದು ಈ ಕಛೇರಿ ನನ್ನ ಕಾರ್ಯವ್ಯಾಪ್ತಿಯಲ್ಲಿ ಬರುತ್ತದೆ. ಎಂದರು. ಹಿಂದುಳಿದಿದ್ದ 'ಮಹಾದೇವಪ್ಪನನ್ನು' ಕರೆತಂದು ಬಂಧಿಸಿ ಒಳಗಡೆ ಹಾಕಿದರು.

೧೫೦ ಕ್ಕಿಂತ ಹೆಚ್ಚು ಸತ್ಯಾಗ್ರಹಿಗಳನ್ನು ೧೦ ಚದರಡಿಯ ಕೋಠಡಿಯಲ್ಲಿ ಕುರಿತುಂಬಿದಂತೆ ತುಂಬಿದರು. ಅದಕ್ಕೆ ಕೇವಲ ಸಣ್ಣದೊಂದೆ ಕಿಡಕಿ ಇತ್ತು. ಒಳಗೆ ಒಬ್ಬರಿಗೊಬ್ಬರು ಒತ್ತೊತ್ತಾಗಿ, ಹತ್ತಿ ಹತ್ತಿಯಾಗಿ ಕುಂದಿರುತ್ತಿದ್ದರು. ಕಾಲು ಚಾಚಲು ಸ್ವಲ್ಪ ಸ್ಥಳವಿರಲಿಲ್ಲ. ಉಸಿರು ಗಟ್ಟಿದಂತೆ ಆಗುತ್ತಿತ್ತು. ಮೈತುಂಬ ಬೆವರಿಳಿದು ಮೈ ಮೇಲಿನ ಬಟ್ಟೆ-ಬರೆಗಳೆಲ್ಲವು ತೊಯ್ದವು. ಜೈಲಿನ ಕೋಠಡಿಯನ್ನು ಕಾಯುತ್ತಿದ್ದ ನಿಗ್ರೋ ಸೈನಿಕರು ಆ ಸಣ್ಣ ಕಿಟಕಿಯಿಂದ ಕಸಿದುಕೊಂಡ ನಮ್ಮ ಗಾಂಧಿಟೊಪ್ಪಿಗೆಗಳಲ್ಲಿ ಮಲವನ್ನು ಹಿಡಿದು ಎಸೆಯುತ್ತಿದ್ದರು. ಚಂಬುದಲ್ಲಿ, ಟೆಂಗಿನಕಾಯಿಯ ಚಿಪ್ಪಿನಲ್ಲಿ ಮೂತ್ರ ಹಿಡಿದು, ಗೊಜ್ಜುತ್ತಿದ್ದರು. ಕೆಲವರು ತಮ್ಮ ಪುರುಷತ್ವವನ್ನು ಕೈಯಲ್ಲಿ ಹಿಡಿದು ಪಿಚಕರಿಯಂತೆ ಸಿಂಪಡಿಸಿದರು. ಮಹಾದೇವಪ್ಪನವರು ಬಾಕಲಿಗೆ ಬೆಣ್ಣುಮಾಡಿ ಕುಂತಿದ್ದರು. ಬಂದ ಅಧಿಕಾರಿಗಳು ಅವರ ಬೋಳುತಲೆಯನ್ನು ಬಾರಿಸಿ ಒಳಗೆ ಬರುತ್ತಿದ್ದರು.

ಒಬ್ಬ ಕ್ರಿಶ್ಚಿಯನ್ ಪಾದ್ರಿ ಎಲ್ಲರನ್ನು ಅವರವರ ಭಾಷೆ (ಮರಾಠಿ, ಹಿಂದಿ, ಕನ್ನಡ)ಯಲ್ಲಿ ನೀವು ಇಲ್ಲಿಗೇಕೆ ಬಂದಿರಿ? ನಾವೇನು ನಿಮ್ಮ ಅಪ್ಪನ ಗಂಟು ತಿಂದಿರುವೆವು? ಬರಿಗೈಯಿಂದ ಬಂದರೆ ಗೋವೆ ಸಿಗುವುದೇ? ನಿಮಗೆ ತಿನ್ನಲು ಅಲ್ಲಿ ಏನು ಸಿಗಲಿಲ್ಲವೇ? ಎಂದು ಮೂದಲಿಸಿದನು.

ಮಹಾದೇವಪ್ಪನವರ ತಂಡ ಬಂದ ಕೆಲ ಸಮಯದ ನಂತರ ಬೆಳಗಾವಿಯ ಚಿಕ್ಕೋಡಿ ತಾಲೂಕಿನ ೯ ಜನ ಹೋರಾಟಗಾರರು ಬಂದು ಸಿಕ್ಕು ಬಿದ್ದರು. ಒಟ್ಟು ೬೭ ಸತ್ಯಾಗ್ರಹಿಗಳು ಅಲ್ಲಿದ್ದರು, ಪೋರ್ಚುಗೀಜ ಅಧಿಕಾರಿ ಸಂದರ್ಶನ ಮಾಡತೊಡಗಿದನು. ಸತ್ಯಾಗ್ರಹಿಗಳು ಗೋವಾ ವಿಮೋಚನೆಗಾಗಿ ಅಹಿಂಸಾತ್ಮಕ ಸತ್ಯಾಗ್ರಹ ಮಾಡಲು ಬಂದಿದ್ದೇವೆ. ಬಾಂಬ್ ಹಾಕಿಲ್ಲ, ಪಿಸ್ತೂಲ್ ಹಿಡಿದು ಪೋರ್ಚುಗೀಜರನ್ನು ಬೆದರಿಸಿಲ್ಲ ಮತ್ತು ಸರಕಾರದ ಯಾವ ಸ್ವತ್ತನ್ನು ನಾಶಮಾಡಿಲ್ಲ. ನಿಮ್ಮ ಕಛೇರಿಯ ಮೇಲೆ ತ್ರಿರಂಗಿ ಧ್ವಜವನ್ನು ಹಾರಿಸಲು ಬಂದಿದ್ದೇವೆ. ನಾವು ಗಾಂಧಿಜೀಯ ಅಹಿಂಸಾ ಚಳುವಳಿಯ ಮತ್ತು ೧೯೪೨ರ ಹೋರಾಟದಲ್ಲಿ ಹೋರಾಡಿ ಜೈಲಿನಲ್ಲಿದ್ದವರು. ಕರ್ನಾಟಕದವರು ಇದುವರೆಗೆ ನಾವಲ್ಲದೆ

ಯಾರು ಒಳಗೆ ಬಂದಿಲ್ಲ ಎಂದು ಅಧಿಕಾರಿಗೆ ಉತ್ತರಿಸಿದರು. ಅಧಿಕಾರಿ ಇವರ ಉತ್ತರಕ್ಕೆ ತಲೆ ದೂಗಿ ಪೋರ್ಚುಗೀಜರ ಕಾವಲಕ್ಕೆ ವಾಯರ್‌ಲೆಸ್ಸ ಮುಖಾಂತರ ಮಾತನಾಡಿ ನಂತರ ನೀವು ಗಾಂಧಿವಾದಿಗಳು, ಆದುದರಿಂದ ನಿಮ್ಮನ್ನು ಬಂಧಮುಕ್ತ ಮಾಡುವೆನು ಎಂದು ಹೇಳಿದನು. ನಮ್ಮನ್ನು ಬಿಡುಗಡೆ ಮಾಡಿದ ಮೂರು ದಿವಸಗಳ ನಂತರ ಅದೇ ತಿಂಗಳ ೧೫ ರಂದು ಮಹಾರಾಷ್ಟ್ರವನ್ನೊಳಗೊಂಡು ಹಿಂದೂಸ್ಥಾನದ (೧೦೦೦) ಒಂದು ಸಾವಿರ ಜನ ಸತ್ಯಾಗ್ರಹಿಗಳು ದೌಂಡಾಮಾರ್ಗವಾಗಿ ಹೋಗಿ ಝುಂಡಾ ಹಿಡಿದು ಕಾನಕೋಣಂದಲ್ಲಿ ಕಾಲಿಟ್ಟಿದ್ದಕ್ಕೆ ಗಡಿಯಲ್ಲಿದ್ದ ಅಧಿಕಾರಿಗಳು ನಿಗ್ರೋ ಸೈನಿಕರ ಗೋಲಿಬಾರಕ್ಕೆ ೧೫ ರಿಂದ ೨೦ ಜನ ಸತ್ಯಾಗ್ರಹಿಗಳು ಅಸುನೀಗಿದರು. ಹಲವರಿಗೆ ಗಾಯಗಳಾದವು. ಯಾರೊಬ್ಬರು ಗಡಿಪ್ರವೇಶಿಸಲಿಲ್ಲ.

ಪೋರ್ಚುಗೀಜರಿಂದ ಸತ್ಯಾಗ್ರಹಿಗಳ ಬಿಡುಗಡೆ :

ಪೋರ್ಚುಗೀಜರು ಮಹಾದೇವಪ್ಪ ಮುರಗೋಡ ಮತ್ತು ಚನ್ನಪ್ಪ ವಾಲಿ ತಂಡದ ೬೭ ಜನ ಸತ್ಯಾಗ್ರಹಿಗಳಲ್ಲಿ ೫೯ ಸತ್ಯಾಗಹಿಗಳನ್ನು ಹೊಡೆದು ಬಡೆದು ಎರಡು ಜೀಪುಗಳನ್ನು ತರಿಸಿ ಮಾರ್ಜಾಳಿಗೆ ತಂದು ಬಿಟ್ಟರು. ಸ್ತ್ರೀ ಸತ್ಯಾಗ್ರಹಿಗಳಿಗೆ ಪ್ರತ್ಯೇಕವಾಗಿ ಜೀಪು ತರಿಸಲಾಗಿತ್ತು. ೫೯ ಸತ್ಯಾಗ್ರಹಿಗಳ ಚಪ್ಪಲಿಗಳನ್ನು ಗಂಟು ಕಟ್ಟಿ ಮೋಟಾರಕ್ಕೆ ಮೊದಲೇ ಕಳಿಸಿದ್ದರು. ಎಲ್ಲರನ್ನು ಜೀಪಿನಲ್ಲಿ ಹಾಕಿಕೊಂಡು ೪.೩೦ ಘಂಟೆಗೆ ಮಾರ್ಜಾಳಿಯ ಹತ್ತಿರವಿರುವ ತಮ್ಮ ಗಡಿ ದಾಟಿ ಎಲ್ಲರನ್ನು ಇಳಿಸಿ ಹೋಗಿಬಿಟ್ಟರು. "ಮಹಾದೇವಪ್ಪ ಮುರಗೋಡ", ಚನ್ನಪ್ಪ ವಾಲಿ, ಎಸ್. ಜಿ. ಭಟ್ಟರು, ಶ್ರೀಮತಿ ಬೈಜುಬಾಯಿಯವರ ಕೈಯಲ್ಲಿ ಚಹದ ಗ್ಲಾಸು ಕೊಟ್ಟು ಚಹ ಕುಡುಯುವಾಗ ಪೋಟೋ ತೆಗೆದರು. ಇದರ ಉದ್ದೇಶ ಸತ್ಯಾಗ್ರಹಿಗಳನ್ನು ಶಿಕ್ಷಿಸದೆ ಅವರನ್ನು ಆಧರದಿಂದ ನೋಡಿಕೊಂಡಿದ್ದೇವೆ ಎನ್ನುವುದನ್ನು ತೋರಿಸಿಕೊಡುವದಾಗಿತ್ತು.

ಮಾರ್ಜಾಳಿಯಿಂದ ಎರಡು ಫರ್ಲಾಂಗು ನಡೆದರೆ ಕರ್ನಾಟಕದ ಗಡಿ. ಅಲ್ಲಿಂದ ನಡೆದು ಸತ್ಯಾಗ್ರಹಿಗಳು ಗಡಿಯನ್ನು ಮುಟ್ಟಿದರು. ಎರಡು ಗಡಿಗಳ ಮಧ್ಯೆ ಯಾರಿಗೂ ಸೇರದ ಪ್ರದೇಶವಿದೆ. ಅಲ್ಲಿ ರಾಜಮಾರ್ಗವಿರುವುದು. ಅದರ ಪಕ್ಕಕ್ಕೆ ತಗ್ಗನ್ನು ತೆಗೆದು ವಾಹನಗಳು ಆಕಡೆ ಈಕಡೆ ಹೊಗದಂತೆ ತಿರುಗಾಡದಂತೆ ಮಾಡಿದ್ದರು. ಅವರು ಇಳಿಸಿದಲ್ಲಿಂದ ಗಡಿಯನ್ನು ದಾಟಿ ನಡೆದು ಬಂದರು. ಗಡಿಯಲ್ಲಿದ್ದ ನಮ್ಮ ಪೋಲಿಸ್ ಅಧಿಕಾರಿಗಳು ಹೆಚ್ಚು ಪೆಟ್ಟು ತಿಂದವರಿಗೆ ಕುಡಿಯಲು ಚಹಕೊಟ್ಟರು. ಸಮಯ ಮಧ್ಯಾಹ್ನ ೧.೩೦ ಘಂಟೆ ಆಗಿತ್ತು. ಸತ್ಯಾಗ್ರಹಿಗಳೆಲ್ಲ ಹಸಿವೆಯಿಂದ ಬೆಂದು ಬಳಲುತ್ತಿದ್ದರು. ರಾತ್ರಿಯಿಂದ ಊಟವೇ ಇರಲಿಲ್ಲ. ಸುದೈವಕ್ಕೆ ಹುಬ್ಬಳ್ಳಿಯ (ಧಾರವಾಡ ಜಿಲ್ಲೆ) ಶ್ರೀ ಬಿ. ಎ. ದೇಸಾಯಿ ಈ ಗಡಿ ಬಳಿ ಒಂದು ಚೀಲ ತುಂಬ ಬ್ರೆಡ್ಡು ಕಳಿಸಿದ್ದರು. ಹೋರಾಟಗಾರರಿಗೆ ಅದನ್ನು ಕೊಟ್ಟರು. ತಿಂದು ಸಂತೋಷಗೊಂಡರು. ಪೋರ್ಚುಗೀಜರಿಂದ ಹೆಚ್ಚು ಪೆಟ್ಟುತಿಂದ ವಾಸು ಗುಣಾಜಿ ಮೂರ್ಚೆ ಹೋಗಿದ್ದರು. ಬಾಯಿಂದ ರಕ್ತ ಬಿದ್ದಿತ್ತು. "ಸದಾಶಿವ ಗಡಿದ" ಡಾಕ್ಟರರಿಂದ ಉಪಚಾರ ಪಡೆದುಕೊಂಡರು.

ಸತ್ಯಾಗ್ರಹಿಗಳನ್ನು ಸ್ವಾಗತಿಸಲು ಗೋವೆಯ ಗಡಿಯಲ್ಲಿ ಕರ್ನಾಟಕದ ಪ್ರತಿನಿಧಿಗಳು ಬಂದಿದ್ದರು. ಸ್ವಾಗತಕಾರರಲ್ಲಿ ಸಂಯುಕ್ತ ಕರ್ನಾಟಕದ ಪ್ರತಿನಿಧಿಯೂ ಇದ್ದರು. ಮಹಾದೇವಪ್ಪ ಮುರಗೋಡ ಮತ್ತು ಚನ್ನಪ್ಪ ವಾಲಿಯವರನ್ನು ಕಂಡು ಯೋಗಕ್ಷೇಮ ಕೇಳಿದರು.

ಅವರು ತಾವು ಅಲ್ಲಿ ಅನುಭವಿಸಿದ ಕಷ್ಟದ ಕಥೆಯನ್ನು ವಿವರಿಸಿದರು. ಎಲ್ಲ ಸತ್ಯಾಗ್ರಹಿಗಳ ಮೈ ಕೈ ಎದೆ ನೋವಿನಿಂದ ನರಳುತ್ತಿದ್ದರು. ಆಶ್ಚರ್ಯದ ಸಂಗತಿಯೆಂದರೆ ಎಲ್ಲರ ಮೈ ನುಗ್ಗಾಗಿದ್ದರೂ ಹೊರಗೆ ಗಾಯಗಳಾಗಿದ್ದಿಲ್ಲ. ಪೋರ್ಚುಗೀಜರು ಅವರನ್ನು ಹೊಡೆಯುವಾಗ ಗಾಯವಾಗಿ, ರಕ್ತ ಬರದಂತೆ ಮುಂಜಾಗ್ರತೆಯನ್ನು ವಹಿಸಿದ್ದರು.

ಕಾರವಾರದ ಸಿವ್ಹಿಲ್ ಆಸ್ಪತ್ರೆಯಲ್ಲಿ ಚಿಕಿತ್ಸೆ :

ಗೋವೆಯಿಂದ ಹಿಂದುರುಗಿದ ಸತ್ಯಾಗ್ರಹಿಗಳಲ್ಲಿ ಕೆಲವರನ್ನು ನೇರವಾಗಿ ಕಾರವಾದ ಸಿವ್ಹಿಲ್ ಆಸ್ಪತ್ರೆಗೆ ಸೇರಿಸಲಾಯಿತು. ಈ ಸುದ್ದಿ ಕಾರವಾರ ನಗರ ತುಂಬ ಹರಿಡಿತು. ಅನೇಕ ಜನರು ತಂಡ-ತಂಡವಾಗಿ ಬರತೊಡಗಿದರು. ಆಸ್ಪತ್ರೆಯ ಕೋಣೆಯ ಒಳಗೆ ಬರಲು ಜನರು ನುಕು-ನುಗ್ಗಲು ನಡೆದಿತ್ತು. ಗದ್ದಲವನ್ನು ನಿಯಂತ್ರಿಸಲು ಯಾರು ಇರಲಿಲ್ಲ. ವಾಸು ಗುಣಾಜಿಗೆ ಮೂರು ದಿವಸಗಳವರೆಗೆ ಪ್ರಜ್ಞೆ ಇರಲಿಲ್ಲ. ಅವರ ಫೋಟೋ ತೆಗೆಯಲು ವಿದೇಶಿ ಸುದ್ದಿಗಾರರೊಬ್ಬರು ಬಂದಿದ್ದರು. ಗೋವಾ ಚಳುವಳಿಯ ಸಂಬಂಧ ವರದಿ ಮಾಡುವದು ಅವರ ಉದ್ದೇಶವಾಗಿತ್ತು. ಆಸ್ಪತ್ರೆಯ ಸಿವ್ಹಿಲ್ ಸರ್ಜನ್ ಶ್ರೀ ಬಿ. ಕೆ. ಕಾಜಿ ಮತ್ತು ಇತರ ಸಿಬ್ಬಂಧಿಗಳು ಸತ್ಯಾಗ್ರಹಿಗಳ ಜೊತೆ ಸರಿಯಾಗಿ ಲಕ್ಷಕೊಡದೆ, ಉಪಚರಿಸದೆ ಉದಾಸೀನತೆಯಿಂದ ನಿಷ್ಕಾಳಜಿವಹಿಸಿದರು. ಡಾಕ್ಟರರ ಮೇಲೆ ಜನರು ರೇಗಿದರು. ಈ ಸುದ್ದಿ ಪತ್ರಿಕೆಯಲ್ಲಿ ಪ್ರಕಟಿಸಲಾಗಿತ್ತು.

ಕಾರವಾರ ನಗರದಲ್ಲಿಯ ಜನರು ಗೋವಾ ವಿಮೋಚನಾ ಸಮೀತಿಯ ಸದಸ್ಯರಲ್ಲಿ ದೂರಿತ್ತರು. ಗೋವಾ ವಿಮೋಚನಾ ಅಧ್ಯಕ್ಷ ಡಾ. ವಾಘರು ಸಮೀತಿ ಯೋಗ್ಯರೀತಿಯಿಂದ ಕೆಲಸ ಮಾಡುತ್ತದೆ. ಶ್ರೀ ಪೊನೆ ಉತ್ಸಾಹಿ ಕಾರ್ಯಕರ್ತರಾಗಿದ್ದರು. ಜನತೆ ತನು-ಮನ-ಧನದಿಂದ ನೇರವಾಗುತ್ತಿದ್ದರು.

ಗೋವಾ ವಿಮೋಚನಾ ಸತ್ಯಾಗ್ರಹಿಗಳಲ್ಲಿ ಹುತಾತ್ಮರಿಗೆ ಶ್ರದ್ಧಾಂಜಲಿ :

ಗೋವೆಯ ಸತ್ಯಾಗ್ರಹದಲ್ಲಿ ಹುತಾತ್ಮರಾದವರಿಗೆ ದೇಶದಾದ್ಯಂತ ಶ್ರದ್ಧಾಂಜಲಿ ಸಭೆ ಜರುಗತೊಡಗಿದವು. ಪಶ್ಚಿಮ ಬಂಗಾಲ ಮತ್ತು ಕರ್ನಾಟಕದ ಹುಬ್ಬಳ್ಳಿಯಲ್ಲಿ ಜರುಗಿತು. ಹುಬ್ಬಳ್ಳಿಯ ನಾಗರೀಕರು, ಅನುತಾಪ ಸಭೆಯನ್ನು ದುರ್ಗದ ಬೈಲಿನಲ್ಲಿ ರಾತ್ರಿ ೯ ಘಂಟೆಗೆ ಏರ್ಪಡಿಸಿದ್ದರು. ಪಾಟೀಲ ಪುಟ್ಟಪ್ಪನವರು ಸಭೆಯ ಅಧ್ಯಕ್ಷತೆ ವಹಿಸಿದ್ದರು, ಪೋರ್ಚುಗೀಜರ ಅಮಾನುಷ ಅತ್ಯಾಚಾರವನ್ನು ಖಂಡಿಸಿದರು ಮತ್ತು ಗೋವೆಯ ಶೀಘ್ರ ಕ್ರಮವನ್ನು ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ

ಮಾಡುತ್ತಿದ್ದರು. ಸರ್ವಪಕ್ಷ ಗೋವಾ ವಿಮೋಚನಾ ಸಹಾಯ ಸಮೀತಿಯ ಪರವಾಗಿ ಮಹಾದೇವಪ್ಪ ಮುರಗೋಡ, ಎ. ಜೆ. ಮುಧೋಳ, ಶಾಂತಿನಾಥ ಇಂಗಳೆ, ಕಾಪಸೆ, ತಡಸದಮಠ, ಶಿರಯೋಗಿ ಭಾಷಣ ಮಾಡಿ ಸಂತಾಪವನ್ನು ವ್ಯಕ್ತ ಪಡಿಸಿದರು.

ಅಧ್ಯಾಯ – ೫

ಚಳುವಳಿಗಳಿಂದಾದ ಪರಿಣಾಮ

ಅಧ್ಯಾಯ – ೨೮

ಚಳುವಳಿಗಳಿಂದಾದ ಪರಿಣಾಮ

ಇಂಚಗೇರಿ ಕರ್ನಾಟಕದ ಕೊನೆಯ ಒಂದು ಚಿಕ್ಕ ಹಳ್ಳಿ (ಇಂಡಿ ತಾಲೂಕಿನ ವಿಜಾಪುರ ಜಿಲ್ಲೆ) ಕರ್ನಾಟಕ ಮತ್ತು ಮಹಾರಾಷ್ಟ್ರ ರಾಜ್ಯಗಳೆರಡರ ಗಡಿಯ ಹಳ್ಳಿ ಇದಾಗಿದೆ. ಇದರ ಹಳ್ಳದ ಅಂಚಿನ ಮೇಲೆ ೭೬ ಎಕರೆ ಭೂಮಿಯಲ್ಲಿ ನಿರಾಜಮಾನವಾದ ಮಠ ಇಂದಿಗೂ ಎರಡೂ ಜಿಲ್ಲೆಗಳಲ್ಲಿ ಹೆಸರುವಾಸಿಯಾಗಿದೆ.

ಇಂಚಗೇರಿ ಮಠವೆಂದ ಮೇಲೆ ಬಹಳ ಜನರಿಗೆ "ದೇವರ" ನೆನಪಾಗುತ್ತದೆ. ದೇವರು ಎಂದರೆ "ಮಹಾದೇವಪ್ಪ ಮುರಗೋಡ" ಇವರಿಂದಲೇ ಈ ಮಠದ ಇತಿಹಾಸದಲ್ಲಿ ಸ್ವಾತಂತ್ರ್ಯ ಹೋರಾಟದ ಹೊಸ ಅಧ್ಯಾಯ ಪ್ರಾರಂಭವಾಯಿತು.

ಇಂಚಗೇರಿ ಮಠವು ಆಧ್ಯಾತ್ಮ ಸಂಪ್ರದಾಯಕ್ಕೆ ಪ್ರಸಿದ್ಧವಾದುದು. ಸಂಘಟನಾ ಶಕ್ತಿಗೆ ಇಂದಿಗೂ ಹೆಸರಾದದ್ದು. ಮಹಾದೇವಪ್ಪ ಮುರಗೋಡ ಇದರ ಪೀಠಾಧಿಕಾರಕ್ಕೆ ಬಂದಾಗ ಕೇವಲ ಅವರಿಗೆ ೧೪ ವರ್ಷ. ಇವರು ಮಠದ ಆಚರಣೆಯಲ್ಲಿ ಹೊಸತನ ತಂದಂಥವರು. ಕರ್ನಾಟಕ ಮತ್ತು ಮಹಾರಾಷ್ಟ್ರಗಳಲ್ಲಿ ಲಕ್ಷಲಕ್ಷಗಟ್ಟಲೆ ಅನುಯಾಯಿಗಳನ್ನು ಹೊಂದಿದ್ದಾರೆ.

ಮಹಾದೇವಪ್ಪನವರು ದೀನ ಬಂಧು, ರಾಜಕೀಯ ಮಹಾಮುತ್ಸಧಿಯಾಗಿದ್ದದು ಆಧ್ಯಾತ್ಮದ ಮತ್ತು ರಾಜಕೀಯಗಳೆರಡನ್ನು ಏಕ ಕಾಲದಲ್ಲಿ ವಿಜೃಂಭಿಸಿದ ಅದ್ಭುತ ವ್ಯಕ್ತಿತ್ವ ಇವರದಾಗಿತ್ತು. 'ಸರ್ವರಿಗೂ ಸಮಬಾಳು ಸರ್ವರಿಗೂ ಸಮಪಾಲು' ಎಂಬ ತತ್ವವನ್ನು ಕಾರ್ಯರೂಪದಲ್ಲಿ ತಂದವರು. ವ್ಯಕ್ತಿ, ಸ್ವಾತಂತ್ರ್ಯಕ್ಕಾಗಿ ಆಧ್ಯಾತ್ಮದ ಮಂತ್ರ ಪಠಿಸಿದ ಯೋಗಿ ಮಾನವ ಹಕ್ಕುಗಳ ರಕ್ಷಣೆಗೆ ದುಡಿದ ವ್ಯಕ್ತಿಗಳ ಸಾಲಿನಲ್ಲಿ ಅಗ್ರಸ್ಥಾನ ಪಡೆದವರಾಗಿದ್ದರು. ಜನರ ಉದ್ಧಾರ ದೇಶದ ಉದ್ಧಾರ ಎಂಬುದು ಅವರ ಸಂಕಲ್ಪವಾಗಿತ್ತು. ಜನರಲ್ಲಿ ನೈತಿಕ ಮೌಲ್ಯಗಳನ್ನು ಜಾಗೃತಿಗೊಳಿಸಿ ಅಂಧಶ್ರದ್ಧೆ ಅಳಿಸಿಹಾಕಿ ಮಾನವ ಪ್ರೇಮದ ಮಹತ್ವವನ್ನು ಜನಸಾಮಾನ್ಯರಲ್ಲಿ ಮೂಡಿಸಿದಂತವರು. ಪಾಪ–ಪುಣ್ಯ ಕಲ್ಪನೆ ಇರಲಿಲ್ಲ. ನಿರ್ಗತಿಕರ, ದಾರಿ ತಪ್ಪಿದಂತವರಿಗೆ ತಮ್ಮ ಹೃದಯದಲ್ಲಿ ಆಶ್ರಯಕೊಟ್ಟರು. ಯಾರನ್ನು ಪುರಸ್ಕರಿಸುತ್ತಿರಲಿಲ್ಲ ಮತ್ತು ತಿರಸ್ಕರಿಸುತ್ತಿರಲಿಲ್ಲ. ನ್ಯಾಯಕ್ಕಾಗಿ ಬೇಡಿ ಬಂದವರು ಎಂದೂ ಬರಿಗೈಲಿ ಹೋದ ನಿದರ್ಶನಗಳು ಇಲ್ಲ. ಭಕ್ತಿ, ಪ್ರೀತಿಯಿಂದ ತನು–ಮನು–ಧನವನ್ನು ಒಪ್ಪಿಸಿದ ಅನುಯಾಯಿಗಳ ಸಾಕಷ್ಟು ಜನ ಇದ್ದಾರೆ.

ಪ್ರವಚನಗಳ ಮೂಲಕ ಆಧ್ಯಾತ್ಮದ ಬೀಜ ಬಿತ್ತಿ ರಾಷ್ಟ್ರ ಪ್ರೇಮವನ್ನು ಹುರಿಗೊಳಿಸುತ್ತಿದ್ದರು. ಗುರುಗಳಾದ ಶಿರಹಟ್ಟಿ ಮಠದ ಪ್ರೇರಣೆಯಿಂದ ರಾಜಕೀಯದಲ್ಲಿ ದುಮುಕಿದರು.[೧] ಸಾವಿರಾರು ವರ್ಷಗಳಿಂದ ಬ್ರಿಟಿಷರ ಕಪಿಮುಷ್ಠಿಯಲ್ಲಿ ನರಳುತ್ತಿದ್ದ ಭಾರತಮಾತೆಯನ್ನು ಬಂಧಮುಕ್ತಗೊಳಿಸಲು ಮಹಾತ್ಮಾ ಗಾಂಧಿಜೀಯವರ ಹೋರಾಟದಲ್ಲಿ ಭಾಗಿಗಳಾದರು ಭೋಸರ ಪ್ರಭಾವದಿಂದ ಉಗ್ರಗಾಮಿಗಳ ತಂಡದಲ್ಲಿ ಸೇರಿದರು. ಅದು ನಮ್ಮ ಜನ್ಮ ಸಿದ್ಧ ಹಕ್ಕು ಅದನ್ನು ನಾವು ಕಿತ್ತುಕೊಳ್ಳಬೇಕು ಎಂಬ ಸುಭಾಸಚಂದ್ರ ಭೋಸರ ಮಾತುಗಳನ್ನು ಸಾಮಾನ್ಯರ ಹೃದಯದಲ್ಲಿ ಸ್ಥಾಯಿಗೊಳಿಸಿದರು.

ಇಂಚಗೇರಿ ಮತ್ತು ಇತರ ಆಶ್ರಮಗಳಲ್ಲಿ ಸ್ವಾತಂತ್ರ್ಯ ಹೋರಾಟದ ಕಿಚ್ಚು ಹೊತ್ತಿಸಿದರು. 'ಭಜನೆಗಿಂತ ದೇಶದ ಸ್ವಾತಂತ್ರ್ಯ' ಮುಖ್ಯವೆಂದು ಹೇಳಿದರು. ಮತ್ತು ಬ್ರಿಟಿಷ ಪೋಲಿಸ್ ಇಲಾಖೆಗೆ ದಿಗಬ್ರಮೆ ಮೂಡಿಸಿದಂತವರು ಕೆಲ ಅಧಿಕಾರಿಗಳಿಗೆ ಚಳ್ಳೆ ಹಣ್ಣು ತಿನ್ನಿಸಿದ್ದರು. ವಿಜಾಪುರ, ಬೆಳಗಾವಿ, ಸಾಂಗಲಿ, ಸೊಲ್ಲಾಪುರ ಜಿಲ್ಲೆಗಳ ತಮ್ಮ ಅನುಯಾಯಿಗಳ ಮನೆಬಾಗಿಲಿಗೆ ದೇಶ ಸ್ವಾತಂತ್ರ್ಯದ ಪಂಜನ್ನು ಹಿಡಿದುಕೊಂಡು ಹೋದ ನಾಡಿನ ಪ್ರತಿಷ್ಠಿತ ಆಗ ಮಗಳನ್ನು ಪರವರ್ತಿಸಿದರು.

'ಆ್ಯನ ಇಂಡಿಯನ್ ಪಿಲ್‌ಗ್ರಿಮ್'ದಲ್ಲಿ ಸುಭಾಸಚಂದ್ರ ಭೋಸರು ಮಿಲಟರಿ ಶಕ್ತಿ ಪ್ರತಿಯೊಂದು ದೇಶಕ್ಕೂ ಅನಿವಾರ್ಯ ಅಗತ್ಯತೆ. ಮಿಲಟರಿ ಶಕ್ತಿ ಪ್ರಭಲವಾಗಿದ್ದರೆ ದೇಶದ ರಾಜಕೀಯ ಸ್ವಾತಂತ್ರ್ಯ ಪ್ರಾದೇಶಿಕ ಸಮಗ್ರತೆಯನ್ನು ಉಳಿಸಿಕೊಳ್ಳಲು ಸಾಧ್ಯ ಎಂದಿದ್ದಾರೆ.

ಜನಶಕ್ತಿಯನ್ನು ಯಥೇಷ್ಟವಾಗಿ ನಂಬಿದ ಶ್ರೀಯುತರು ತಮ್ಮ ಅನುಯಾಯಿಗಳನ್ನು ಸೈನಿಕರಂತೆ ತರಬೇತಿಗೊಳಿಸಿದರು. ಕೊಟ್ಟಲಗಿ, ಅಸೂಟ, ಸೋನಿಹಾಳಗಳಲ್ಲಿ ಮದ್ದು ಗುಂಡುಗಳನ್ನು ತಯಾರಿಸುವ ಕೇಂದ್ರಗಳನ್ನು ತೆರೆದರು.

ಸಮಕಾಲೀನ ಪರಸ್ಥಿತಿಯನ್ನು ಸಮರ್ಥವಾಗಿ ಬಳಸಿಕೊಂಡ ಮುರಗೋಡವರು ವೈಯಕ್ತಿಕ ಸತ್ಯಾಗ್ರಹಗಳನ್ನು ನಡೆಸಿದರು. ೧೯೪೨ರ ಚಳುವಳಿಯಲ್ಲಿ ಅಪಾರ ಸಂಖ್ಯೆಯಲ್ಲಿ ಜನತೆ ಸಂಘಟಿತರಾದರು. ಮೊದಲ ಬಾರಿಗೆ ಬ್ರಿಟೀಷ ಸರಕಾರದ ಎದೆ ನಡುಗಿ ಹೋಯಿತು. ಸ್ತ್ರೀ-ಪುರುಷರೆನ್ನದೆ ಚಳುವಳಿಯಲ್ಲಿ ಭಾಗಿಗಳಾದರು. ಅದೆಷ್ಟೋ ಜನ ತಮ್ಮ ಮನೆ ಮಾರು ಕಳೆದುಕೊಂಡರು. ಜೈಲು ವಾಸ ಅನುಭವಿಸಿದರು. ಇದೆಲ್ಲಕ್ಕೂ ಮುರಗೋಡ ಮಹಾದೇವಪ್ಪನವರ ಸಂಘಟನಾ ಶಕ್ತಿ ಪ್ರೇರಣೆಯನ್ನು ನೀಡಿತ್ತು. ಅನೇಕ ಜನ ಶ್ರೀಮಂತರು, ದೇಶಾಭಿಮಾನಿಗಳು ಮಹಾದೇವಪ್ಪನವರಿಗೆ ಆಶ್ರಯವಾಗಿ ನಿಂತರು.

ಸ್ವಾತಂತ್ರ್ಯ ಚಳುವಳಿಯಲ್ಲಿ ದುಮುಕಿದ ಮಹಾದೇವಪ್ಪ ಬ್ರಿಟೀಷರಿಗೆ ನುಂಗದ ತುತ್ತಾಗಿದ್ದ ಅನೇಕ ಕಡೆಗೆ ವಿಧ್ವಂಸಕ ಕಾರ್ಯಗಳನ್ನು ಎಸಗಿ ಅಪರಾಧಿಯಾಗಿದ್ದು ಆದರೆ ಒಂದು ಮಠದ ಸ್ವಾಮಿಯಾಗಿ ಧಾರ್ಮಿಕ ಕಾಯಕಗಳನ್ನು ಬಿಟ್ಟು ಮಠದ ಕಟ್ಟುಪಾಡುಗಳನ್ನು ಗಾಳಿಗೆ ತೂರಿ ಬೀದಿಗೆ

೧. ಸನಾತನ : ಸ್ವಾತಂತ್ರ್ಯ ಹೋರಾಟದಲ್ಲಿ ಇಂಚಗೇರಿಯವರ ಪಾತ್ರ ಲೇಖನ
ಲೇಖಕಿ – ಡಾ. ಎಸ್. ಪಿ. ಚವಲಾರ, ವಿವೇಕ ಪ್ರಕಾಶನ ಹುಬ್ಬಳ್ಳಿ. ೧೯೯೪

ಬಂದು 'ಸ್ವಾತಂತ್ರ್ಯವೇ ನನ್ನ ಜನ್ಮ ಸಿದ್ದ ಹಕ್ಕು' ಎಂಬ ಘೋಷಣೆ ಕೂಗಿದ್ದು ಅನೇಕರಿಗೆ ಸಹಿಸಿಕೊಳ್ಳಲಾಗಲಿಲ್ಲ. ಅವರ ಬಂಧನಕ್ಕೆ ತರೆಮರೆಯಲ್ಲಿ ಸಹಕಾರ ನೀಡಿದರು. ಸ್ವಾರ್ಥ ರಾಜಕಾರಣಿಗಳು ಮಹಾದೇವಪ್ಪನವರ ತೇಜೋಧೆಗೆ ಪ್ರಯತ್ನಿಸಿದರು. ಪ್ರಚಾರ ಭಾಗ್ಯವು ಸಿಗದ ಇವರು ದರೋಡೆಕೋರರೆಂದು ಚಿತ್ರಿತವಾದರು. ಸಂಸ್ಥಾನಗಳ ವಿಲೀನಕರಣಕ್ಕಾಗಿ ಹೋರಾಡಿದ ಸರ್ಕಾರ ವಲ್ಲಭಬಾಯಿ ಪಟೇಲರ ಜೊತೆಗೆ ಹೋರಾಟ ಮಾಡಿದ ಮಹಾದೇವಪ್ಪನವರ ಹೆಸರನ್ನು ಪೂರ್ವ ಗ್ರಹ ಪೀಡಿತ ಇತಿಹಾಸಕಾರರು ಎಲ್ಲಿಯೂ ದಾಖಲಿಸಲಿಲ್ಲ. ಜನರ ಸ್ಮೃತಿಯಿಂದಲೂ ಮರೆಯಲಾಗುವ ಇಂತಹ ಅಪ್ಪಟ ಚಿನ್ನ ಓರ್ವ ಮಹಾನ್ ಯೋದ. ಅಪ್ಪಟ ದೇಶಪ್ರೇಮಿ ಯಾರು ಮರೆಯುವಂತಿಲ್ಲ.

ಅಧಿಕಾರ, ದುಡ್ಡು, ಸ್ವಾರ್ಥದ ಹಾದಿಯಲ್ಲಿಯೇ ನಮ್ಮ ಆಡಳಿತ ಯಂತ್ರ ಸಾಗಿರುವಾಗ ಮಹಾದೇವಪ್ಪನವರ ತ್ಯಾಗ, ಬಲಿದಾನ ಅರ್ಥವಾಗುವದು. ಬಹಳ ಕಷ್ಟ ಅವರನ್ನು ಬೇರೆ ಹಣಿ ಪಟ್ಟಿ ಕಟ್ಟುವ ಸ್ವಾರ್ಥ ರಾಜಕಾರಣಿಗಳು ನಮ್ಮಲ್ಲಿ ಇರುವವರೆಗೂ ಇಂತಹ ಪ್ರಾಮಾಣಿಕ ಹೋರಾಟಗಾರರಿಗೆ ಬೆಲೆ ಸಿಗುವುದಿಲ್ಲ.

ಅಧ್ಯಾಯ – ೬

ಸಮಾರೋಪ

ಅಧ್ಯಾಯ – ೬

ಸಮಾರೋಪ

ಭಾರತದ ಭವ್ಯ ಪರಂಪರೆ ದಿವ್ಯ ಸಂಸ್ಕೃತಿ ಮತ್ತು ಭೌತಿಕ ಸಂಪತ್ತು ಜಗತ್ತಿನ ಜನರ ಕಣ್ಣು ಕುಕ್ಕುಸುವಂತಹದ್ದು. ಯಾವ ಆಧುನಿಕ ಗಾಳಿಗೆ ನಲುಗದೆ ಇಂದಿಗೂ ತನ್ನತನವನ್ನು ಉಳಿಸಿಕೊಂಡು, ಬೆಳೆಸಿಕೊಂಡು ಬಂದಂತ ಶ್ರೀಮಂತ ರಾಷ್ಟ್ರ. ತಾನು ಹೆತ್ತ ಮಕ್ಕಳು ಜ್ಞಾನಿಗಳು, ವಿಜ್ಞಾನಿಗಳು, ತತ್ವಜ್ಞಾನಿಗಳು, ದಾರ್ಶನಿಕರು, ಕವಿಪುಂಗವರು, ಸಮಾಜಸುಧಾರಕರು, ತಮ್ಮ ತತ್ವಸಿದ್ಧಾಂತಗಳನ್ನು ಜಗತ್ತಿಗೆ ನೀಡಿ ದಾರಿದೀಪಗಳಾಗಿದ್ದಾರೆ. ಅಂತವರ ಸಾಲಿನಲ್ಲಿ ನಿಲ್ಲುವಂತವರು. ನನ್ನ ಈ ಪ್ರಬಂಧದ ನಾಯಕರಾದ ಇಂದಿಗೂ "ದೇವರು" ಎಂದು ಅಭಿದಾನ ಪಡೆದು ಪ್ರಖ್ಯಾತರಾದ ಮುರಗೋಡ ಮಹಾದೇವಪ್ಪನವರು. ಇವರು ಬಾಲ ಬ್ರಹ್ಮಚಾರಿಗಳು, ಸಿದ್ಧಯೋಗಿಗಳು, ತತ್ವನಿಷ್ಠರು, ರಜಯೋಗಿಗಳು, ಇಂಚಗೇರಿ ಸಂಪ್ರದಾಯದ ನೇತಾರರೂ, ಪವಾಡಪುರಷರಾದ ಇವರದು ಬಹುಮುಖ ವ್ಯಕ್ತಿತ್ವದ ಅಸಾಧಾರಣ ಪ್ರತಿಭಾವಂತರಾದ್ದು. ಇವರ ಚರಿತ್ರೆಯ ಶೋಧನೆ "ವಿಶ್ವರೂಪ" ದರ್ಶನ ಮಾಡಿಸುವಂತಹದ್ದು. ಇವರು ಆಧ್ಯಾತ್ಮಕ ಪ್ರವಾದಿಯಾಗಿದ್ದು, ಸಮಕಾಲಿನ ಸಮಸ್ಯೆಗಳೊಂದಿಗೆ ಸ್ಪಂದಿಸುವಂತವರಾಗಿದ್ದರು.

ಮುರಗೋಡ ಮಹಾದೇವಪ್ಪನವರು ಅಪ್ಪಟ ದೇಶಾಭಿಮಾನಿ, ಸ್ವಾತಂತ್ರ್ಯ ಪ್ರೇಮಿಗಳಾಗಿದ್ದರು. ಸ್ವಾತಂತ್ರ್ಯ ಚಳುವಳಿಯಲ್ಲಿ ದುಮುಕಿ ಬ್ರಿಟಿಷರಿಗೆ ಸಿಂಹ ಸ್ವಪ್ನವಾಗಿದ್ದರು. ನುಂಗಲಾರದ ತುತ್ತಾಗಿದ್ದರು. ತಮ್ಮೆಲ್ಲ ಅನುಯಾಯಿಗಳನ್ನು ಕಟ್ಟಿಕೊಂಡು ತಮ್ಮ ಪ್ರಾಣವನ್ನು ಪಣಕ್ಕಿಟ್ಟು ಹೋರಾಡಿದಂತವರು ಸುಭಾಷಚಂದ್ರರ ಪ್ರಭಾವಕ್ಕೊಳಗಾಗಿ ಉಗ್ರರ ತಂಡವನ್ನು ಕಟ್ಟಿದರು. ಮಹಾತ್ಮಾ ಗಾಂದಿಜೀಯವರ ಮಾರ್ಗದರ್ಶನದಲ್ಲಿ ಸೌಮ್ಯವಾದವನ್ನು ತನ್ನಲ್ಲಿ ಅಳವಡಿಸಿಕೊಂಡು, ದೇಶದ ಸ್ವಾತಂತ್ರ್ಯಕ್ಕಾಗಿ, ಗೋವಾ ವಿಮೋಚನೆಗಾಗಿ, ಕರ್ನಾಟಕದ ನಾಮಕರಣಕ್ಕಾಗಿ, ಏಕೀಕರಣಕ್ಕಾಗಿ ಚಳುವಳಿಯನ್ನು ಮಾಡಿದಂತವರು.

ಮಹಾದೇವಪ್ಪನವರು ಅರಮನೆಯಂಥ ಮನೆಯಲ್ಲಿ ಸುಖದ ಸುಪ್ಪತ್ತಿಗೆಯ ಆಸನದ ಮೇಲೆ, ಛತ್ರಚಾಮರದ ವೈಭವದಲ್ಲಿ ಬೆಲೆಬಾಳುವ ಪೋಷಾಕುಧರಿಸಿ ಆಶೀರ್ವಾದ ಮಾಡುತ್ತ ಕುಳಿತವರಲ್ಲ. ತಮ್ಮೆಲ್ಲ ಆಯುಷ್ಯವನ್ನು ಬಡಜನರ ಉದ್ಧಾರಕ್ಕಾಗಿ, ದೇಶದ ಸ್ವಾತಂತ್ರ್ಯಕ್ಕಾಗಿ ಮುಡಿಪಾಗಿಟ್ಟಂತವರು. ಎಷ್ಟೋ ಸಲ ಜೈಲುವಾಸ ಅನುಭವಿಸಿದಂತವರು.

ದೇಶಕ್ಕೆ ಸ್ವಾತಂತ್ರ್ಯ ದೊರೆತ ಮೇಲೆ ಇವರು ಸುಮ್ಮನೆ ಕೂಡಲಿಲ್ಲ. ದೇಶದ ಸಮಾಜದ ಉದ್ಧಾರಕ್ಕಾಗಿ ಮನೆಮನೆಗೆ ಹೋಗಿ ಮಾರ್ಗದರ್ಶನ ಮಾಡುತ್ತಿದ್ದರು. ಅನ್ನದಾನ, ಜ್ಞಾನದಾನ,

ಸಮಾಜ ಸೇವೆ, 'ಸಾಮಾಜಿಕ ಸಮಾನತೆ' ತರುವಲ್ಲಿ ಆತ್ಮಜ್ಞಾನ ತತ್ವದ ತಳಹದಿಯ ಮೇಲೆ "ಆದರ್ಶ ಸಮಾಜ" ನಿರ್ಮಿಸಲು ಶ್ರಮಿಸಿದ ಅಜ್ಞಾನಿಗಳ, ದುಷ್ವರಮನ ಪರಿವರ್ತಿಸಿದರು.

ಒಂದು ಮಹತ್ವದ ಮಾತನ್ನು ನಾನಿಲ್ಲಿ ಹೇಳಬಾಕಾಗಿದೆ. ಸ್ವತಂತ್ರ್ಯದ ಚಳುವಳಿ ಕೇವಲ ೧೯೪೭ರವರೆಗೆ ಮಾತ್ರ ನಡೆದಿಲ್ಲ. ಅಂದು ನಾವು ಬ್ರಿಟಿಷರಿಂದ ಮಾತ್ರ ಮುಕ್ತರಾದೇವು. ಅನಂತರ ನಿಜವಾದ ಹೋರಾಟ ಪ್ರಾರಂಭದದ್ದು ಸ್ವತಂತ್ರದ ನಂತರ. ಬಡತನ, ನಿರುದ್ಯೋಗ, ಜಾತೀಯತೆ, ಧರ್ಮಾಂಧತೆ, ಮೂಢಸಂಪ್ರದಾಯ, ದಾರಿದ್ರ್ಯ ನಮಗೆ ದೊಡ್ಡ ಶತ್ರುಗಳಾದವು. ಇವುಗಳನ್ನು ಗೆಲ್ಲುವ ಮಾರ್ಗವನ್ನು ಮಹಾದೇವಪ್ಪನವರು ತಮ್ಮೆಲ್ಲ ಅನುಯಾಯಿಗಳಿಗೆ ತೋರಿಸಿಕೊಟ್ಟಿದ್ದಾರೆ. ಬಡವ-ಬಲ್ಲಿದ, ಶ್ರೀಮಂತ-ಬಡವ ಭೇದ ಹೋಗಲಾಡಿಸಿ ಎಲ್ಲರನ್ನು ಒಗ್ಗೂಡಿಸಲು, ಆರ್ಥಿಕ ಸಮಾನತೆ ತರುವಲ್ಲಿ ಅವರ ಜೀವನ ಸುಗಮವಾಗುವಲ್ಲಿ ಸಾಮೂಹಿಕ ಬೇಸಾಯ, ಅಂತರಜಾತೀಯ ವಿವಾಹ ಮಾಡಿಸಿದ್ದುಂಟು. ಗುಲಾಮಗಿರಿಯನ್ನು ಕಲಿಸುವ ಶಿಕ್ಷಣ ಪದ್ಧತಿಯನ್ನು ವಿರೋಧಿಸಿದಂತವರು. ಸ್ತ್ರೀಶಕ್ತಿ ಜಾಗೃತಿಗಾಗಿ ಶ್ರಮಿಸಿದರು. ಶ್ರಮದಾನಕ್ಕೆ ಮಹತ್ವಕೊಟ್ಟವರು. ನಿರಾಶ್ರೀತರಿಗೆ ಆಶ್ರಯದಾತರಾಗಿ, ದೀನದಲಿತರಿಗೆ ದಿಕ್ಕು ದನಿಯಾಗಿ ನೆಲ್ಸನ್ ಮಂಡೆಲಾರಂತೆ ಹಿಂದೂಳಿದ ಜನಸಾಮಾನ್ಯರಿಗಾಗಿ ಬದುಕಿದವರು.

೧೨ನೇ ಶತಮಾನದ ಭಕ್ತಿ-ಜ್ಞಾನ, ವೈರಾಗ್ಯದ ನಿಧಿಯಾಗಿದ್ದ ಅದ್ವಿತೀಯ ಶಂಭುವೆನಿಸಿದ, ಜಗಜ್ಯೋತಿ ಬಸವಣ್ಣನವರಂತೆ ಮೇಲು-ಕೀಳು, ಆದಿ-ಅಂತ್ಯಜ ಬೇಧ ಅಳಿಸಿ ಸಮಾನತೆಯನ್ನು ತರುವಲ್ಲಿ ಯಶಸ್ವಿಯಾಗಿದ್ದಾರೆಂದರೆ ತಪ್ಪಾಗಲಾರದು. ಕಾಯಕಕ್ಕೆ ಮಹತ್ವಕೊಟ್ಟ ಬಸವಣ್ಣನ ಸಿದ್ಧಾಂತವನ್ನು ಕಾರ್ಯರೂಪದಲ್ಲಿ ತಂದ ಆಧುನಿಕ ಬಸವಣ್ಣ "ಮುರಗೋಡ ಮಹಾದೇವಪ್ಪನವರು". ಇದರಿಂದ ಸಾಮಾನ್ಯ ಜನರನ್ನು ಸ್ವಾವಲಂಬಿಗಳನ್ನಾಗಿ ಮಾಡಿದರು.

ಅಲ್ಲದೆ ವಿನೋಬಾ ಭಾವೆಯವರ ಸರ್ವೋದಯ ಒಪ್ಪಿಕೊಂಡು 'ಸರ್ವರಿಗೂ ಸಮಬಾಳು, ಸರ್ವರಿಗೂ ಸಮಪಾಲು' ಎಂದು ಪಾದಯಾತ್ರೆ ನಡೆಸಿದವರು.

ನಮ್ಮ ದೇಶದ ಸಂಸ್ಕೃತಿ, ಒಕ್ಕಲುತನಕ್ಕೆ ಆಧಾರ. ಎತ್ತು, ಎಮ್ಮೆ, ಆಕಳು, ಪ್ರಾಣಿಗಳನ್ನು ಕಟುಕರಿಗೆ ಮಾರುವುದನ್ನು ಪ್ರತಿಬಂಧಿಸಿದಂತ "ಮಹಾದೇವಪ್ಪನವರು" ಮಾನವನಾಗುವುದನ್ನು ಮನಗಾನಿಸಿಕೊಟ್ಟಂತವರು. ಸಾಹಿತ್ಯವು ನಮ್ಮಲ್ಲಿ ಶ್ರವ್ಯ ಮತ್ತು ದೃಶ್ಯ ಮಾಧ್ಯಮಗಳಲ್ಲಿ ದೊರೆಯುತ್ತದೆ. ಇದರಲ್ಲಿ ಮಹಾದೇವಪ್ಪನವರು ಶ್ರವ್ಯವನ್ನು ನಂಬಿದವರು.

ಮಹಾಮಾನವತಾವಾದಿಯಾದ ಮಹಾತ್ಮಾ ಮಹಾದೇವಪ್ಪನವರು ದಿವ್ಯವಾಣಿ ನನ್ನೆದರು ನನ್ನನ್ನು ದ್ವೇಷಿಸುವ ಪರಮ ವೈರಿಯೇ ಬಂದರೂ ಸರಿ. ನನಗೆ ಅವರ ಉದ್ಧಾರದ ಚಿಂತೆ ಎಂದು ಹೇಳುತ್ತಾ. ಇವರ ಎಲ್ಲ ವಿಚಾರಗಳು ಆದರ್ಶವಾದವು ರಾಷ್ಟ್ರಕ್ಕೆ ಸಮಾಜಕ್ಕೆ ಅವರ ಕೊಡುಗೆ ಅಪಾರ ಅನನ್ಯವಾದುದು.



ಶ್ರೀ ಸಮರ್ಥ ಮಾಧವಾನಂದ ಪ್ರಭುಜಿ

ಪ್ರಕಾಶಕರು: A B ಕಣಬೂರ

ಅನುಬಂಧ – 1
ಗ್ರಂಥ ಋಣ

ಕ್ರ.ಸಂ	ಕೃತಿ	ಲೇಖಕರು	ಪ್ರಕಾಶನ	ಪ್ರ. ವರ್ಷ
೧	'ಸನೂತನ' ಸ್ವಾತಂತ್ರ್ಯ ಹೋರಾಟದಲ್ಲಿ ಇಂಚಗೇರಿ ಪಾತ್ರ ಲೇಖನದಿಂದ	ಡಾ॥ ಸರೋಜಿನಿ ಚವಲಾರ	ವಿವೇಕ ಪ್ರಕಾಶನ ಹುಬ್ಬಳ್ಳಿ	೧೯೯೪
೨	ಸರ್ವೋದಯ ಹರಿಕಾರ	ಡಾ॥ ಸರೋಜಿನಿ ಚವಲಾರ	ಶ್ರೀ ಸದ್ಗುರು ಸಮರ್ಥ ಗುರುಪುತ್ರಪ್ಪ ಮಹಾರಾಜರು ಷಷ್ಟ್ಯಬ್ದಿ ಸಮಾರಂಭ ಸ್ವಾಗತ ಸಮಿತಿ	೧೯೯೫
೩	ಮಾಧವ–ಪತ್ರ–ಸುಧಾ	ಡಾ॥ ಶ್ರೀ ಬಸವರಾಜ ಮಹಾಸ್ವಾಮಿಗಳು ಶಿವಾನಂದ ಮಠ, ಕರಿಕಟ್ಟಿ, ತಾ॥ ಸವದತ್ತಿ ಜಿ॥ ಬೆಳಗಾವಿ	ಗಿರೀಶ ಪ್ರಕಾಶನ, ಶ್ರೀಕ್ಷೇತ್ರ ಇಂಚಗೇರಿ ಮಠ, ತಾ॥ ಇಂಡಿ ಜಿ॥ ಬೆಳಗಾವಿ	೧೯೯೨
೪	ಸನಾತನ	ಡಾ॥ ಎಸ್. ಪಿ. ಚವಲಾರ	ವಿವೇಕ ಪ್ರಕಾಶನ ಜಯಪ್ರಕಾಶ ನಗರ, ಹುಬ್ಬಳ್ಳಿ	೧೯೯೩
೫	ಶ್ರೀ ಸ॥ ಸ॥ ಮಾಧವಾನಂದ ಪ್ರಭುಜಿಯವರು ಜೀವನ ಚರಿತ್ರೆಯ	ಮುತ್ತಪ್ಪ ಮಹಾರಾಜ ಖೋಜಾನಟ್ಟಿ	ಗಿರೀಶ ಪ್ರಕಾಶನ, ಇಂಚಗೇರಿಮಠ	೧೯೮೫
೬	ಶ್ರೀ ಸ॥ ಸ॥ ಮಾಧವಾನಂದ ಪ್ರಭುಜಿಯವರ ಜೀವನ ಚರಿತ್ರೆಯ 'ಡೊಳ್ಳಿನ ಪದಗಳು'	ಮುತ್ತಪ್ಪ ಮಹಾರಾಜ ಬೋಜಾನಟ್ಟಿ	ಗಿರೀಶ ಪ್ರಕಾಶನ, ಇಂಚಗೇರಿಯವರಿಂದ	೧೯೯೩
೭	ದೇವವಾಣಿ	ಮಹಾಲಿಂಗ ಮಂಗಿ	ಶ್ರೀಕ್ಷೇತ್ರ ಇಂಚಗೇರಿ ಮಠ	೧೯೮೦
೮	ಮಾಧವ ಜೀವನ ದರ್ಶನ ಭಾಗ–೧	ಮಹಾಲಿಂಗ ಮಂಗಿ	ಶ್ರೀ ಗಿರೀಶ ಪ್ರಕಾಶನ, ಶ್ರೀಕ್ಷೇತ್ರ ಇಂಚಗೇರಿ ಮಠ.	೧೯೮೩

ಕ್ರ.ಸಂ	ಕೃತಿ	ಲೇಖಕರು	ಪ್ರಕಾಶನ	ಪ್ರ. ವರ್ಷ
೯	ಮಾಧವ ಜೀವನ ದರ್ಶನ ಭಾಗ–೨	ಮಹಾಲಿಂಗ ಮಂಗಿ	ಶ್ರೀ ಗಿರೀಶ ಪ್ರಕಾಶನ, ಶ್ರೀಕ್ಷೇತ್ರ ಇಂಚಗೇರಿ ಮಠ.	೧೯೯೫
೧೦	ಗೋವಾ ವಿಮೋಚನೆಯಲ್ಲಿ ಕರ್ನಾಟಕದ ಕ್ರಾಂತಿವೀರರು	ಎಸ್. ಎಂ ತಡಸದಮಠ	ಸಮಾಜ ದರ್ಪಣ ಪ್ರಕಾಶನ, ನರಗುಂದ	೧೯೯೪
೧೧	ಬೆಳಗಾವಿ ಜಿಲ್ಲೆಯ ಸ್ವಾತಂತ್ರ್ಯ ಯೋಧರು	ಡಾ॥ ಎಸ್. ಪಿ. ಚವಲಾರ	–	–

ಅನುಬಂಧ - 2

ಪತ್ರಿಕಾ ವರದಿಗಳು

೧)	ಸಂಯುಕ್ತ ಕರ್ನಾಟಕ	೦೧-೧೦-೧೯೪೨	ವಿಜಾಪುರ-ಜತ್ತ ನಡುವೆ ತಂತಿ ಕಂಬ ಕಿತ್ತಿದ್ದು.
೨)	ಸಂಯುಕ್ತ ಕರ್ನಾಟಕ	೩೦-೧೦-೧೯೪೨	ಕೊಟ್ಟಲಗಿಯಲ್ಲಿ ಪಿಸ್ತೂಲು ತಯಾರಿಸುವ ಕೇಂದ್ರ
೩)	ಸಂಯುಕ್ತ ಕರ್ನಾಟಕ	೦೨-೧೧-೧೯೪೨	ಹುಲಕೋಟಿ ಪೋಲೀಸ್ ಸ್ಟೇಶನ್ ಸುಟ್ಟಿದ್ದು.
೪)	ಕರ್ಮವೀರ	೧೧-೧೨-೧೯೪೪ ೧೫-೧೧-೧೯೪೭೩ ೧೬-೧೦-೧೯೪೪	ಪಕೀರಪ್ಪ ಶಿರಹಟ್ಟಿಮಠ ಮಹಾದೇವಪ್ಪನವರಿಗೆ ಜೈಲಿಗೆ ಹಾಕಿದ್ದು
೫)	ಕರ್ಮವೀರ	೧೮-೧೨-೧೯೪೪	ಇಂಚಗೇರಿ ಪೋಲಿಸ್ ಸ್ಟೇಶನ್ ಸುಟ್ಟಿದ್ದು.
೬)	ಸಂಯುಕ್ತ ಕರ್ನಾಟಕ	೧೫-೧೨-೧೯೪೫	ಜಮಖಂಡಿ ೧೯೪೨ ಆಂದೋಳನದಲ್ಲಿ ಸಾವಳಗಿ ಸ್ಟೇಶನಿದಿಂದ ಆಯುಧ ಅಪಹರಿಸಿದ್ದು.
೭)	ಸಂಯುಕ್ತ ಕರ್ನಾಟಕ	೧೩-೦೪-೧೯೪೩	ಕೊಟ್ಟಲಗಿ ಟಪಾಲಹರಣ
೮)	ಸಂಯುಕ್ತ ಕರ್ನಾಟಕ	೨೮-೦೬-೧೯೫೫	ಗೋವಾ ವಿಮೋಚನೆಗೆ ಸರ್ವ ಪಕ್ಷಗಳ ಸಭೆ-ಲೇಖನ.
೯)	ಸಂಯುಕ್ತ ಕರ್ನಾಟಕ	೧೨-೦೮-೧೯೫೫	ಗೋವಾಮಡಿಯಲ್ಲಿ ಸತ್ಯಾಗ್ರಹಿಗಳು ಲೇಖನ